(ಸದನವು ಮಾಧ್ಯಾಹ್ನ 2–47 ಗಂಟೆಗೆ ಮುಂದೂಡಲ್ಪಟ್ಟು ಪುನ:3–45 ಗಂಟೆಗೆ ಸೇರಲು ನಿಶ್ಚಯಿಸಿತು.)

ಸದನವು ಮತ್ತೆ ಸಂಜೆ 4.05 ಗಂಟೆಗೆ ಸಮಾವೇಶಗೊಂಡಿತು

(ಅಧ್ಯಕ್ಷರು ಶ್ರೀ ಕೃಷ್ಣ ರವರು ಅಧ್ಯಕ್ಷ ಪೀಠವನ್ನು ಅಲಂಕರಿಸಿದ್ದರು)

3. ನಿಲುವಳಿ ಸೂಚನೆಗೆ ಅನುಮತಿ ಕೋರಿಕೆ:

ವಿಷಯ: ಉತ್ತರ ಕನ್ನಡ ಜಿಲ್ಲೆ ಭಟ್ಕಳದಲ್ಲಿ ಮತೀಯ ಗಲಭೆಯಿಂದ ಪ್ರಾಣಹಾನಿ ಉಂಟಾಗಿ ಸೆಕ್ಷನ್ 144 ಜಾರಿಯಾಗಿರುವುದು ಮತ್ತು ಘಟನೆಯ ಬಗ್ಗೆ ಸಿ.ಬಿ.ಐ ತನಿಖೆಗೆ ಒತ್ತಾಯ.

ಅಧ್ಯಕ್ಷರು : ದೇಶಪಾಂಡೆಯವರೇ, ಪ್ರಶ್ನೋತ್ತರ ಆದಮೇಲೆ ನಿಲುವಳಿ ಸೂಚನೆಯನ್ನು ತೆಗೆದುಕೊಳ್ಳಬಹುದೇ?

ಶ್ರೀ ಆರ್.ವಿ. ದೇಶಪಾಂಡೆ (ಹಳಿಯಾಳ): ಮಾನ್ಯ ಅಧ್ಯಕ್ಷರೇ, ನಾನು ಅಡ್ಜರ್ನ್‌ಮೆಂಟ್ ಮೋಷನ್ ಅನ್ನು ಮೂವ್ ಮಾಡಿದ್ದೇನೆ.

ಶ್ರೀ ಸಿ.ಟಿ.ರವಿ: ಪ್ರಶ್ನೆಗಳು ಸ್ಟಾರ್ ಆಗುವುದೇ ಕಷ್ಟ, ಪ್ರಶ್ನೋತ್ತರಗಳನ್ನು ಮುಂದೂಡುತ್ತಲೇ ಬರಲಾಗಿದೆ ಹಾಗಾಗಿ ಮೊದಲು ಪ್ರಶ್ನೋತ್ತರ ಆದಮೇಲೆ ಅಡ್ಜರ್ನ್‌ಮೆಂಟ್ ಮೋಷನ್ ತೆಗೆದುಕೊಳ್ಳಬಹುದು.

ಶ್ರೀ ಆರ್.ವಿ.ದೇಶಪಾಂಡೆ: ಪ್ರಶ್ನೋತ್ತರ ಮುಂದೂಡುವ ಇಚ್ಛೆ ನನಗಿಲ್ಲ. ಪ್ರಶ್ನೋತ್ತರ ಆಗಲೇಬೇಕು, ಆದರೆ ಮುಂಜಾನೆ ತಮಗೆ ಗೊತ್ತಿರುವಂತೆ ಕಾರ್ಯಕಲಾಪದಲ್ಲಿ ಆ ಸಮಸ್ಯೆಯನ್ನು ಬಗೆಹರಿಸಿದ್ದೇವೆ. ಪ್ರಶ್ನೋತ್ತರ ಕಾಲವನ್ನು ಬದಿಗಿಟ್ಟು ಈಗ ಒಂದು ನಿಲುವಳಿ ಸೂಚನೆಗೆ ಅವಕಾಶ ಮಾಡಿಕೊಡಬೇಕೆಂದು ತಮ್ಮಲ್ಲಿ ಮನವಿ ಮಾಡಿಕೊಳ್ಳುತ್ತೇವೆ. ಏಕೆಂದರೆ ಉತ್ತರ ಕನ್ನಡ ಜಿಲ್ಲೆಯ ಭಟ್ಕಳದಲ್ಲಿ ಸಾಕಷ್ಟು ಟೆನ್ಷನ್ ಇದೆ, ಸೆಕ್ಷನ್ 144 ಜಾರಿಯಾಗಿದೆ. ಕೆಲವು ಜನರ ಪ್ರಾಣಹಾನಿಯಾಗಿದೆ. ಹಾಗಾಗಿ ಇಂಥ ಸಂದರ್ಭದಲ್ಲಿ ಕೆಲವು ವಿಚಾರಗಳನ್ನು ಪ್ರಸ್ತಾಪ ಮಾಡಲಿಕ್ಕೆ ತಾವು ಅವಕಾಶ ಕೊಟ್ಟರೆ ನಾನು ಪ್ರಸ್ತಾಪ ಮಾಡುತ್ತೇನೆ.

ಅಧ್ಯಕ್ಷರು: ಆಯಿತು, ಮಾತನಾಡಿ.

ಶ್ರೀ ಗೋವಿಂದ ಎಂ.ಕಾರಜೋಳ: ಸನ್ಮಾನ್ಯ ಅಧ್ಯಕ್ಷರೇ, ನಿಲುವಳಿ ಸೂಚನೆ ತೆಗೆದುಕೊಳ್ಳುವ ಮುಂಚೆ ಪ್ರಶ್ನೋತ್ತರವನ್ನು ಆರಂಭ ಮಾಡಿ ಸಂಬಂಧಪಟ್ಟವರಿಂದ ಮಾಹಿತಿಯನ್ನು ಪಡೆದುಕೊಂಡು ನಂತರ ನಿಲುವಳಿ ಸೂಚನೆಯನ್ನು ತೆಗೆದುಕೊಳ್ಳಬೇಕು.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ಅಡ್ಜರ್ನ್‌ಮೆಂಟ್ ಮೋಷನ್ ಮೂವ್ ಮಾಡಿದ ನಂತರ ಬೇರೆ ಯಾವುದೇ ಅಜೆಂಡಾವನ್ನು ತೆಗೆದುಕೊಳ್ಳಲಿಕ್ಕೆ ಬರುವುದಿಲ್ಲ.

ಶ್ರೀ ಗೋವಿಂದ ಎಂ. ಕಾರಜೋಳ: ಈಗ ನಿಲುವಳಿ ಸೂಚನೆಯನ್ನು ಮೂವ್ ಮಾಡಲಿಕ್ಕೆ ಅವಕಾಶ ಮಾಡಿಕೊಡಬಾರದೆಂದು ನಾನು ಹೇಳಿದೆ. ಪ್ರಶ್ನೋತ್ತರಗಳು ಮುಗಿದ ಮೇಲೆ ನಿಲುವಳಿ ಸೂಚನೆಯನ್ನು ತೆಗೆದುಕೊಳ್ಳಲಿ, ನಾವು ಅದಕ್ಕೆ ಸರ್ಕಾರದಿಂದ ಹೇಳಿಕೆಯನ್ನು ಕೊಡುತ್ತೇವೆ.

ಶ್ರೀ ಆರ್. ವಿ.ದೇಶಪಾಂಡೆ: ಈಗ ನಾನು ಮಾತನಾಡುವಾಗ ಹೋಮ್ ಮಿನಿಸ್ಟರ್ ಹಾಗೂ ಸಿ.ಎಂ. ಇರಬೇಕಾಗಿತ್ತು. ಆದರೆ ಸ್ಪೀಕರ್, ಅವರು ಡೆಲ್ಲಿಗೆ ಹೋಗಿದ್ದಾರೆಂದು ಹೇಳಿದ್ದಾರೆ, ಓ.ಕೆ. ನಾನು ಬೇರೆ ಸಚಿವರು ನೋಟ್ ಮಾಡಿಕೊಳ್ಳಬಹುದೆಂದು ಹೇಳಿದ್ದೇನೆ. ಅವರು ಈಗ ಮಾತನಾಡಲಿಕ್ಕೆ ಅನುಮತಿಯನ್ನು ಕೊಟ್ಟಿದ್ದಾರೆ. ಇದು ಸೀರಿಯಸ್ ಮ್ಯಾಟರ್ ಆಗಿದೆ, ಇಲ್ಲೇನು ನಾನು ವ್ಯಕ್ತಿಗತವಾಗಿ ಗದಾಪ್ರಹಾರ ಮಾಡಲಿಕ್ಕೆ ಕುಳಿತಿಲ್ಲ. ಭಟ್ಕಳದಲ್ಲಿ ಏನಾಗಿದೆ, ಅದನ್ನು ಹೇಳಲಿಕ್ಕೆ ಹೊರಟಿದ್ದೇನೆ. ಅಲ್ಲಿನ ಜನರ ಬವಣೆ ಇಲ್ಲಿ ಗೊತ್ತಾಗಬೇಕು ಅಷ್ಟೇ. ಮಾನ್ಯ ಅಧ್ಯಕ್ಷರೇ, ಈ ಉತ್ತರ ಕನ್ನಡ ಜಿಲ್ಲೆಯ ಭಟ್ಕಳದ ನಗರಸಭೆಯ ಕುಡಿಯುವ ನೀರಿನ ಸಂಪು ಕಟ್ಟಲು ಉದ್ದೇಶಿಸಿರುವ ಪ್ರದೇಶದಲ್ಲಿ ಏನಾಗಿದೆಯಂದರೆ ಅಲ್ಲೊಂದು ನಾಗಜಟಿಕಾ ದೇವರ ವಿಗ್ರಹಗಳ ನಾಪತ್ತೆಯ ವಿಚಾರದಲ್ಲಿ ದಿನಾಂಕ 20–3–2006 ರಂದು ಮತೀಯ ಗಲಭೆ ಪ್ರಾರಂಭವಾಗಿರುವುದರಿಂದ ಅದರ ಪರಿಣಾಮವಾಗಿ ದಿನಾಂಕ 20.3.2006 ರಂದು ಒಬ್ಬ ತನ್ನ ಪ್ರಾಣವನ್ನು ಕಳೆದುಕೊಂಡಿದ್ದಾನೆ. ಅದೇ ಪ್ರಕಾರ ಬಹಳ ಜನರಿಗೆ ಗಾಯಗಳಾಗಿವೆ. ಆಸ್ತಿಪಾಸ್ತಿ ಲೂಟಿಯಾಗಿದೆ, ಎರಡು ಮೋಟಾರು ಸೈಕಲ್ಲುಗಳು, ಒಂದು ರಿಕ್ಷಾ ಸುಟ್ಟಿದೆ, ಒಂದು ಮನೆಯನ್ನು ಸುಡುವ ಪ್ರಯತ್ನ ನಡೆದಿದೆ. ಮುಖ್ಯವಾಗಿ ಮಾನ್ಯ ಅಧ್ಯಕ್ಷರೇ, ನಮ್ಮ ಉತ್ತರ ಕನ್ನಡ ಜಿಲ್ಲೆಯ ಜನ ಸೌಹಾರ್ದತೆ, ಶಾಂತಿ, ಕಾನೂನು ಸುವ್ಯವಸ್ಥೆಯಲ್ಲಿ ವಿಶ್ವಾಸವಿಟ್ಟ ಜನ. ಬಹುತೇಕ ಇಲ್ಲಿ ಗಲಭೆಯಾಗಿ, ಗಲಾಟೆಯಾಗುವುದು, ಕಾನೂನನ್ನು ಕೈಗೆ ತೆಗೆದುಕೊಳ್ಳಲಿಕ್ಕೆ ಇಲ್ಲಿ ಅವಕಾಶವಿಲ್ಲ, ಆದರೆ ದುರ್ದೈವದಿಂದ ಭಟ್ಕಳದಲ್ಲಿ ಇಂಥ ಘಟನೆ 1993ನೇ ಇಸವಿಯಲ್ಲೇ ಆಯಿತು. ಆ ಸಮಯದಲ್ಲಿ ನಾನು ವಿರೋಧ ಪಕ್ಷದ ನಾಯಕನಾಗಿದ್ದೆನು. ಆ ಸಮಯದಲ್ಲಿಯೂ ಸಹ ಬಹಳಷ್ಟು ಗಲಾಟೆ, ಗಲಭೆಗಳಿಂದಾಗಿ 18 ಜನರ ಕೊಲೆಯಾಯಿತು. ಆಗ ಆಡಲಿತ ಪಕ್ಷ, ವಿರೋಧ ಪಕ್ಷದವರೆಲ್ಲರೂ ಕೂಡಿ ಶಾಂತಿಯ ವಾತಾವರಣವನ್ನು ನಿರ್ಮಾಣ ಮಾಡಲಿಕ್ಕೆ ಪ್ರಯತ್ನವಾದ ನಂತರ ಸುಮಾರು 9–10 ತಿಂಗಳ ತರುವಾಯ ನಾರ್ಮಲ್ ಪೊಸಿಷನ್‌ಗೆ ಬಂತು. ಅದರ ನಂತರ ದುರ್ದೈವದಿಂದ 1996ನೇ ಇಸವಿಯಲ್ಲಿ ನಮ್ಮ ಶಾಸಕ ಸ್ನೇಹಿತರಾದಂಥ ಶ್ರೀ ಚಿತ್ತರಂಜನ್‌ರವರ ಕೊಲೆಯಾಯಿತು. 2004ನೇ ಏಪ್ರಿಲ್–ಮೇ ತಿಂಗಳಲ್ಲಿ ಒಬ್ಬ ತಿಮ್ಮಪ್ಪನಾಯಕರ ಕೊಲೆಯಾಯಿತು. ಆ ಸಮಯದಲ್ಲಿ

ಕಮ್ಯುನಲ್ ಟೆನ್‌ಷನ್ಸ್ ಆಗಲಿಲ್ಲ. 1993ನೇ ಇಸವಿಯಿಂದ ಪುನಃ ಕಮ್ಯುನಲ್ ಟೆನ್‌ಷನ್ಸ್ 29ಕ್ಕೆ ಪ್ರಾರಂಭವಾಗಿದ್ದು ಹಾಗಾದರೆ ಸರ್ಕಾರ ಇಲ್ಲೇಕೆ ವಿಫಲವಾಗಿದೆ? ಸರ್ಕಾರದ ಆಡಳಿತ ವಿಫಲವಾಗಿರುವುದೇ? ನಾರ್ಮಲ್‌ಗೆ ತರಲಿಕ್ಕೆ ಸರ್ಕಾರದಿಂದ ಏನು ಪ್ರಯತ್ನ ನಡೆದಿದೆ? ಇದರಲ್ಲಿ ಕೆಲವು ವಿಚಾರಗಳನ್ನು ನಾನು ಪ್ರಸ್ತಾಪ ಮಾಡಲಿಕ್ಕೆ ಬಯಸುತ್ತೇನೆ. ನನ್ನ ಕೆಲವು ಸ್ನೇಹಿತರು ಆ ವಿಚಾರವನ್ನು ಪ್ರಸ್ತಾಪ ಮಾಡಬಹುದು. ಅದಕ್ಕೆ ಸರ್ಕಾರದಿಂದಲೂ ಸಹ ಸಮರ್ಪಕವಾದ ಉತ್ತರ ಬೇಕಾಗಿದೆ. ಮುಖ್ಯವಾಗಿ ಈ ಘಟನೆಗಳು, ಕಾನೂನನ್ನು ಕೈಗೆ ತೆಗೆದುಕೊಂಡು ಇಂಥ ಅತ್ಯಾಚಾರ, ಅನ್ಯಾಯ ಇಂಥ ಹಿಂಸಾಕೃತ್ಯಗಳನು ಹಿಂದೂಗಳಾಗಲಿ, ಮುಸ್ಲಿಂರಾಗಲಿ ಮಾಡುವುದಿಲ್ಲ, ಮೊದಲು ಇದನ್ನು ತಾವು ತಿಳಿದುಕೊಳ್ಳಬೇಕು, ಇಂಥ ಕೃತ್ಯವೆಸಗುವ ಜಾತಿಯೇ ಬೇರೆ ಇದೆ. ಆ ಜನರ ವಿರುದ್ಧ ನಾವು ಕಠೋರ ಕ್ರಮವನ್ನು ತೆಗೆದುಕೊಳ್ಳಬೇಕಾಗುತ್ತದೆ. ಆ ಜನರ ವಿರುದ್ಧ ನೀವು ಕಠೋರ ಕ್ರಮ ತೆಗೆದುಕೊಂಡಿಲ್ಲವೆಂದರೆ ಇಂಥ ಪರಿಸ್ಥಿತಿ ನಿರ್ಮಾಣವಾಗುತ್ತದೆ. ಮಾನ್ಯ ಅಧ್ಯಕ್ಷರೆ, ನಮ್ಮ ಭಟ್ಕಳದ ಒಂದು ಪಟ್ಟಣದಲ್ಲಿ ಮಗದೂರು ಕಾಲೋನಿಯೆಂದು ಇದೆ. ಬಹಳ ವರ್ಷಗಳಿಂದ ಅಲ್ಲಿ ಕುಡಿಯುವ ನೀರಿನ ಅಭಾವವಿದೆ, ಹಾಗಾಗಿ ಅಲ್ಲಿ ಒಂದು ಎ.ಡಿ. ಬಿ. ಯೋಜನೆಯಲ್ಲಿ ಒಂದು ಕುಡಿಯುವ ನೀರಿನ ಯೋಜನೆ ಮಂಜೂರಾಗಿದೆ ಮತ್ತು ಬಂದರರೋಡಿನಲ್ಲಿ ಮಗದೂರು ಕಾಲೋನಿಯಲ್ಲಿ ಈಗಾಗಲೇ ಕುಡಿಯುವ ನೀರಿನ ಸಂಪು ಅಂದರೆ ವಾಟರ್ ಸ್ಟೋರೇಜ್ ಕೆಲಸ ಮುಕ್ತಾಯಕ್ಕೆ ಬಂದಿದೆ. ಜಿಲ್ಲಾಧಿಕಾರಿಗಳು ಅಲ್ಲಿ ಈ ಕಂದಾಯ ಹಾಡಿಲ್ಯಾಂಡ್ ಎಂದು 10 ಗುಂಟೆ ಜಾಗವನ್ನು ಅದಕ್ಕೆ ಮಂಜೂರು ಮಾಡಿದ್ದಾರೆ. ಸಾಮಾನ್ಯವಾಗಿ ಸಂಪುಗಳ ಸಮೀಪ ಗುಡಿಗಳಿರುವುದಿಲ್ಲ. ಆದರೆ ಆ ಸಂಪು ಸಮೀಪವೇ ನಾಗಜಟಿಕಾ ಎಂದು ಅವರು ಅಲ್ಲಿ ಕರೆಯುತ್ತಾರೆ. ಅಲ್ಲಿ ನಾಗದೇವರ ಕಲ್ಲಿನ ಮೂರ್ತಿಯಿರುತ್ತದೆ, ಅಲ್ಲಿನ ಜನರು ಹಲವಾರು ವರ್ಷದಿಂದ ಅದಕ್ಕೆ ಪೂಜೆ ಮಾಡುತ್ತಾ ಬಂದಿರುತ್ತಾರೆ. ಆ ಪ್ರದೇಶದಲ್ಲಿ ಈ ಸಂಪು ಕಟ್ಟಿ ಆಗಿದೆ, ಆ ಸಂಪಿಗೆ ಜಾಗವು ಸಹ ಮಂಜೂರಾಗಿದ್ದು ಅಲ್ಲೇ ಫೆನ್ಸಿಂಗ್ ಮಾಡಬೇಕಾಗಿದೆ. ಹಾಗಾಗಿ ಮಾರ್ಚ್ 20ನೇ ತಾರೀಖಿನಿಂದ ಅಲ್ಲಿ ಸಮಸ್ಯೆಗಳು ಆರಂಭವಾಗಿದ್ದವು. ಮುನಿಸಿಪಾಲಿಟಿಯವರ ಚೀಫ್ ಆಪೀಸರ್, ಎ.ಡಿ.ಬಿ.ಯ ಅಧಿಕಾರಿಗಳು ಅಲ್ಲಿಗೆ ಹೋದಾಗ ಮಾತಿನ ಚಕಮಕಿಯಾಗಿದೆ, ನಮ್ಮ ಕೆಲವು ಆರ್ಗನೈಸೇಷನ್ಸ್ ಮತ್ತು ಆ ಅಧಿಕಾರಿಗಳಲ್ಲಿ ಮಾತಿನ ಚಕಮಕಿಯಾಗಿದೆ. ಅಲ್ಲಿ ಕಾಂಪೌಂಡ್ ಕಟ್ಟಬಾರದು ಎಂದು ಹೇಳುತ್ತಾರೆ, ನಾವು ಗುಡಿ ಕಟ್ಟಿಕೊಳ್ಳುತ್ತೇವೆ. ಆ ಅಧಿಕಾರಿಗಳು ಅದಕ್ಕೆ ನಮಗೆ ಜಾಗ ಮಂಜೂರಾಗಿದೆ, ನಾವು ಸರ್ವೆ ಮಾಡುತ್ತೇವೆ ಎಂದು ಹೇಳಿದ್ದಾರೆ. ಅಂದರೆ ಆಡಳಿತದಲ್ಲಿರುವ ಜನಗಳಿಗೆ ಸರ್ಕಾರಕ್ಕೆ ಅಲ್ಲಿ ಘರ್ಷಣೆ ನಡೆಯುತ್ತಿರುವ ಬಗ್ಗೆ

ಗೊತ್ತಿತ್ತು. ತಕ್ಷಣ ಸ್ಥಳೀಯ ಅಧಿಕಾರಿಗಳು ಕ್ರಮವನ್ನು ತೆಗೆದುಕೊಳ್ಳಬೇಕಾಗಿತ್ತು. ಮುಂಜಾಗ್ರತಾ ಕ್ರಮಗಳನ್ನು ತೆಗೆದುಕೊಂಡಿದ್ದರೆ ಬಹುತೇಕ ಇಂತಹ ಅನಾಹುತಗಳಾಗುತ್ತಿರಲಿಲ್ಲ. ಯಾವುದೇ ಮುಂಜಾಗ್ರತಾ ಕ್ರಮಗಳನ್ನು ಇವರು ತೆಗೆದುಕೊಳ್ಳಲಿಲ್ಲ. ಅದರ ಪ್ರಕಾರ ನಮ್ಮ ಇಂಟೆಲಿಜೆನ್ಸಿ ಏನು ಮಾಡಿತು? ಅವರಿಗಾದರೂ ಈ ಜಾಗದ ಬಗ್ಗೆ ಡಿಸ್‌ಪ್ಯೂಟ್ ಇದೆ ಎಂಬುದು ತಿಳಿದಿರಬೇಕಿತ್ತು. ಭಟ್ಕಳ್ ಸೆನ್ಸಿಟಿವ್ ಏರಿಯಾ ಆಗಿದೆ. ಇಲ್ಲಿ ಕೋಮುವಾರು ಗಲಭೆಯಾಗುವ ಸಂಭವವಿದೆ. ಇಂಥಾ ಪರಿಸ್ಥಿತಿಯಲ್ಲಿ ಮುಂಜಾಗ್ರತಾ ಕ್ರಮಗಳನ್ನು ತೆಗೆದುಕೊಳ್ಳಬೇಕೆಂಬ ಸೂಚನೆ ಕಂದಾಯ ಇಲಾಖೆಯಲ್ಲಿಯೂ ಬರಬೇಕಾಗಿತ್ತು, ಪೊಲೀಸ್ ಇಲಾಖೆಯಲ್ಲಿಯೂ ಬರಬೇಕಾಗಿತ್ತು. ಅದಕ್ಕೆ ತಕ್ಕ ಕ್ರಮ ಕೈಗೊಳ್ಳಬೇಕಾಗಿತ್ತು. ಆ ರೀತಿ ಕ್ರಮ ಕೈಗೊಂಡಿದ್ದರೆ. ಇವತ್ತಿನ ಅನಾಹುತ ತಪ್ಪಿಸಲಿಕ್ಕೆ ಸಾಧ್ಯತೆಯಿತ್ತು. ಆದರೆ ಸರ್ಕಾರದಿಂದ ಯಾವುದೇ ಕ್ರಮವಾಗಿಲ್ಲ, ಅದಾದ ನಂತರ ಮುಖ್ಯವಾಗಿ ಈ ಸಂಪು ಕಟ್ಟಿದ ಜಾಗ ಭಟ್ಕಳದ ಸುಸ್‌ಗದ್ದೆ ಸರ್ವೆ ನಂ 418. ಮತ್ತು ಇಲ್ಲಿ ಈ ಸಮಸ್ಯೆ, ಅಂದರೆ ಸಂಪು ಪಕ್ಕದಲ್ಲಿಯೇ ಈ ನಾಗಜಟಿಕಾ ಎಂಬ ಒಂದು ಕಲ್ಲು ಇದೆ, ಮತ್ತು ಬಹಳ ಪುರಾತನ ಕಾಲದಿಂದ ಒರಗಲ ಮನೆಯ ಒಂದು ಜನ ಅಲ್ಲಿ ಕೂಳು ದೇವರು ಎಂದು ಅಲ್ಲಿ ಪ್ರಾರ್ಥನೆ, ಪೂಜೆ ಮಾಡುತ್ತಿದ್ದುದ್ದು ನಿಜ. ಆದರೆ ಅಲ್ಲಿ ಗುಡಿಯಿಲ್ಲ. ನಾನು ಮೊನ್ನೆ ಉದಯ ಟಿ.ವಿಯಲ್ಲಿ ನೊಡಿದೆ. ಇಲ್ಲ, ಇಲ್ಲ, ಅಲ್ಲಿ ಗುಡಿ ಒಡೆದುಬಿಟ್ಟಿರು ಹಾಗಾಗಿ ಈ ಸಮಸ್ಯೆಯಾಯಿತು ಎಂದು ನಾನು ತಮ್ಮ ಮೂಲಕ ಸರ್ಕಾರಕ್ಕೆ ವಿನಂತಿ ಮಾಡುತ್ತೇನೆ, ಇಂಥ ಸ್ಟೇಟ್‌ಮೆಂಟ್ ಮಾಡಬಾರದು, ಅಲ್ಲಿ ವಿಗ್ರಹಗಳಿದ್ದುದ್ದು ನಿಜ ಆದರೆ ಅಲ್ಲಿ ಟೆಂಪಲ್ ಇರಲಿಲ್ಲ, ಇದನ್ನು ನಾವು ತಿಳಿದುಕೊಳ್ಳಬೇಕು, ಟೆಂಪಲ್ ಕಟ್ಟಬೇಕು ಎನ್ನುವ ಮನಸ್ಸು ಅವರಲ್ಲಿತ್ತು. ನಾನು ಆಗಲೇ ಹೇಳಿದ ಹಾಗೆ ಈ ಸಮಸ್ಯೆ ಮಾರ್ಚ್ 20ರಂದು ಆರಂಭವಾಗಿದೆ. ಸ್ಥಳಕ್ಕೆ ಚೀಫ್ ಆಫೀಸರ್, ಎ.ಡಿ.ಬಿ. ಅಧಿಕಾರಿಗಳು ಹೋಗಿದ್ದಾರೆ. ಕೆಲವು ನಮ್ಮ ಹಿಂದೂ ಜಾಗರಣಾ ಸಮಿತಿ ಸ್ನೇಹಿತರು ಅಲ್ಲಿ ಹೋಗಿ ನಾವು ಇಲ್ಲಿ ಗುಡಿ ಕಟ್ಟುವುದಾಗಿ ಹೇಳಿದ್ದಾರೆ. ಆಗ ಮಾತಿನ ಚಕಮಕಿಯಾಗಿದೆ. ಇದೆಲ್ಲಾ ಗೊತ್ತಿರುವ ವಿಚಾರಗಳೇ. ನಮ್ಮ ಕಡೆ ಗುಡಿ ಕಟ್ಟುವುದು ಲ್ಯಾಟರೈಟ್ ಕಲ್ಲುಗಳಿಂದ, ಚಿರೇಕಲ್ಲುಗಳನ್ನು ಅಲ್ಲಿ ದಾಸ್ತಾನು ಮಾಡಿದ್ದಾರೆ. ಅವರು ಇಂಟೆನ್ಷನಲ್ಲಿ ಯಾವುದೇ ತಪ್ಪು ಮಾಡುವುದಿಲ್ಲ, ನಿಜವಾಗಿ ಹೇಳಬೇಕಾದರೆ ಆ ಸಂಪು ಏರಿಯಾ, ಆ ಜಟಕಾ ದೇವರು ಅಲ್ಲಿ ಸಮೀಪವಿದ್ದರೂ ಸಹಿತ ಎರಡೂ ಕಡೆ ಕಾಂಪೌಂಡ್ ಕಟ್ಟಲಿಕ್ಕೆ ಏನೂ ತೊಂದರೆಯಿಲ್ಲ. ಫೆನ್ಸಿಂಗ್ ಮಾಡಲಿಕ್ಕೂ ಸಹ ಏನೂ ತೊಂದರೆಯಿಲ್ಲ, ಸ್ವಲ್ಪ ಜವಾಬ್ದಾರಿಯಿಂದ, ಯಾರಾದರೂ ಮಧ್ಯಸ್ಥಿಕೆ ಮಾಡಿದ್ದರೆ ಈ ರೀತಿಯ ಯಾವುದೇ ಘಟನೆಗಳಾಗುವುದಕ್ಕೆ ಸಾಧ್ಯತೆಯಿರುತ್ತಿರಲಿಲ್ಲ. ಅವರಿಗೂ

ತಮ್ಮ ಫೆನ್ಸಿಂಗ್ ಮಾಡಲಿಕ್ಕೆ ಸಾಧ್ಯತೆಯಿತ್ತು. ಆದರೆ ಇಲ್ಲಿ ಸರ್ಕಾರದಿಂದ ಬಹಳ ದೊಡ್ಡ ಲೋಪವಾಗಿದೆ. ಈಗ ಮುಖ್ಯವಾಗಿ 15.3.2006ಕ್ಕೆ ಚೀಫ್ ಆಫೀಸರ್, ಮುನಿಸಿಪಾಲಿಟಿಯವರು ತಹಸೀಲ್ದಾರ್‌ರವರಿಗೆ ಇಲ್ಲಿರುವ ಸಮಸ್ಯೆಯ ಬಗ್ಗೆ ಇಲ್ಲಿ ಗಲಭೆಯಾಗುವ ಸಂಭವವಿದೆಯೆಂಬ ಬಗ್ಗೆ ಇಂಟಿಮೇಟ್ ಮಾಡುತ್ತಾರೆ. ಅದರ ನಂತರ 27ನೇ ತಾರೀಕು ಮಾರ್ಚ್‌ನಲ್ಲಿ ಅಲ್ಲಿಗೆ ತಹಸೀಲ್ದಾರರು, ಎ.ಸಿ.., ಸರ್ವೇಯರ್, ಎ.ಡಿ.ಬಿ. ಪ್ರಾಜೆಕ್ಟ್ ಆಫೀಸರ್ಸ್ ಹೋಗಿ ಅಲ್ಲಿ ಸರ್ವೇ ಮೆಷರ್‌ಮೆಂಟ್ ಕೂಡ ಮಾಡುತ್ತಾರೆ. ಆ ಮೆಷರ್‌ಮೆಂಟ್‌ನಲ್ಲಿ ಮುನಿಸಿಪಾಲಿಟಿಗೆ ಮಂಜೂರಾಗಿದ್ದು 10 ಗಂಟೆ ಮಾತ್ರ. ಆದರೆ ಸ್ವಲ್ಪ ಹೆಚ್ಚಿನ ಏರಿಯಾದಲ್ಲಿ ಅವರು ಫೆನ್ಸಿಂಗ್ ಮಾಡಲಿಕ್ಕೆ ಪ್ರಯತ್ನಿಸಿರುವುದು ಗಮನಕ್ಕೆ ಬರುತ್ತದೆ. ಇದನ್ನು ತಹಸೀಲ್ದಾರ್ ಪುನಃ ಅಸಿಸ್ಟೆಂಟ್ ಕಮಿಷನರ್‌ಗೆ ಈ ರೀತಿಯ ಪರಿಸ್ಥಿತಿ ಇಲ್ಲಿದೆಯೆಂದು ತೋರಿಸುತ್ತಾರೆ. ಆಗ 22ನೇ ದಿನಾಂಕ ಮುಂಜಾನೆ ಪುನಃ ಪಿ.ಎಸ್.ಐ. ಭಟ್ಕಳ್ ತಕ್ಷಣ ತಿಳಿಸುತ್ತಾರೆ. ಅಲ್ಲಿ ಎಕ್ಸವೇಷನ್ ನಡೆಯುತ್ತಿದೆ. ಕೋಮುವಾರು ಗಲಭೆಯಾಗುವ ಸಂಭವವಿದೆಯೆಂದು ಭಟ್ಕಳ್‌ನ ಪಿ.ಎಸ್.ಐ. ತಹಸೀಲ್ದಾರ್‌ಗೆ ತಿಳಿಸುತ್ತಾರೆ, ಪುನಃ ಎ.ಸಿ., ತಹಸೀಲ್ದಾರ್‌ರವರು 28ನೇ ತಾರೀಕಿಗೆ ಸ್ಪಾಟ್ ವಿಸಿಟ್ ಮಾಡುತ್ತಾರೆ. ಸ್ಪಾಟ್ ವಿಸಿಟ್ ಮಾಡಿ ಅಲ್ಲಿ ಸಂಬಂಧಪಟ್ಟ ಜನರನ್ನು ಕರೆಸಿ, ಅವರು ಮುಂಜಾನೆ 8.30 ಗಂಟೆಗೆ ಸ್ಪಾಟ್‌ಗೆ ಹೋಗಿ ಸಂಬಂಧಪಟ್ಟ ಹಿಂದೂ ಜಾಗರಣಾ ವೇದಿಕೆಯಿರಬಹದು, ಮುನಿಸಿಪಾಲಿಟಿಯಿರಬಹುದು, ಅವರನ್ನೆಲ್ಲಾ ಕರೆಸಿ ಅವರಿಗೆ ಅಡ್ವೈಸ್ ಮಾಡುತ್ತಾರೆ. ಈ ಸಮಸ್ಯೆಯನ್ನು ನಾವು ಬಗೆಹರಿಸುತ್ತೇವೆ, 31ನೇ ಮಾರ್ಚ್‌ವರೆಗೆ ದಯಮಾಡಿ ಎಲ್ಲರೂ ಸಹಕರಿಸಿ, ಸ್ಟೇಟಸ್‌ಕೊ ಮೇಂಟೇನ್ ಮಾಡಿ, ಇಲ್ಲಿ ಯಾವುದೇ ಆತುರದ ಕ್ರಮ ತೆಗೆದುಕೊಳ್ಳಬಾರದೆಂದು ಎಲ್ಲರಿಗೂ 18-03-2006ರ ಮುಂಜಾನೆ ಅಸಿಸ್ಟೆಂಟ್ ಕಮಿಷನರ್, ತಹಸೀಲ್ದಾರರವರು ಸಂಬಂಧಪಟ್ಟವರನ್ನು ಕರೆಸಿ ಹೇಳುತ್ತಾರೆ. ಇಷ್ಟೆಲ್ಲಾ ಆದಾಗ ಮಾನ್ಯ ಉಪಮುಖ್ಯಮಂತ್ರಿಗಳೇ, ಅಧಿಕಾರಿಗಳ ಜವಾಬ್ದಾರಿ ಇದೆ, ತಹಸೀಲ್ದಾರ್ ಹೋಗುತ್ತಾರೆ. ಎ.ಸಿ. ಹೋಗುತ್ತಾರೆ. ಪಿ.ಎಸ್.ಐ. ಹೋಗುತ್ತಾರೆ, ಎ.ಸಿ. ಹೋಗುತ್ತಾರೆ. ಪಿ.ಎಸ್.ಐ. ಹೋಗುತ್ತಾರೆ, 31-03-2006ಕ್ಕೆ ನಾವು ಸಮಸ್ಯೆ ಬಗೆಹರಿಸುತ್ತೇವೆಂದು ಹೇಳುತ್ತಾರೆ.

ಅಲ್ಲಿ ಈ ನಾಗ ಜಟಕ ದೇವರ ಒಂದು ಮೂರ್ತಿ ಇದೆ. ವಿಗ್ರಹಗಳಿವೆ, ಅಲ್ಲಿ ಸಮಸ್ಯೆಗಳಿವೆ, ಮತ್ತೆ ಅವರದ್ದು ಸಂಪ್ ಇದೆ, ಅಲ್ಲಿ ಒಂದು ಸೆಕ್ಯೂರಿಟಿ ಹಾಕಬೇಕೆನ್ನುವ ಕಾಮನ್‌ಸೆನ್ಸ್ ಗೊತ್ತಾಗಬೇಕಾಗಿತ್ತು, ಅಲ್ಲಿ ಸೆಕ್ಯೂರಿಟಿ ಹಾಕುವುದಿಲ್ಲ, ಪೋಲಿಸರಿಲ್ಲ, ಸೆಕ್ಯೂರಿಟಿ ಇಲ್ಲ, ಏನೂ ಇಲ್ಲ. ಮುಂದೆ 29 ಮುಂಜಾನೆ, ಪಿಎಸ್‌ಐ, ತಹಸೀಲ್ದಾರ್ ಕೂಡ ರಿಪೋರ್ಟ್ ಮಾಡುತ್ತಾರೆ. 22ನೇ ತಾರೀಖು

ರಿಪೋರ್ಟ್ ಮಾಡುತ್ತಾರೆ. ರಾತ್ರಿ ವಿಗ್ರಹಗಳನ್ನು ಯಾರೋ ಅಲ್ಲಿಂದ : ತೆಗೆದುಕೊಂಡು ಹೋಗಿದ್ದಾರೆ, ವಿಗ್ರಹಗಳು ನಾಪತ್ತೆಯಾಗಿವೆ ಎಂದು ಇದು 20ನೇ ಮಾರ್ಚ್‌ನಿಂದ ನಡೆಯುತ್ತಿದೆ, 22ನೇ ಮಾರ್ಚ್ ಈ ರೀತಿಯಾಗಿದ್ದು ಗೊತ್ತಾದಾಗ ಅಲ್ಲೇ ಪೋಲೀಸ್ ಫೋರ್ಸ್ ಇಟ್ಟಿದ್ದರೆ, ಈ ಸಮಸ್ಯೆ ಉದ್ಭವವಾಗುವ ಪ್ರಶ್ನೆ ಇರಲಿಲ್ಲ. ನಿಜವಾಗಿ ಇದು ಸೆಂಟಿಮೆಂಟಲ್ ಪ್ರಶ್ನೆ, 29ನೇ ತಾರೀಖು, ವಿಗ್ರಹಗಳು ನಾಪತ್ತೆಯಾಗಿವೆ ಎಂದು ಹಲವಾರು ದೂರುಗಳು ಹುಟ್ಟಿಕೊಂಡು ಈ ಶಂಸುದ್ದೀನ್ ಸರ್ಕಲ್‌ನಲ್ಲಿ ಕೋಮವಾರು ಗಲಭೆಗಳಾಗಿ ಕಲ್ಲು ತೂರಾಟ, ಸೋಡ ಬಾಟಲ್‌ಗಳ ತೂರಾಟ ಆರಂಭವಾಗಿ ಹಲವಾರು ಜನರಿಗೆ ಗಾಯಗಳಾಗಿವೆ. ಹನ್ನೆರಡು–ಹನ್ನೆರಡೂವರೆ ಗಂಟೆಗೆ ಸೆಕ್ಷನ್ 144 ಅನ್ನು ಕ್ಲಾಂಪ್ ಮಾಡುತ್ತಾರೆ. ಎರಡು ಮೋಟರ್ ಸೈಕಲ್‌ಗಳನ್ನು ಸುಟ್ಟಿದ್ದಾರೆ, ಒಂದು ರಿಕ್ಷಾ ಸುಟ್ಟಿದೆ, ಹಲವಾರು ಜನರಿಗೆ ಗಾಯಗಳಾದವು, ಆವಾಗ ಆಡಳಿತ ಕೂಡಲೇ ಕ್ರಮ ತೆಗೆದುಕೊಂಡು ಸಾಕಷ್ಟು ಪೋಲೀಸ್ ಫೋರ್ಸ್‌ನ್ನು ಕಳುಹಿಸಬೇಕಾಗಿತ್ತು. ಭಟ್ಕಳ್ ಇತಿಹಾಸ ಗೊತ್ತಿದೆ, ಇದು ಸೆನ್‌ಸಿಟಿವ್ ಏರಿಯಾ ಎಂದು ಗೊತ್ತಿದೆ, 1993 ನೇ ಇಸವಿಯಲ್ಲಿ ಇಂತಹ ಘಟನೆಯಾದಾಗ ಅದನ್ನು ಶಮನ ಮಾಡಬೇಕಾದರೆ 9 ತಿಂಗಳು ಬೇಕಾಯಿತು. ಇವತ್ತು ಇಲ್ಲಿ ಶಾಂತಿ ತರುವ ಕೆಲಸ ಬರೀ ಸರ್ಕಾರದ್ದೆಂದು ಹೇಳುವುದಿಲ್ಲ, ನಮ್ಮದೂ ಇದೆ, ನಾವೂ ಕೂಡ ಸಹಕಾರ ಮಾಡಬೇಕಾದ ಜವಾಬ್ದಾರಿ ಇದೆ. ಆದರೆ ಸರ್ಕಾರದಿಂದ ಕೆಲಸವಾಗಬೇಕಲ್ಲಾ ಸರ್ಕಾರದಿಂದ ಕ್ರಮ ತೆಗೆದುಕೊಳ್ಳಬೇಕಾಗಿತ್ತಲ್ಲಾ. ಏನೂ ಕ್ರಮ ತೆಗೆದುಕೊಂಡಿಲ್ಲ, ಸೆಕ್ಷನ್ 144 ಅಷ್ಟೇ ಕ್ಲಾಂಪ್ ಮಾಡುತ್ತಾರೆ. 29ನೇ ತಾರೀಖು ಪುನಃ ಟೆನ್‌ಷನ್ ಅಲ್ಲಿ ದುರ್ದೈವದಿಂದ 30ನೇ ತಾರೀಖು ಒಂದು ಮನೆ ಸುಡುವ ಪ್ರಯತ್ನವಾಗುತ್ತದೆ. ಸುದೈವದಿಂದ ರಿಯಾಜ್ ಬ್ರಹ್ಮಾವರ್ ಎಂಬುವವರಿಗೆ ಯಾರೋ ಸ್ನೇಹಿತರು ಫೋನ್ ಮಾಡಿ, ನಿನ್ನ ಮನೆ ಸುಡುವುದಕ್ಕೆ ಬರುತ್ತಾರೆ, ಮನೆ ಖಾಲಿ ಮಾಡಿ ಎಂದು ಹೇಳುತ್ತಾರೆ. ಒಂದೂವರೆ–ಎರಡು ಗಂಟೆಗೆ ಮನೆಯನ್ನು ಖಾಲಿ ಮಾಡುತ್ತಾನೆ, 3 ಗಂಟೆಗೆ ಹಿಂದಿನ ಬಾಗಿಲಿನಿಂದ ಬಂದು ಆ ಮನೆಯನ್ನು ಸುಡುವ ಪ್ರಯತ್ನವಾಗುತ್ತದೆ, ಬಾದಷಾ ಮನೆ ಸುಟ್ಟಿದೆ. ಜಿಲ್ಲಾ ಮಂತ್ರಿಗಳಾದ ನಮ್ಮ ಆಚಾರ್ಯವರೂ ಕೂಡ ಅಲ್ಲಿಗೆ ವಿಸಿಟ್ ಮಾಡಿ ಬಂದಿದ್ದಾರೆ. ಅದೇ ಪ್ರಕಾರ ಒಬ್ಬ ಇನ್ನೋಸೆಂಟ್ ಯುವಕ ಶ್ರೀಧರ್ ಎಂಬುವವ ಅಲ್ಲಿ ಹೂವು ಮಾರುತ್ತಿದ್ದ, ಅವನ ಮೇಲೆ ಹಲ್ಲೆಯಾಗುತ್ತದೆ. ಅವನು ಸ್ಪಾಟ್ ಡೆತ್ ಆಗುತ್ತದೆ. ಇದರಲ್ಲಿ ಬಲಿಯಾಗುವವರೆಲ್ಲಾ ಇನ್ನೋಸೆಂಟ್ ಜನರಷ್ಟೆ. ಈ ಮಿಸ್ಕ್ರಿಯೆಂಟ್ಸ್ ಏನಿದ್ದಾರೆ, ಯಾರು ಕಾನೂನನ್ನು ಕೈಗೆತ್ತಿಕೊಳ್ಳುತ್ತಾರೆ, ಇವತ್ತಿನವರೆಗೆ ನೋಡಿದ್ದೇನೆ ಇವರ್‍ಯಾರಿಗೂ ಶಿಕ್ಷೆಯಾಗುವುದಿಲ್ಲ, ಬಲಿಯಾಗುವುದೆಲ್ಲಾ ಈ ಇನ್ನೋಸೆಂಟ್ ಜನರು. ಆತ 26 ವಯಸ್ಸಿನ ಯುವಕ. ನಾನು ಅವನ

ಮನೆಗೆ ಹೋಗಿದ್ದೆ, ಏಜ್‌ಓಲ್ಡ್‌ಮದರ್. ಬಡವರು ಏನು ಮಾಡುತ್ತಾರೆ ಹೇಳಿ. ಅದೇ ಪ್ರಕಾರ ಆ ದಿವಸ ಲಕ್ಕಿಲಿ ಫೈಯರ್‌ಬ್ರಿಗೇಡ್ ಬಂದು ರಿಯಾಜ್ ಬ್ರಹ್ಮಾವರ್ ಮನೆಯನ್ನು ಸುಡುತ್ತಿರುವುದನ್ನು ನಂದಿಸಲು ಕ್ರಮ ತೆಗೆದುಕೊಳ್ಳುತ್ತದೆ, ಭಾಗಶಃ ಮನೆ ಸುಡುತ್ತದೆ. ಅದೇ ದಿವಸ ಮುನೀರ್ ಎಂಬುವವನು ಬಾಂಬೆಗೆ ಹೋಗುವ ತನ್ನ ರೈಲ್ವೆ ಟಿಕೇಟ್ ಅನ್ನು ಕ್ಯಾನ್ಸಲ್ ಮಾಡುವುದಕ್ಕೆ ಹೋಗುತ್ತಾನೆ, ವಾಪಸ್ ಬರುವಾಗ ಅವನ ಮೇಲೆ ಚಾಕು ಹಲ್ಲೆಯಾಗುತ್ತದೆ, ಆತನನ್ನು ಆಂಬುಲೆನ್ಸ್‌ನಲ್ಲೇ ತೆಗೆದುಕೊಂಡು ನಮ್ಮ ಕುಂದಾಪುರಕ್ಕೆ ಹೋಗುತ್ತಾರೆ, ಫಸ್ಟ್ ಏಡ್ ಭಟ್ಕಳ್‌ನಲ್ಲಿ ಕೊಟ್ಟು ಕುಂದಾಪುರಕ್ಕೆ ತೆಗೆದುಕೊಂಡು ಹೋದರೆ, ಅಲ್ಲಿ ಸುರೇಂದ್ರ ಶೆಟ್ಟಿ ಎಂಬುವವರು ವೈದ್ಯರು, ಅರ್ಥೋಪಿಡಿಷಿಯನ್ ಇರುತ್ತಾರೆ, ಅವರಿಗೆ, ಇವನಿಗೆ ನೀವು ಟ್ರೀಟ್‌ಮೆಂಟ್ ಕೊಡಬಾರದು. ನಿಮಗೆ ಕಷ್ಟವಾಗುತ್ತದೆಂದು ತ್ರೆಟನಿಂಗ್ ಕಾಲ್ ಹೋಗುತ್ತದೆ. ಅಲ್ಲಿಯ ವೈದ್ಯರು ಟ್ರೀಟ್‌ಮೆಂಟ್ ಕೊಟ್ಟು ಆಪರೇಷನ್ ಮಾಡುತ್ತಾರೆ. ನಂತರ ಈತನನ್ನು ಮಂಗಳೂರು ಆಸ್ಪತ್ರೆಗೆ ತೆಗೆದುಕೊಂಡು ಹೋಗಬೇಕೆಂದು ತೆಗೆದುಕೊಂಡು ಹೋಗುತ್ತಾರೆ, ಸೂರತ್ಕಲ್ ನಂತರ ಪುಲ್ಲೂರು ಎಂಬುವ ಒಂದು ಗ್ರಾಮವಿದೆ, ಅಲ್ಲಿಗೆ ಅಂಬುಲೆನ್ಸ್ ತಲುಪಿದಾಗ ಅಂಬುಲನ್ಸ್ ಮೇಲೆ ಕಲ್ಲು ತೂರಾಟವಾಗುತ್ತದೆ. ಅವರಿಗೆ ಯಾರು ಹೇಳಿದರು? ಇದರರ್ಥ ಯಾರೋ ಫಾಲೋಆಪ್ ಮಾಡುತ್ತಿದ್ದಾರೆ, ಕುಂದಾಪುರದ ವೈದ್ಯರಿಗೂ ತ್ರೆಟನ್ ಮಾಡುತ್ತಾರೆ. ನಂತರ ಅಂಬುಲೆನ್ಸ್ ಹೊರಡುವಾಗ ಪುಲ್ಲೂರ್ ಕಡೆ ಹೋದಾಗ ಆ ಅಂಬುಲೆನ್ಸ್ ಮೇಲೆ ಕಲ್ಲುತೂರಾಟವಾಗುತ್ತದೆ. ಯಾರಾದರೂ ಹೇಳಬೇಕಲ್ಲಾ, ಯಾರಾದರೂ ಮಾಹಿತಿಯನ್ನು ಕೊಡಬೇಕಲ್ಲಾ, ಇದರಲ್ಲಿ ಯಾರಿದ್ದಾರೆ, ಈ ಬಗ್ಗೆ ವಿಚಾರಣೆಯಾಗಬೇಕಾಗುತ್ತದೆ; ತನಿಖೆಯಾಗಬೇಕಾಗುತ್ತದೆ; ಯಾರು ತಪ್ಪಿತಸ್ಥರಿದ್ದಾರೋ ಅವರ ಮೇಲೆ ಕ್ರಮ ಜರುಗಿಸಬೇಕಾಗುತ್ತದೆ, ಇಲ್ಲದಿದ್ದರೆ ಆಡಳಿತದಲ್ಲಿ ಯಾರು ವಿಶ್ವಾಸವಿಡಲು ಸಾಧ್ಯ? ಇದು ಕೇವಲ ಒಂದು ಧರ್ಮ ಅಥವಾ ವರ್ಗದ ಪ್ರಶ್ನೆಯಲ್ಲ ಅಥವಾ ಕೇವಲ ಅಲ್ಪ ಸಂಖ್ಯಾತರ ಪ್ರಶ್ನೆಯಲ್ಲ, ಇಂತಹ ಘಟನೆಗಳಾದಾಗ, ಸಾಮಾನ್ಯ ಜನರು ಭಯಭೀತರಾಗುತ್ತಾರೆ ಕೇವಲ ಒಂದು ವರ್ಗದ ಜನರಲ್ಲ. ಇವತ್ತು ನಿಮ್ಮ ಸರ್ಕಾರ ಬಂದ ಮೇಲೆ ಅಲ್ಪಸಂಖ್ಯಾತರಿಗೆ ಸಾಕಷ್ಟು ಭಯ ನಿರ್ಮಾಣವಾಗಿದೆ, ಆದರೆ ನಾನು ಒಂದು ವರ್ಗ ಅಥವಾ ವರ್ಗದ ಪರವಾಗಿ ಮಾತನಾಡುವುದಿಲ್ಲ, ನಾನು ಎಲ್ಲರ ಪರವಾಗಿ ಮಾತನಾಡುತ್ತಿದ್ದೇನೆ, ಇದರ ಪರಿಣಾಮ ಎಲ್ಲರ ಮೇಲಾಗುತ್ತದೆ. ಇಂತಹ ಪರಿಸ್ಥಿತಿಯಲ್ಲಿ ಪುನಃ ಆತ ಪುಲ್ಲೂರಿನಿಂದ ಬೇರೆ ಗಾಡಿಯಲ್ಲಿ ಕುಳಿತುಕೊಂಡು ಯುನಿಟಿ ಆಸ್ಪತ್ರೆಗೆ ಹೋಗುತ್ತಾನೆ. ಈ ಪ್ರಕಾರವಾಗಿ ಸಮಾಜ ಘಾತುಕ ಶಕ್ತಿಗಳು, ಕಾನೂನು, ಕಾಯಿದೆಯನ್ನು ಕೈಗೆತ್ತಿಕೊಂಡು ಕೆಲಸ ಮಾಡಿದರೆ ಹೇಗೆ? ಅವರಿಗೆ ಪೊಲೀಸರ ಭಯವಿಲ್ಲ,

ಪೊಲೀಸರು ಏನೂ ಕ್ರಮ ತೆಗೆದುಕೊಳ್ಳುವುದಿಲ್ಲ, ಇವತ್ತಿನವರೆಗೆ ಅಲ್ಲಿಗೆ ಹೋಗಿ ಅದು ಹೇಗಾಯಿತು, ಯಾರು ತ್ರೆಟನಿಂಗ್ ಕಾಲ್ ವೈದ್ಯರಿಗೆ ಮಾಡಿದರು, ಯಾರು ಅಂಬುಲೆನ್ಸ್ ಮೇಲೆ ಕಲ್ಲು ತೂರಾಟ ಮಾಡಿದರು. ಆ ಬಗ್ಗೆ ಇವರ ಹತ್ತಿರ ಮಾಹಿತಿ ಇಲ್ಲ. ಇದರಲ್ಲಿ ಸರ್ಕಾರ ಸಂಪೂರ್ಣ ವಿಫಲವಾಗಿದೆ. ಸರ್ಕಾರ ಮುನ್ನೆಚ್ಚರಿಕೆ ಕ್ರಮ ತೆಗೆದುಕೊಂಡಿದ್ದರೆ, ಈ ಒಂದು ಅನಾಹುತವಾಗತ್ತಿರಲಿಲ್ಲ. ಸರ್ಕಾರ ತಕ್ಷಣ ಈ ಬಗ್ಗೆ ಕ್ರಮ ತೆಗೆದುಕೊಳ್ಳಬೇಕಾಗಿತ್ತು, ಇದರ ಪರಿಣಾಮ ಮಲ್ಪೆಯಲ್ಲಿ ಆರು ಮೀನುಗಾರರ ಮೇಲೆ ಹಲ್ಲೆಯಾಗಿದೆ, ಅವರು ಇವತ್ತು ಎಸ್‌ಇಎಸ್ ಆಸ್ಪತ್ರೆಯಲ್ಲಿ ದಾಖಲಾಗಿದ್ದಾರೆ, ನಾನು ತಿಳಿದ ಪ್ರಕಾರ ಅವರು ಭಟ್ಕಳದ ಮೀನುಗಾರರು. ಮುಖ್ಯವಾಗಿ ಜಿಲ್ಲಾಮಂತ್ರಿಗಳಾದ ನಮ್ಮ ಆಚಾರ್ಯರವರು, ಒಳ್ಳೆಯ ಸ್ನೇಹಿತರು, 29ನೇ ತಾರೀಖು ಈ ಘಟನೆಯಾಯಿತು, ಅವರು ಉಡುಪಿಯಲ್ಲಿರುತ್ತಾರೆ, ತಕ್ಷಣ ಅವರು ಹೋಗಿ ನೋಡಬೇಕಾಗಿತ್ತು, ಅಲ್ಲಿ ಹೋಗಿ ಮುಟ್ಟಿಲ್ಲ, 31ನೇ ತಾರೀಖು ಬರುತ್ತಾರೆ, 12.45 ಗಂಟೆಗೆ ಬಂದರು 2 ಗಂಟೆಗೆ ಹೋದರು. ಒಂದು ಗಂಟೆ ಇದ್ದರು. ವ್ಯಕ್ತಿಗತವಾಗಿ ನನಗೆ ಅವರ ಬಗ್ಗೆ ಗೌರವವಿದೆ. ಆದರೆ ಅನುಭವದ ಕೊರತೆಯೋ ಸೀರಿಯಸ್‌ನೆಸ್ ಇಲ್ಲವೋ, ಇದು ನನಗೆ ಗೊತ್ತಿಲ್ಲ. ಅಲ್ಲಿ ಬರುತ್ತಾರೆ ಮುಂಡೊಳ್ಳಿಗೆ, ಆ ಡಿಸ್‌ಪ್ಯೂಟೆಡ್ ಸೈಟ್‌ಗೆ, ಯಾರ ಮನೆ ಸುಡುವುದಕ್ಕೆ ಪ್ರಯತ್ನವಾಯಿತು ಅವರ ಮನೆಗೆ ಭೇಟಿ ಕೊಟ್ಟು ಹೋಗಿಬಿಡುತ್ತಾರೆ. ಆದರೆ ಅಲ್ಲಿರುವ ಹಿಂದೂಗಳಾಗಲಿ, ಮುಸಲ್ಮಾನರಾಗಲಿ ಎಲ್ಲರನ್ನೂ ಕರೆಯಿಸಿ ಮಾತುಕತೆ ಮಾಡಿ ಒಂದು ಶಾಂತಿಸಭೆ ಮಾಡಿ ಜನರಲ್ಲಿ ವಿಶ್ವಾಸ ಬರುವಂತೆ ಮಾಡಿ ಹೋಗುವ ಜವಾಬ್ದಾರಿ ಇತ್ತು. ಒಬ್ಬ ಜಿಲ್ಲಾ ಮಂತ್ರಿ ಎಂದರೇನು; ಅವರಿಗೆ ಜವಾಬ್ದಾರಿ ಇದೆ, ಎಲ್ಲರನ್ನೂ ಕರೆಯಿಸಿ ಹೇಳಬೇಕಾಗುತ್ತದೆ. ನಾನೇ ಹೋಗಿದ್ದೆ. ಎಲ್ಲರೂ ಬಂದಿದ್ದರು. ನಾನು ಬಹಳ ಸ್ಪಷ್ಟವಾಗಿ ಹೇಳಿದೆ, ಕೈಜೋಡಿಸಿ ಹೇಳಿದೆ ಪ್ರೈಯಾರಿಟಿ–ಮೇಂಟೆನ್ ಪೀಸ್. ಆ್ಯಕ್ಷನ್ ಮಾಡೋಣ. ಆದರೆ ಆ್ಯಕ್ಷನ್ ಮಾಡುವುದು ಲೇಟ್ ಆಗುತ್ತದೆಂದು ಪುನಃ ಅಲ್ಲಿ ಗಲಭೆಗಳಾಗಬಾರದು, ಆ ಕೆಲಸವನ್ನು ನಾನು ಡಾ: ಆಚಾರ್ಯರವರಿಂದ ಅಪೇಕ್ಷೆ ಮಾಡಿದ್ದೆ, ಏಕೆಂದರೆ ಅವರು ಒಬ್ಬ ಸೀಸನ್ಡ್ ವ್ಯಕ್ತಿ. ಆ ಕೆಲಸ ಅವರಿಂದ ಆಗಿಲ್ಲ. ಅಷ್ಟೇ ಅಲ್ಲ ಮಾನ್ಯ ಮುಖ್ಯಮಂತ್ರಿಗಳು ಒಂದು ಮಾತು ಹೇಳಿದರು. ನಮ್ಮ ಸರ್ಕಾರಕ್ಕೆ ಕೆಟ್ಟ ಹೆಸರು ತರಲು ಪ್ರಯತ್ನಿಸುತ್ತಿದ್ದಾರೆ ಎಂದು ಯಾರು ಪ್ರಯತ್ನ ಮಾಡುತ್ತಾ ಇದ್ದಾರೆ. ನಾನು ನೋಡಿದ ಈಟೀವಿಯಲ್ಲಿ, ಉದಯ ಟಿ.ವಿಯಲ್ಲಿ ನಾನು ಯಾರು ಪ್ರಯತ್ನ ಮಾಡುತ್ತಿದ್ದಾರೆ ಅಧ್ಯಕ್ಷರೇ? ಭಟ್ಕಳದಲ್ಲಿ ಏನು ಕೋಮುಗಲಭೆ ಆಯಿತು. ನಾವು ವಿರೋಧ ಪಕ್ಷದವರು ಇನ್‌ವೆಸ್ಟಿಗೇಟ್ ಮಾಡಿದ್ದೇವಾ? on the contrary, we are fully co-operating with the

Government. ಏಕೆಂದರೆ ನಮ್ಮದೂ ಅಷ್ಟೇ ಜವಾಬ್ದಾರಿ ಇದೆ. ಅವರ ಜವಾಬ್ದಾರಿಗಿಂತ ಹೆಚ್ಚು ನಮಗಿದೆ. ಯಾಕೆಂದರೆ ಎಲ್ಲಾ ವರ್ಗ, ಎಲ್ಲಾ ಸಮಾಜ ನಮ್ಮನ್ನು ನಂಬುತ್ತಾರೆ. ಇವತ್ತು ಭಟ್ಕಳದ ಇನ್ಸಿಡೆಂಟ್‌ಗೂ ಉಡುಪಿಗೂ ಏನು ಸಂಬಂಧ ಇದೆ? ಉಡುಪಿ ಜಿಲ್ಲೆಯಲ್ಲಿ ಬಂದ್‌ಗೆ ಕರೆ. ಮಾನ್ಯ ಅಧ್ಯಕ್ಷರೇ, ಮಾನ್ಯ ಮುಖ್ಯಮಂತ್ರಿಗಳು ಹೇಳಿದರು ನಮ್ಮ ಸರ್ಕಾರಕ್ಕೆ ಕೆಟ್ಟ ಹೆಸರು ತರಲು ಪ್ರಯತ್ನಿಸುತ್ತಿದ್ದಾರೆ ಎಂದು. ಯಾರು ತರುತ್ತಿದ್ದಾರೆ? ಉಡುಪಿಯಲ್ಲಿ ಬಂದ್ ಕಾಲ್ ಕೊಟ್ಟವರು ಯಾರು? ಕಾಂಗ್ರೆಸ್‌ನವರು ಕೊಟ್ಟರೋ, ಜೆಡಿ(ಯು) ಕೊಟ್ಟರೋ, ಕಮ್ಯುನಿಸ್ಟ್‌ನವರು ಕೊಟ್ಟರೋ ಹಾಗಾಗಿ ಮುಖ್ಯಮಂತ್ರಿಗಳು ವಿಚಾರ ಮಾಡಬೇಕು ಅವರ ಸರ್ಕಾರವನ್ನು ಡಿಸ್ಟೆಬಿಲೈಜ್ ಮಾಡಲು ಯಾರು ಪ್ರಯತ್ನ ಮಾಡುತ್ತಿದ್ದಾರೆ ಎಂಬುದನ್ನು ಅವರು ತಿಳಿದುಕೊಳ್ಳಬೇಕು. ಅವತ್ತು ಬಂದ್ ಕರೆಯಿಂದ ಬಹಳಷ್ಟು ಹುಡುಗರು ಟ್ಯಾಕ್ಸಿಯಿಂದ ಹೋದರು. 31ನೇ ತಾರೀಖು ಕೊನೇ ದಿನ, ಟ್ರೆಜರಿಗಳು ಬಂದ್ ಆಗುತ್ತವೆ, ಬ್ಯಾಂಕಿಂಗ್‌ಗೆ, ಎಷ್ಟು ಅನಾನುಕೂಲತೆ? ಪಬ್ಲಿಕ್ ಮತ್ತು ಪ್ರೈವೇಟ್ ಜನರಿಗೆ ಬ್ಯಾಂಕಿಂಗ್ ಅವಶ್ಯಕತೆ ಇದೆ, ಯಾರಾದರೂ ವಿಚಾರ ಮಾಡಬೇಕಲ್ಲಾ. ಹಾಗಾಗಿ ಸರ್ಕಾರ ಇದರಲ್ಲಿ ಫೇಲ್ ಆಗಿದೆ. ಸರ್ಕಾರದ ಇಂತಹ ನಿರ್ಣಯದಿಂದ, ಆಡಳಿತ ಪಕ್ಷದವರು ಯಾರಿದ್ದಾರೆ ಅವರೇ ಬಂದ್‌ಗೆ ಕರೆ ಕೊಟ್ಟರೆ ಅದು ಅವರದ್ದೇ ನಿರ್ಣಯ ಆಗುತ್ತದೆ. ಅದರಿಂದ ಆಡಳಿತದ ಮೇಲೆ ಪರಿಣಾಮವಾಗಿದೆ. ಕಾನೂನು ವ್ಯವಸ್ಥೆ ಮೇಲೆ ಪರಿಣಾಮವಾಗಿದೆ. ಹಾಗಾಗಿ ಮುಖ್ಯವಾಗಿ ಪರಸ್ಪರ ಅವಿಶ್ವಾಸ, Communication gap ಉಂಟಾಗಿದೆ. ಜನರಲ್ಲಿ ತಾವು ವಿಶ್ವಾಸ ಹುಟ್ಟಿಸಬೇಕಾಗಿದೆ. ನಿನ್ನೆ ಕರ್ಫ್ಯೂ ರಿಲ್ಯಾಕ್ಸ್ ಮಾಡಿದರು, ಪುನಃ ಸ್ಟ್ಯಾಬಿಂಗ್ ಇನ್ಸಿಡೆಂಟ್ ಆಗಿದೆ. ಪುನಃ ಇವತ್ತೇನೋ ಕರ್ಫ್ಯೂ ಸ್ವಲ್ಪ ರಿಲಾಕ್ಸ್ ಮಾಡಿದ್ದಾರೆ ಎಂಬ ಸುದ್ದಿಯಿದೆ. ಹಾಗಾಗಿ ಸರಿಯಾದ ಮುಂಜಾಗ್ರತಾ ಕ್ರಮಗಳನ್ನು ಸರ್ಕಾರ ತೆಗೆದುಕೊಂಡಿದ್ದರೆ ಇವತ್ತು ಈ ಪರಿಸ್ಥಿತಿಗೆ ಬರುತ್ತಿರಲಿಲ್ಲ. ಹಾಗಾಗಿ ನಾನು ಮುಖ್ಯವಾಗಿ ಏನು ಹೇಳುತ್ತಿದ್ದೇನೆ ಅಂದರೆ ಈ ಘಟನೆಗಳು ಏನಾಗಿವೆ ಇದರ ಹಿಂದೆ ಯಾವ ದುಷ್ಟ ಶಕ್ತಿಗಳಿವೆ, ಅವರು ಯಾರೇ ಇರಲಿ ಅವರ ವಿರುದ್ಧ ಕಠೋರ ಕ್ರಮ ಸರ್ಕಾರ ತೆಗೆದುಕೊಳ್ಳಬೇಕಾಗುತ್ತದೆ. ಜನ ಇವರ ಮೇಲೆ ವಿಶ್ವಾಸ ಕಳೆದುಕೊಂಡಿದ್ದಾರೆ. ಆದ್ದರಿಂದ ಇದರ ವಿಚಾರಣೆಯನ್ನು ಸಿಬಿಐ ಕಡೆಯಿಂದ ಮಾಡಿಸಬೇಕು ಎಂದು ನಾನು ಒತ್ತಾಯ ಮಾಡುತ್ತಿದ್ದೇನೆ. ಇದು ವಿಚಾರಣೆ ಆಗಬೇಕು ನಿಷ್ಪಕ್ಷಪಾತವಾಗಿ ಸತ್ಯ ಏನಿದೆ ಅದು ಹೊರಗೆ ಬರಬೇಕು. ಅಷ್ಟೇ ಅಲ್ಲ, ಅಧ್ಯಕ್ಷರೇ, ಇವತ್ತು ಪರಿಹಾರ, ಯಾರು ಇನ್‌ಜ್ಯೂರ್ಡ್ ಇದ್ದಾರೆ. ಅವರಿಗಿನ್ನೂ ಪರಿಹಾರ ಕೊಟ್ಟಿಲ್ಲ. ಸ್ಟ್ಯಾಬ್ಡ್ ಇಂಜ್ಯುರಿಸ್ ಆದ ಮುನೀರ್ ಮತ್ತು ಯಾರು ಮೂವರಿದ್ದಾರೆ ಅವರನ್ನು ನೋಡಲು ಯಾರೂ ಹೋಗಿಲ್ಲ. ಸರ್ಕಾರದ ಪರವಾಗಿ

ಯಾರೂ ಹೋಗಿಲ್ಲ. ನಾನೇ ಹೋಗಿ ನೋಡಿಬಂದೆ. ಆತ ಬಹಳ ಸೀರಿಯಸ್ಸಿದ್ದ, Luckily he is safe. ಸರ್ಕಾರದಿಂದ ಯಾರೂ ಹೋಗಿ ನೋಡಿಬಂದಿಲ್ಲ. ಇವತ್ತು ಯಾರಿಗೆ ಇನ್‌ಜ್ಯೂರೀಸ್ ಆಗಿದೆ, ಅವರಿಗೆ ಪರಿಹಾರ ಕೊಟ್ಟಿಲ್ಲ. ವೆಹಿಕಲ್ಸ್ ಡ್ಯಾಮೇಜ್ ಆದವರಿಗೆ ಪರಿಹಾರ ಕೊಟ್ಟಿಲ್ಲ. ಇವತ್ತ ಮಾನ್ಯ ಉಪ ಮುಖ್ಯಮಂತ್ರಿಗಳ ಗಮನಕ್ಕೆ ತರುತ್ತಾ ಇದ್ದೇನೆ: ನಾವು 1993ನೇ ಇಸವಿಯಿಂದ ಈ ಕಮ್ಯುನಲ್ ರೈಟ್ಸ್‌ನಿಂದ ಪ್ರಾಣಹಾನಿಯಾದರೆ ಒಂದು ಲಕ್ಷ ರೂ.ಗಳನ್ನು ಕೊಡುತ್ತೇವೆ. ಹಾಗಾಗಿ ಆ ಕಾಂಪನ್‌ಸೇಶನನ್ನು ಸ್ವಲ್ಪ ಹೆಚ್ಚು ಮಾಡಬೇಕು ಎಂದು ವಿನಂತಿ ಮಾಡುತ್ತಾ ಇದ್ದೇನೆ. ಅದೇ ಪ್ರಕಾರ ಯಾರು ಇಂಜೂರ್ಡ್ ಆಗಿದ್ದಾರೆ ಅವರಿಗೂ ಸಫಿಷಿಯಂಟಾಗಿ ಸರ್ಕಾರ ಪರಿಹಾರ ಕೊಡಬೇಕು. ಅಧ್ಯಕ್ಷರೇ, ಸಮಾಜದಲ್ಲಿ ಶಾಂತಿ ತರುವ ಕೆಲಸ ನಮ್ಮೆಲ್ಲರದ್ದು. ನಾವು ಸಂಪೂರ್ಣ ಸಹಕಾರ ಸರ್ಕಾರದೊಂದಿಗೆ ಮಾಡಲು ಸಿದ್ಧರಿದ್ದೇವೆ ಆದರೆ ಸರ್ಕಾರ ಸ್ವಲ್ಪ ಜವಾಬ್ದಾರಿಯಿಂದ ಕೆಲಸ ಮಾಡಬೇಕಾಗುತ್ತದೆ. ಏನು ನಡೆಯುತ್ತಾ ಇದೆ ಅದನ್ನು ತಿಳಿದುಕೊಳ್ಳಬೇಕು. ಸರ್ಕಾರ ಯಾವ ವರ್ಗದ ಅಥವಾ ಧರ್ಮದ ಪರವಾಗಿ ಇರಬಾರದು. ಎಲ್ಲರನ್ನೂ ತೆಗೆದುಕೊಂಡುಹೋಗುವ ಶಕ್ತಿ ಸರ್ಕಾರಕ್ಕಿರಬೇಕಾಗುತ್ತದೆ. ಎಲ್ಲಾ ವರ್ಗಗಳು ಧರ್ಮಗಳೂ ಜೊತೆಯಲ್ಲಿ ಹೋದಾಗ ಅದಕ್ಕೊಂದು ಸರ್ಕಾರ ಅನ್ನುತ್ತಾರೆ. ಹಾಗಾಗಿ ಈ ಸರ್ಕಾರದ ಮೇಲೆ ಇವತ್ತು ಜನರ ವಿಶ್ವಾಸ ಕಡಿಮೆಯಾಗುತ್ತಿದೆ. ಇದಾಗಬಾರದು. ಹೊಸದಾಗಿ ಸರ್ಕಾರ ರಚನೆಯಾಯಿತು, ಒಳ್ಳೆಯ ಕೆಲಸ ಮಾಡಿ. ನಾವು ಬೆಂಬಲ ಕೊಡಲು ತಯಾರಿದ್ದೇವೆ. ಆದರೆ ಈ ಪ್ರಕಾರ ಕೋಮುಗಲಭೆಗಳು ಆಗಲು ಪ್ರಾರಂಭವಾದರೆ ಬಹಳ ಕಷ್ಟವಾಗಬಹುದು. ಇದಕ್ಕೆ ಬಲಿಬೀಳುವುದು ಸಾಮಾನ್ಯ ಜನ, ಬಡಜನ ಮತ್ತು ಅಮಾಯಕರು. ಅವರಿಗೆ ಇವತ್ತು ರಕ್ಷಣೆ ಒದಗಿಸಬೇಕಾಗಿದೆ. ಆ ದೃಷ್ಟಿಯಿಂದ ಸರ್ಕಾರ ಮುನ್ನೆಚ್ಚರಿಕೆ ಕ್ರಮ ಏನೂ ತೆಗೆದುಕೊಂಡಿಲ್ಲ. ಇನ್ನು ಮುಂದಾದರೂ ಕ್ರಮ ತೆಗೆದುಕೊಳ್ಳಬೇಕು. ಇವತ್ತು ಇನ್ನೂ ಬಹಳಷ್ಟು ಜನ ಅರೆಸ್ಟಾಗಿಲ್ಲ; ಮೇನ್ ಕಲ್‌ಪ್ರಿಟ್ಸ್ ಇದ್ದಾರಲ್ಲಾ, ಪೊಲೀಸರಿಗೆ ಎಲ್ಲಾ ಗೊತ್ತಿದೆ. ಕಳೆದ ಘಟನೆಗಳಲ್ಲಿ ಯಾರ್ಯಾರು ಕಲ್‌ಪ್ರಿಟ್ಸ್ ಇದ್ದಾರೆ, ಯಾರಿಂದ ಇಂತಹ ಗಲಭೆಗಳು ಆಗುತ್ತಾ ಇವೆ, ಪೊಲೀಸರಿಗೆ ಎಲ್ಲಾ ಗೊತ್ತಿದೆ. ಆದರೆ ಪೊಲೀಸರು ಯಾಕೆ ಇನ್‌ಆಕ್ಟೀವ್ ಆಗಿದ್ದಾರೆ? ಏಕೆ ಇನ್ ಆ್ಯಕ್ಷನ್ ಆಗಿದ್ದಾರೆ, ಸರ್ಕಾರದಿಂದ ಏನಾದರೂ ಡೈರೆಕ್ಷನ್ಸ್ ಹೋಗಿದೆಯೇನು ಈ ಪ್ರಕಾರ ಕ್ರಮ ತೆಗೆದುಕೊಳ್ಳಬಾರದು ಎಂದು ಅದು ನಮಗೆ ಗೊತ್ತಾಗಬೇಕಾಗುತ್ತದೆ. ಹಾಗಾಗಿ ಯಾರು ಕಲ್‌ಪ್ರಿಟ್ಸ್ ಇದ್ದಾರೆ ತಕ್ಷಣ ಅವರ ಬಂಧನವಾಗಬೇಕು. ಅವರು ಯಾವ ಧರ್ಮದವರಿರಲಿ, ಯಾವ ಪಕ್ಷದವರಿರಲಿ, ಯಾವ ಜಾತಿಯವರಿರಲಿ, ಅದು ಮುಖ್ಯವಲ್ಲ. ಆ ದೃಷ್ಟಿಯಿಂದ ಸರ್ಕಾರ ಕ್ರಮ ತೆಗೆದುಕೊಳ್ಳಬೇಕು. ಮತ್ತು ನಾನು ಈಗಾಗಲೇ ಸಿಬಿಐ ತನಿಖೆ ಕೇಳಿದ್ದೇನೆ, ಅದು

ಆಗಬೇಕು ಯಾರು ಇಂಜೂರ್ಡ್ ಡೆತ್ ಆಗಿದ್ದಾರೆ ಅವರಿಗೆ ಹೆಚ್ಚಿಗೆ ಪರಿಹಾರ ಕೊಡಬೇಕು ಎಂದು ಈ ಸಂದರ್ಭದಲ್ಲಿ ನಾನು ಕೇಳುತ್ತಾ ಇದ್ದೇನೆ.

ಶ್ರೀ ಎನ್. ಧರ್ಮಸಿಂಗ್ (ವಿರೋಧ ಪಕ್ಷದ ನಾಯಕರು) : ಮಾನ್ಯ ಅಧ್ಯಕ್ಷರೇ, ಈಗ ನಮ್ಮ ರಾಜ್ಯದ ಹಿರಿಯ ಸಚಿವರು ಮತ್ತು ಆ ಜಿಲ್ಲೆಯ ರಾಜಕಾರಣಿಗಳಾದ ಶ್ರೀ ದೇಶಪಾಂಡೆಯವರು ಬಹಳಷ್ಟು ವಿಚಾರಗಳನ್ನು ಪ್ರಸ್ತಾಪ ಮಾಡಿದ್ದಾರೆ. ಇವತ್ತು ಭಟ್ಕಳದಲ್ಲಿ ಆದ ಗಲಭೆ ಕೇವಲ ನಮ್ಮ ರಾಜ್ಯದ ಪತ್ರಿಕೆಯಲ್ಲೆಲ್ಲ ಇಡೀ ರಾಷ್ಟ್ರದ ಪತ್ರಿಕೆಗಳಲ್ಲೆಲ್ಲಾ ಹೆಚ್ಚಿನ ಗಮನಸೆಳೆದಿದೆ. ಮೊಟ್ಟಮೊದಲನೆಯದಾಗಿ ಈ ರಾಜ್ಯದ ಮುಖ್ಯಮಂತ್ರಿಗಳು ಎಲ್ಲಿ? ಇವತ್ತು ಈ ಒಂದು ಇಲಾಖೆ ಅವರ ಹತ್ತಿರ ಇದೆ. 29ರಿಂದ ಇಲ್ಲಿಯವರೆಗೆ ಆಗಿರುವ ಭಟ್ಕಳ ಗಲಭೆ ಏನಿದೆ ಅದು ಬಹಳ ಸೂಕ್ಷ್ಮಪ್ರದೇಶ. ಮಾನ್ಯ ಯಡಿಯೂರಪ್ಪನವರು ಈ ಜಾಗದಲ್ಲಿದ್ದಾಗ ಚಿತ್ತರಂಜನ್ ಕೊಲೆಯಾದ ಮೇಲೆ ನಾವೆಲ್ಲಾ ನಮ್ಮ ಪೋಲೀಸ್ ಇಲಾಖೆ ಸಿಓಡಿ ನಿಷ್ಪಕ್ಷಪಾತ ತನಿಖೆ ನಡೆಸುತ್ತಿದೆ ಎಂಬ ವಾದ ಇತ್ತು. ಆದರೂ ಆಗಿನ ಎನ್‌ಡಿಎ ಸರ್ಕಾರ ಇದ್ದಾಗ ಸಿಬಿಐಗೆ ಕಳುಹಿಸಬೇಕು ಎಂಬ ರೀತಿಯಲ್ಲಿ, ಈಗಾಗಲೇ ನಮ್ಮ ದೇಶಪಾಂಡೆಯವರು ಪ್ರಸ್ತಾಪ ಮಾಡುವಾಗ ಇಡೀ ಪ್ರಕರಣವನ್ನು ಸಿಬಿಐಗೆ ವಹಿಸಿಕೊಡಬೇಕು ಎಂದು ಒತ್ತಾಯ ಮಾಡಿದರು. ಇಂತಹ ಗಲಭೆ ಆಗುತ್ತಿರುವಾಗ ಇವತ್ತು ರಾಜ್ಯದ ಮುಖ್ಯಮಂತ್ರಿಗಳು ಸದನದಲ್ಲಿ ಹೇಳಿಕೆ ನೀಡಬೇಕು. ಏನು ಗಲಭೆ ಆಗಿದೆ ಹಿನ್ನೆಲೆಯೇನು ಎಂಬ ಬಗ್ಗೆ ಸ್ಪಷ್ಟ ಉತ್ತರವನ್ನು ಇವತ್ತು ಸದನಕ್ಕೆ ಕೊಡಬೇಕಾಗಿದೆ, ಕೊಟ್ಟಿಲ್ಲ. ಇವತ್ತೇನಾಗಿದೆ ಅಂದರೆ ಈ ರಾಜ್ಯದಲ್ಲಿ ಬಹಳ ಸಲೀಸಾಗಿ ಪ್ರತಿ ಸಮಸ್ಯೆಗಳ ಬಗ್ಗೆ ಅವರು ಸ್ಪಂದನ ಮಾಡುತ್ತಾ ಇಲ್ಲ. ನಿಲುವಳಿ ಸೂಚನೆಗೆ ಅವಕಾಶ ಕೊಟ್ಟಿದ್ದೀರಿ. ಮಾನ್ಯ ದೇಶಪಾಂಡೆಯವರು ಪ್ರಾರಂಭಿಕ ಪ್ರಸ್ತಾವನೆ ಮಾಡುತ್ತಿದ್ದರು. ಆದರೆ ರಾಜ್ಯದ ಇಲಾಖೆಯ ಮುಖ್ಯಸ್ಥರಾದ ಶ್ರೀ ಸಿಯಾಲ್ ಅವರು ಈಗ ಬಂದಿದ್ದಾರೆ. ಪ್ರಿನ್ಸಿಪಲ್ ಹೋಂ ಸೆಕ್ರೆಟರಿ ಇಲ್ಲಿ ಇಲ್ಲ. ಇದರ ಮೇಲೆ ಚರ್ಚೆ ಆಗಬೇಕು ಎಂದು ಇವತ್ತು ಮುಂಜಾನೆಯೇ ಮಹತ್ವದ ನಿಲುವಳಿ ಸೂಚನೆ ಕೊಟ್ಟಿದ್ದೇವೆ. ಒಂದು ಮಹತ್ವದ ವಿಚಾರದ ಬಗ್ಗೆ ಬೆಳಕು ಚೆಲ್ಲುವ ಉದ್ದೇಶದಿಂದ ಮಾನ್ಯ ದೇಶಪಾಂಡೆಯವರು ಮತ್ತು ನಾವೆಲ್ಲರೂ ಕೂಡಿ ಸೂಚನೆ ಕೊಟ್ಟಾಗ ಒಬ್ಬರೂ ಇಲ್ಲ. ಇದರ ಅರ್ಥವೇನು ಅನ್ನಿಸುತ್ತದೆ ಅಂದರೆ ಇದನ್ನು ಬಹಳ ಗಂಭೀರವಾಗಿ ತೆಗೆದುಕೊಂಡಿಲ್ಲ. ನಾನು ಗೃಹಸಚಿವನಾಗಿದ್ದೆ. That is one of the sensitive places in the Karnataka State. ಶೆಟ್ಟರ್‌ರವರೇ, ಇವತ್ತು ಆಡಳಿತ ನಡೆಸುವವರು ಸ್ಥಳಗಳನ್ನು ಗುರುತಿಸಬೇಕು, ಎಲ್ಲಿ ಈ ತರಹದ ಗಲಬೆ ನಡೆದಿತ್ತು? ಅಧ್ಯಕ್ಷರೇ, ದೇಶದಲ್ಲಿ ಕೆಲವು ಶಕ್ತಿಗಳಿವೆ ಕೆಲವು ರಾಜಕೀಯ ಪಕ್ಷಗಳಿವೆ, ಇದನ್ನೇ ಹೆಚ್ಚು ಬೆಳೆಸಿ ರಾಜಕಾರಣ ಮಾಡುವ ಜನರಿದ್ದಾರೆ. ಇವತ್ತು

ಜನರಲ್ಲಿ ಒಂದು ವಿಶ್ವಾಸ ಮೂಡಿಸುವುದು ಆಗಬೇಕು. ಈಗಾಗಲೇ ಅವರು ಹೇಳಿದರು. ಡಾ॥ ವಿಎಸ್ ಆಚಾರ್ ಅವರು ಅಲ್ಲಿನ ಉಸ್ತುವಾರಿ ಸಚಿವರು. ಅವರು ಉಡುಪಿಯಲ್ಲಿ ಬಂದ್ ಮಾಡಬೇಕು ಎಂದು ಹೇಳಿ ಪ್ರಚೋದನೆ ಮಾಡಿ ಭಟ್ಕಳಕ್ಕೆ ಹೋದಾಗ, ಯಾವ ರೀತಿ ಶಾಂತಿ ಆಗುತ್ತದೆ? ಇವತ್ತು ನಿಮ್ಮ ನಡವಳಿಕೆ ಏನಿದೆ, ಜೀವನದ ನಡವಳಿಕೆ, ಈ ರಾಜ್ಯದಲ್ಲಿರುವ ಹಿಂದುಳಿದವರ, ಅಲ್ಪಸಂಖ್ಯಾತರ ಎಲ್ಲಾ ಒಂದು political credibility ಏನು ಇದೆ, ಅದು ಒಂದೇ ದಿವಸದಲ್ಲಿ ಬರುವುದಿಲ್ಲ. ಇವತ್ತು ತಮ್ಮ ಎಲ್ಲಾ ಜೀವನದ ಇತಿಹಾಸವನ್ನೂ ಕೂಡ ನೋಡುತ್ತಾರೆ. ಅಲ್ಲಿ ಹೋದಮೇಲೆ ಯಾರು ಪ್ರತಿನಿಧಿಗಳು ಬಂದಿದ್ದಾರೆಂದು ನೋಡುತ್ತಾರೆ. ಈಗಾಗಲೇ ಶ್ರೀಮಾನ್ ದೇಶ್‌ಪಾಂಡೆಯವರು ಹಾಗೂ ನಾನು ಸಮಾಲೋಚನೆಯನ್ನು ಮಾಡಿದ್ದೇವೆ. ಇವತ್ತು ನಾವು ನಿಲುವಳಿ ಸೂಚನೆಯನ್ನೂ ಸಹ ಕೊಟ್ಟಿದ್ದೇವೆ. ಇದು ಬಹಳ ಮಹತ್ವವಾದ ವಿಷಯ. ಕೇವಲ ನಾವು ಕೇಳಿದೆವು, ನೀವು ಉತ್ತರ ಕೊಡತಕ್ಕಂಥದ್ದಲ್ಲ. ಎಷ್ಟು ಸಲ ತಮ್ಮ ಪೋಲೀಸ್ ಇಲಾಖೆಯ ಮುಖ್ಯಸ್ಥರು ಹೋಗಿದ್ದಾರೆ, ಅಲ್ಲೇನು ಶಾಂತಿಸಭೆಗಳನ್ನು ಮಾಡಿದ್ದಾರೆ, ಅಲ್ಲಿಗೆ ಡಾ॥ ವಿ.ಎಸ್. ಆಚಾರ್‌ರವರು ಹೋದರೆ ಶಾಂತಿಸಭೆಗಳು ಆಗಲಿಕ್ಕೆ ಶಕ್ಯ ಇಲ್ಲ. ಮಾನ್ಯ ಯಡಿಯೂರಪ್ಪನವರು ಈ ರಾಜ್ಯದ ಉಪಮುಖ್ಯಮಂತ್ರಿಗಳಾಗಿದ್ದಾರೆ. ಮಾನ್ಯ ಯಡಿಯೂರಪ್ಪನವರ ಹಿನ್ನೆಲೆಯನ್ನೂ ಕೂಡ ನೋಡುತ್ತಾರೆ. ಅದಕ್ಕೆ ನಾನು ಹೇಳತಕ್ಕಂಥದ್ದು, ಇವತ್ತೇನು ಭಾರತೀಯ ಜನತಾ ಪಕ್ಷ ಮತ್ತು ಜನತಾ ದಳ (ಎಸ್) ಕೂಡಿ ಸರ್ಕಾರ ರಚನೆಯಾಗಿ ನಡೆಯುತ್ತಿದೆ, ಅದರಲ್ಲಿ ತಾವು ವಿಶ್ವಾಸ ಮೂಡಿಸತಕ್ಕಂಥ ಪ್ರಯತ್ನವನ್ನು ಮಾಡಬೇಕು. ಶ್ರೀಮಾನ್ ದೇವರಾಜ ಅರಸ್‌ರವರು ಕೂಡ ಎಂಟು ವರ್ಷಗಳ ಕಾಲ ಈ ರಾಜ್ಯದಲ್ಲಿ ಮುಖ್ಯಮಂತ್ರಿಯಾಗಿ ಕೆಲಸವನ್ನು ಮಾಡಿದ್ದಾರೆ. ಜನರು ಇನ್ನೂ ಆ ದಿವಸವನ್ನು ನೆನೆಸುತ್ತಾರೆ. ಇವತ್ತು ನೀವು ಕೇವಲ ಏನೂ ಆಗಿಲ್ಲ, ಎನ್ನತಕ್ಕ ರೀತಿಯಲ್ಲಿ ಹೇಳುವುದಲ್ಲ. ನಾನು ಹೇಳುವುದು, ಇವತ್ತು ಮಾನ್ಯ ಯಡಿಯೂರಪ್ಪನವರು ಹೋದರೂ ಅದು ಆಗುವುದಿಲ್ಲ. ಇವತ್ತು ಮಾನ್ಯ ಮುಖ್ಯಮಂತ್ರಿಗಳೂ ಕೂಡ ಇಲ್ಲ. ಇಂಥ ಒಂದು ನಿಲುವಳಿ ಸೂಚನೆಯನ್ನು ಕೊಟ್ಟಂಥ ವಿರೋಧ ಪಕ್ಷದ ಹಿರಿಯ ನಾಯಕರುಗಳು ಪ್ರಸ್ತಾಪ ಮಾಡತಕ್ಕ ಕಾಲದಲ್ಲಿ ಏನೇ ಕಾರ್ಯಕಲಾಪಗಳಿದ್ದರೂ ಕೂಡ ಅವರು ಸದನದಲ್ಲಿ ಇರಬೇಕು. ಇದು ರಾಜ್ಯದ ಸೂಕ್ಷ್ಮವಾದಂಥ ವಿಚಾರ. ಇದೇ ರೀತಿಯಾಗಿ ಮುಂದುವರೆಸಿಕೊಂಡು ಹೋದರೆ ಹೇಗೆ? ಕರ್ನಾಟಕ ರಾಜ್ಯದಲ್ಲಿ ಈ ರೀತಿಯಾದ ಸಮ್ಮಿಶ್ರ ಸರ್ಕಾರದಿಂದ ಒಂದು ಭಯದ ವಾತಾವರಣವಾಗಿದೆ, ಇವತ್ತು ಹತ್ತು ದಿವಸಗಳ ಕಾಲ ನಡೆಯತಕ್ಕ ಗಲಭೆ ಏನಿದೆ, ಏನು ತಮ್ಮ plan of action ಇದೆ, ಅಧಿಕಾರಿಗಳು ಏನೇನು ಮಾಡಿದ್ದಾರೆ? ಯಾವ ರೀತಿಯಾಗಿ ಅಲ್ಪಸಂಖ್ಯಾತರಲ್ಲಿ,

ಬೇರೆ ಹಿಂದುಳಿದವರಲ್ಲಿ ವಿಶ್ವಾಸ ಮೂಡಿಸತಕ್ಕ ಕೆಲಸ ಆಗಿದೆ, ಆಗಿಲ್ಲ. ಇದೊಂದೇ ಕಡೆ ಅಲ್ಲ. ಈದ್ಗಾದ ಇದಾದ ಬಗ್ಗೆ ಕೂಡ ನಾವು ನಾಳೆ ಪ್ರಸ್ತಾಪವನ್ನು ಮಾಡುತ್ತೇವೆ. ಈದ್ಗಾ ಮೈದಾನ ಯಾವ ರೀತಿಯಾಗಿ ಅಲ್ಪಸಂಖ್ಯಾತರಿಗೆ ಇವತ್ತಿನ ದಿವಸ ಉಪಯೋಗವಾಗುತ್ತಿದೆ ಎಂಬ ಬಗ್ಗೆ ಮೊನ್ನೆ ನಾನು ಹೇಳಿದೆ, ಬಜೆಟ್‌ನಲ್ಲಿ ಮಾತನಾಡತಕ್ಕ ಕಾಲದಲ್ಲಿ ನಾನು hidden agenda ಎಂದು ಹೇಳಿದೆ. ಮಾನ್ಯ ಚೆಲುವರಾಯಸ್ವಾಮಿಯವರೇ, ತಮ್ಮ ತಲೆಯ ಮೇಲೆಯೇ ಅದು ಮುಂದೆ ಬೀಳುತ್ತದೆ.... ಏನು ಉತ್ತರವನ್ನು ಕೊಡುವುದಲ್ಲ. ತಮ್ಮ ಮೇಲೆಯೇ ಬೀಳುತ್ತದೆ. ಆಗ ಗಾಭರಿಯಾಗಿ ನಮ್ಮಲ್ಲಿ ಬರಬೇಕಾಗುತ್ತದೆ. ಏಕೆಂದರೆ ಶ್ರೀಮಾನ್ ದೇವೇಗೌಡರು ರಾಮನಗರದಿಂದ ಆರಿಸಿಹೋದರು. ದೇಶದ ಪ್ರಧಾನಮಂತ್ರಿಯಾದರು. ತೆರವಾದ ಸ್ಥಳದಲ್ಲಿ ತಾವು ಅಂಬರೀಶ್ ಅವರನ್ನು ನೀವೇ ನಿಲ್ಲಿಸಿದಿರಿ. ಅಲ್ಲಿ ಯಾವ ರೀತಿಯಾಗಿ ಅಲ್ಪಸಂಖ್ಯಾತರ ಮೇಲೆ ಹಲ್ಲೆಯಾಯಿತು, ಮುನಿಸಿಪಾಲಿಟಿ ಪ್ರೆಸಿಡೆಂಟ್ ಮಾಡತಕ್ಕ ಕಾಲದಲ್ಲಿ ಮುನೀರ್‌ರವರಿಗೆ, ನಾಗರಾಜ್‌ರವರಿಗೆ ಮಾಡಿದ ಹಾಗೆ 34 ಸಾವಿರ ವೋಟನ್ನು ತೆಗೆದುಕೊಳ್ಳಲಿಕ್ಕಾಗಲಿಲ್ಲ. ಅದೇ ರೀತಿಯಾದ ಪರಿಸ್ಥಿತಿ ಇವತ್ತು ಕರ್ನಾಟಕ ರಾಜ್ಯದಲ್ಲಿ ಬರುತ್ತದೆ. ಇವತ್ತು ಕೇವಲ ಸಂಖ್ಯಾಬಲದಿಂದ ಆಡಳಿತವನ್ನು ನಡೆಸಿಕೊಂಡು ಹೋಗುತ್ತೇವೆಂದರೆ ಆಗುವುದಿಲ್ಲ. ನಾನು ಆ ಮಾತಿಗೆ ಹೋಗುವುದಿಲ್ಲ. ಒಟ್ಟಾಗಿ ಹೇಳತಕ್ಕದ್ದೆಂದರೆ ಇವತ್ತು ಭಟ್ಕಳದಲ್ಲಿ ಪ್ರಾರಂಭವಾದ ಘಟನೆ ಏನು ಇದೆ, ಶಾಂತಿಸಭೆಯನ್ನು ಮಾಡತಕ್ಕ ರೀತಿಯಲ್ಲಿ ಸರ್ಕಾರದವರು ವಿಫಲರಾಗಿದ್ದಾರೆ. ಈ ಸರ್ಕಾರಕ್ಕೆ ಆಡಳಿತ ನಡೆಸತಕ್ಕ ತಮಗೆ ಯಾವುದೇ ರೀತಿಯಾದ ಹಕ್ಕಿಲ್ಲ. ಏಕೆಂದರೆ ನೈತಿಕತೆ ಬೇಕು. ಇವತ್ತು ಮನೋಬಲವನ್ನು ಮಾಡತಕ್ಕ ರೀತಿಯಲ್ಲಿ ಸರ್ಕಾರವನ್ನು ನಡೆಸುತ್ತಿದ್ದೇವೆ. ನಾವೆಲ್ಲಾ ಮರೆತುಹೋಗಿದ್ದೇವೆ. ಈ ಒಂದು ರಾಜ್ಯದಲ್ಲಿರುವ ಎಲ್ಲಾ ಜನರಲ್ಲಿ ವಿಶ್ವಾಸ ಮೂಡಿಸುವ ರೀತಿಯಲ್ಲಿ ಮುಂದೆ ಬಾಗಿದೆ ಎನ್ನುವ ರೀತಿಯಲ್ಲಿ ಆ ಒಂದು ಭಾವನೆಗಳು ನಿರ್ಮಾಣವಾಗಬೇಕಾಗಿದೆ. ವಿರೋಧ ಪಕ್ಷದ ನಾಯಕರಾಗಿ ಮಾನ್ಯ ಯಡಿಯೂರಪ್ಪನವರು ಯಾವ ಧಾಟಿಯಲ್ಲಿ ಹೇಳಿದರು, ಅವರು ಸೀಟ್ ಮೇಲೆ ಕುಳಿತುಕೊಳ್ಳುತ್ತಿರಲಿಲ್ಲ. ಇವತ್ತು ಉಪಮುಖ್ಯಮಂತ್ರಿಗಳಾಗಿ ಜವಾಬ್ದಾರಿಯುತ ಸ್ಥಾನದಲ್ಲಿ ತಾವು ಕುಳಿತಿದ್ದೀರಿ. ಇಂಥ ಘಟನೆಗಳಲ್ಲಿ ಈಗಾಗಲೇ ಮಾನ್ಯ ದೇಶಪಾಂಡೆಯವರು ಹೇಳಿದ ಹಾಗೆ ಇವತ್ತೂ ಏನೂ ಆಗಲಿಲ್ಲ. ಅದಕ್ಕೆ ನಾನು ಹೇಳತಕ್ಕದ್ದು ತಪ್ಪಿತಸ್ಥರ ಮೇಲೆ ಕ್ರಮವನ್ನು ತೆಗೆದುಕೊಳ್ಳಬೇಕಾಗುತ್ತದೆ. ಪೊಲೀಸ್ ಇಲಾಖೆಯ ಮುಖ್ಯಸ್ಥರು ಅಲ್ಲೇ ಬಿಡಾರವನ್ನು ಹೂಡಬೇಕಾಗುತ್ತದೆ, ಮಾತನಾಡಬೇಕಾಗುತ್ತದೆ. ಎಲ್ಲಾ ಜನರಲ್ಲಿ ಮಾತನಾಡಿ ಎಲ್ಲಾ ಸೆಕ್ಷನ್‌ನಲ್ಲೂ ವಿಶ್ವಾಸವನ್ನು ಮೂಡಿಸುವ ಕೆಲಸವನ್ನು ಮಾಡಬೇಕಾಗುತ್ತದೆ. ಮಾನ್ಯ

ದೇಶಪಾಂಡೆಯವರು ಹೇಳಿದ ಹಾಗೆ ಇಲ್ಲಿಯವರೆಗೆ ಅಲ್ಲಿ ಆ ಒಂದು ಕೆಲಸ ಆಗಿಲ್ಲ. ಡಾ॥ ವಿ.ಎಸ್.ಆಚಾರ್‌ರವರು ಗೊತ್ತು. ನಾನು 1980 ರಲ್ಲಿ ಹೆಚ್‌ಯುಡಿ ಮಿನಿಸ್ಟರ್ ಆಗಿದ್ದಾಗ ಉಡುಪಿ ನಗರಸಭೆಯ ಅಧ್ಯಕ್ಷರಾಗಿದ್ದರು. ನನಗೆ ಇಲ್ಲಿ ಕುಳಿತಿರುವವರೆಲ್ಲರೂ ಗೊತ್ತು. ಆದರೆ ಇದು ಡಾ॥ ವಿ.ಎಸ್. ಆಚಾರ್‌ರವರ ಕಡೆಯಿಂದ ಆಗತಕ್ಕ ಕೆಲಸವಲ್ಲ. ಡಾ॥ ವಿ.ಎಸ್. ಆಚಾರ್‌ರವರನ್ನು ಕಳುಹಿಸುತ್ತೇವೆ, ಮಾನ್ಯ ರಾಮಚಂದ್ರಗೌಡರನ್ನು ಕಳುಹಿಸುತ್ತೇವೆಂದರೆ ಹೇಗೆ ಆಗುತ್ತದೆ? ಅಲ್ಲಿ ಆಗಲಿಕ್ಕೇ ಸಾಧ್ಯವಿಲ್ಲ. ಇವತ್ತು ಬಹಳ ಗಟ್ಟಿತನದಿಂದ ನಿಲುವನ್ನು ತೆಗೆದುಕೊಳ್ಳಬೇಕಾಗುತ್ತದೆ. ಉಡುಪಿಯಲ್ಲಿ ಆಗತಕ್ಕ ಗಲಭೆ ಬಗ್ಗೆ ಒಂದು ಬಂದ್ ಆಚರಣೆಯನ್ನು ಮಾಡಿ ಎಂದು ಹೇಳಿ ಇಲ್ಲಿ ಬಂದು ಶಾಂತಿ ತರಲು ಕ್ರಮ ಕೈಗೊಳ್ಳುವುದನ್ನು ಯಾರೂ ಕೂಡ ಒಪ್ಪುವುದಿಲ್ಲ. ಅದಕ್ಕೆ ನಾನು ಹೇಳುತ್ತಿದ್ದೇನೆ ತಮ್ಮ ಮುಖೇನ, ಇವತ್ತು ಇಲ್ಲಿ ಮಾನ್ಯ ಉಪಮುಖ್ಯಮಂತ್ರಿಗಳಿದ್ದಾರೆ, ಈ ಎಲ್ಲಾ ಕಡೆಗೆ ನಿಮ್ಮ ಸಂಘಟನೆ, ಎಲ್ಲಾ ಕಡೆಗೆ ನೀವು ಆದೇಶವನ್ನು ಕೊಡತಕ್ಕ ರೀತಿಯಲ್ಲಿ ಮಾಡಬೇಕೆಂದು ಹೋದರೆ ನಾವೂ ಕೂಡ ಕೈ ಕಟ್ಟಿಕೊಂಡು ಕುಳಿತುಕೊಳ್ಳುವುದಿಲ್ಲ ನಾವೆಲ್ಲಾ ಭಟ್ಕಳಕ್ಕೆ ಹೋಗುತ್ತೇವೆ. ಸಾರ್ವಜನಿಕ ಸಭೆಯನ್ನುದ್ದೇಶಿಸಿ ಮಾತನಾಡುತ್ತೇವೆ. ಮುಖ್ಯಮಂತ್ರಿಗಳ ಮೇಲೆ ಹೇಳುತ್ತೇವೆ. ಇವತ್ತು ಮುಖ್ಯಮಂತ್ರಿಗಳು ಇಂಥ ಘಟನೆ ಬಗ್ಗೆ ಸದನಕ್ಕೆ ಬಂದು ಯಾವ ರೀತಿಯಾದ ಕ್ರಮ ತೆಗೆದುಕೊಂಡಿದ್ದೇವೆ, ಗೃಹ ಇಲಾಖೆ ನನ್ನ ಬಳಿ ಇದೆ, ಎಲ್ಲಾ ಕಡೆಗೆ ರಾಜ್ಯದಲ್ಲಿ ಮಾಡುತ್ತಿದ್ದೇವೆ ಎನ್ನುವ ಮಾತನ್ನು ಹೇಳಬೇಕಾಗಿತ್ತು. ಈಗಾಗಲೇ ಹುಬ್ಬಳ್ಳಿಯಲ್ಲಿ ಬೆಂಕಿಯನ್ನು ಹಚ್ಚಿಬಿಟ್ಟಿದ್ದಾರೆ. ನನ್ನ ಕಾಲದಲ್ಲಿ ಹೋದ ಸಲ ನಾವೇನು affidavit ಅನ್ನು ಕೊಟ್ಟಿದ್ದೇವು, ಇವತ್ತು ಹೇಳಲಾರದೆ ಕೇಳಲಾರದೆ ಮಾಡಿದ್ದಾರೆ. ನಾವು ಮಾನ್ಯ ಜಗದೀಶ್ ಶೆಟ್ಟರ್ ಅವರಲ್ಲಿ ಕೇಳಿದೆವು. ಇಲ್ಲಾ, ಮತ್ತೊಮ್ಮೆ ಸಮಾಲೋಚನೆ ಮಾಡಿ ಹೇಳುತ್ತೇವೆಂದು ಹೇಳಿದ್ದಾರೆ. ಈ ತರಹದ ಕೆಲಸಗಳು ನಡೆಯುವುದಕ್ಕೆ ಆಗುವುದಿಲ್ಲ. ಇದೆಲ್ಲಾ ಪ್ರಯೋಗ ಮಾಡಿದ್ದೀರಿ. ಎನ್‌ಡಿಎ ಸರ್ಕಾರದಲ್ಲಿ ಪ್ರಯೋಗ ಮಾಡಿ ಸೋತುಹೋಗಿದ್ದೀರಿ. ಮತ್ತೆ ಇವತ್ತಿನ ದಿವಸ ರಥಯಾತ್ರೆ ಮುಖಾಂತರ ಪ್ರಾರಂಭ ಮಾಡತಕ್ಕ ರೀತಿಯಲ್ಲಿ ಆಗುತ್ತದೆ. ಇದೇ ಸಂದರ್ಭದಲ್ಲಿ ಹೇಳುತ್ತಿದ್ದೇನೆ, ಎಲ್ಲಾ ರಥಯಾತ್ರೆಗಳು ಮುಗಿದುಹೋಗಿವೆ. ಕಡೆಗೆ ನಾನು ಮೊನ್ನೆ ಹೇಳಿದೆ. ಆ ಮಾತನ್ನು ಹೇಳಲು ಬಯಸುತ್ತಿಲ್ಲ. ಇವತ್ತು ಸೂಕ್ಷ್ಮವಾದ ವಿಚಾರದಲ್ಲಿ ತಾವು ರಾಜ್ಯವನ್ನು ನಡೆಸತಕ್ಕ ಸಂದರ್ಭದಲ್ಲಿ ತಾವು ಉಪಮುಖ್ಯಮಂತ್ರಿಗಳಾಗಿ ಕುಳಿತಿದ್ದೀರಿ, ಇವತ್ತೇನು ಭಟ್ಕಳದಲ್ಲಿ ಗಲಭೆಯಾಗಿದೆ ಅದನ್ನು ಯಾವ ತರಹ ನಿಯಂತ್ರಣವನ್ನು ಮಾಡುತ್ತೀರಿ? What is your plan of action? ಯಾವ ತರಹ ನಿಯಂತ್ರಣವನ್ನು ಮಾಡುತ್ತೀರಿ? ಅದರ ಬಗ್ಗೆ ಸ್ಪಷ್ಟವಾದ ಹೇಳಿಕೆ ಕರ್ನಾಟಕದ ಜನತೆಗೆ ವಿಶೇಷವಾಗಿ ಭಟ್ಕಳ ಜನತೆಗೆ ಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು : ಈಗ ಇದನ್ನು ನಿಯಮ 69ಕ್ಕೆ ಪರಿವರ್ತನೆ ಮಾಡಿದ್ದೇನೆ. ಈಗ ಬಹಳ ಜನರು ಮಾತನಾಡುವವರು ಇರುವುದರಿಂದ, ಪ್ರಶ್ನೋತ್ತರವಾದ ಮೇಲೆ ಇದನ್ನು ಇವತ್ತೇ ತೆಗೆದುಕೊಳ್ಳುತ್ತೇನೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಮಾನ್ಯ ಅಧ್ಯಕ್ಷರೇ, ನಾವೆಲ್ಲಾ ಅದಕ್ಕೆ ಸಹಿಯನ್ನು ಮಾಡಿದ್ದೇವೆ.

ಅಧ್ಯಕ್ಷರು : ಪ್ರಶ್ನೋತ್ತರವಾದ ಮೇಲೆ ತೆಗೆದುಕೊಳ್ಳೋಣ.

ಶ್ರೀ ವಾಟಾಳ್ ನಾಗರಾಜ್ : ನಾವೆಲ್ಲಾ ಐದೈದು ನಿಮಿಷ ಮಾತನಾಡುತ್ತೇವೆ.

ಅಧ್ಯಕ್ಷರು : ನಿಮಗೆ ಕೊಡುತ್ತೇನಲ್ಲ. ಇದನ್ನು ನಿಯಮ 69ರ ಕೆಳಗೆ ಪರಿವರ್ತನೆ ಮಾಡಿದ್ದೇನೆ. ಇದರ ಬಗ್ಗೆ ಈ ಕಡೆಯುವರೂ ಕೆಲವರು ಮಾತನಾಡುವವರಿದ್ದಾರೆ. ಪ್ರಶ್ನೋತ್ತರವಾದ ತಕ್ಷಣವೇ ತೆಗೆದುಕೊಳ್ಳುತ್ತೇನೆ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೇ, ಅದು ನಿಯಮ 69ರ ಅಡಿಯಲ್ಲಿ ಬೇಡಿ. ಅದನ್ನು ನಿಲುವಳಿ ಸೂಚನೆಯಾಗೇ ಮಾಡಿ. ಅದು ಬಹಳ ಪ್ರಾಮುಖ್ಯತೆ ಇದೆ.

ಶ್ರೀ ಬಿ.ಎಸ್. ಯಡಿಯೂರಪ್ಪ (ಉಪ ಮುಖ್ಯಮಂತ್ರಿಗಳು) : ಮಾನ್ಯ ಅಧ್ಯಕ್ಷರೇ, ಭಟ್ಕಳ ಜನತೆಗೆ ಇಲ್ಲಿ ಒಂದು ಸಂದೇಶ ಹೋಗಬೇಕಾಗಿದೆ. ಸನ್ಮಾನ್ಯ ವಿರೋಧ ಪಕ್ಷದ ನಾಯಕರಾದ ನಮ್ಮ ಮಾಜಿ ಮುಖ್ಯಮಂತ್ರಿಗಳು ಮತ್ತು ಮಾನ್ಯ ದೇಶಪಾಂಡೆಯವರು ಮಾತನಾಡಿದ್ದಾರೆ. ತಾವು ಕೊಟ್ಟಂಥ ಸಲಹೆಯಂತೆ, ಒಂದು ನಿಮಿಷ. ನಾನು ಉತ್ತರವನ್ನು ಕೊಡುತ್ತಿಲ್ಲ.

(ಗೊಂದಲ)

Sri R.V. Deshpande : You have got a right to reply. ಆಮೇಲೆ ತಾವು ಉತ್ತರವನ್ನು ಕೊಡಿ.

ಅಧ್ಯಕ್ಷರು : ನಾನು ಅವಕಾಶ ಕೊಡುತ್ತೇನೆ. ದಯಮಾಡಿ ಕುಳಿತುಕೊಳ್ಳಿ. ಮಾನ್ಯ ಯಡಿಯೂರಪ್ಪನವರೇ, ಅಲ್ಲೆಲ್ಲಾ ಕೆಲವರು signatories ಇದ್ದಾರೆ, ಇವರೂ ಮಾತನಾಡುತ್ತಿದ್ದಾರೆ. ಪ್ರಶ್ನೋತ್ತರವಾದ ಮೇಲೆ ತೆಗೆದುಕೊಳ್ಳುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ನಾನು ಕೊನೆಗೆ ಉತ್ತರವನ್ನು ಕೊಡುತ್ತೇನೆ. ಒಂದು ಸಾರಿ ಇದರ ಬಗ್ಗೆ ಪ್ರಸ್ತಾಪ ಮಾಡುವುದಕ್ಕೆ ಅವಕಾಶವನ್ನು ಕೊಟ್ಟರೆ ಅದನ್ನು ಮುಗಿಸಿಬಿಡಿ. ರಿಪ್ಲೈ ಕೊಟ್ಟಮೇಲೆ ಬೇರೆ ವಿಷಯಕ್ಕೆ ಹೋಗೋಣ.

(ಗೊಂದಲ)

Sri G.V. Sreeramareddy : Preliminary submission ಅನ್ನು ನಾವು ಮಾಡಬೇಕಾಗಿದೆ. ನಾವೆಲ್ಲಾ signatories.

ಅಧ್ಯಕ್ಷರು : ದಯಮಾಡಿ ಪ್ರಶ್ನೋತ್ತರವಾದ ಮೇಲೆ ತೆಗೆದುಕೊಳ್ಳುತ್ತೇನೆ. ದಯಮಾಡಿ ಎಲ್ಲರೂ ಕುಳಿತುಕೊಳ್ಳಿ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ನಾವೆಲ್ಲಾ ಸಿಗ್ನೆಟೇರೀಸ್, ನಮಗೆ ಮಾತನಾಡಲು ತಾವು ಅವಕಾಶವನ್ನು ಕೊಡಬೇಕು.

ಶ್ರೀ ವಾಟಾಳ್ ನಾಗರಾಜ್ : ಎರಡೆರಡು ನಿಮಿಷ ಅವಕಾಶವನ್ನು ಕೊಟ್ಟುಬಿಡಿ.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೇ, ನಾವು ಕುಳಿತುಕೊಳ್ಳುವುದಕ್ಕೆ ತಯಾರಿದ್ದೇವೆ. ಈ ವಿಷಯವನ್ನು ಮುಗಿಸಿಬಿಟ್ಟು ಬೇರೆ ವಿಷಯವನ್ನು ತೆಗೆದುಕೊಳ್ಳಿ.

ಅಧ್ಯಕ್ಷರು : ಈಗಲೇ ತೆಗೆದುಕೊಂಡುಬಿಡುವುದು ಎನ್ನುತ್ತೀರಾ. ಆಯಿತು. ಈಗ ನಿಯಮ 69ಕ್ಕೆ ನಾನು convert ಮಾಡಿದ್ದೇನೆ. ನಿಮಗೆ ಅವಕಾಶವನ್ನು ಕೊಡುತ್ತಿದ್ದೇನೆ.

ಶ್ರೀ ಆರ್. ರೋಷನ್ ಬೇಗ್ (ಜಯಮಹಲ್) : ಮಾನ್ಯ ಅಧ್ಯಕ್ಷರೇ, ಈಗತಾನೇ ಸನ್ಮಾನ್ಯ ವಿರೋಧ ಪಕ್ಷದ ನಾಯಕರು ಹಾಗೂ ಸನ್ಮಾನ್ಯ ದೇಶ್‌ಪಾಂಡೆಯವರು ಭಟ್ಕಳ ಗಲಭೆ ಬಗ್ಗೆ ಮಾತನಾಡಿದ್ದಾರೆ. ನಾನು ಈ ಬಗ್ಗೆ ಒಂದು politicize ಮಾಡಬೇಕು, ಇದಕ್ಕೆ ನಿಮ್ಮ ಮೇಲೆ ಆರೋಪವನ್ನು ಮಾಡಬೇಕು ಎಂದು ನಾನೇನೂ ಇವತ್ತು ನಿಂತುಕೊಂಡಿಲ್ಲ. ನಾನು ಇವತ್ತು ಬೆಳಿಗ್ಗೆ ಪೇಪರನ್ನು ನೋಡಿ ಬಹಳ ಗಾಬರಿಯಾಯಿತು ಸಭಾಧ್ಯಕ್ಷರೇ. ಸನ್ಮಾನ್ಯ ಯಡಿಯೂರಪ್ಪನವರು ಮಾನ್ಯ ಉಪ ಮುಖ್ಯಮಂತ್ರಿಗಳವರು ನಿನ್ನೆ ಉಡುಪಿಯಿಂದ ಒಂದು ಹೇಳಿಕೆಯನ್ನು ಕೊಟ್ಟಿದ್ದಾರೆ. ಇವತ್ತು ಹಿಂದೂ ಪತ್ರಿಕೆಯಲ್ಲಿ ಅದು ಬಂದಿದೆ. ಏನು ಹೇಳಿಕೆಯನ್ನು ಕೊಡುತ್ತಾರೆಂದರೆಃ 'Government is a aware of ISI activities in Bhatkal'. Mr. Yediyurappa proposes stern action against people who provide shelter to terrorists. ಮುಂದೆ ಹೇಳಿಕೊಂಡು ಹೋಗುತ್ತಾರೆ, 'Mr. Deputy Chief Minister claimed on Sunday that the State Government has information about ISI activities in Bhatkal of Uttara Kannada district. Mr. Yediyurappa said that he will urge the Chief Minister H.D. Kumaraswamy to take stern action against people who provide shelter to terrorists in Bhatkal which is a sensitive area'. ಈಗ ಸನ್ಮಾನ್ಯ ಡೆಪ್ಯುಟಿ ಚೀಫ್ ಮಿನಿಸ್ಟರ್ ಅವರು ಐಎಸ್‌ಐ ಆಕ್ಟಿವಿಟೀಸ್ ಭಟ್ಕಳ್‌ನಲ್ಲಿ ಇದೆ ಎಂದು ಹೇಳಿದ್ದಾರೆ. ನಾನೇನೂ ಇಲ್ಲಿ ಐಎಸ್‌ಐಗೆ ಸಪೋರ್ಟ್ ಮಾಡಲು ಕುಳಿತುಕೊಂಡಿಲ್ಲ. ಐಎಸ್‌ಐನವರು ಎಲ್ಲಿದ್ದರೂ ಅವರನ್ನು ಶೂಟ್ ಡೌನ್ ಮಾಡಿ. ಎನ್‌ಕೌಂಟರ್‌ನಲ್ಲಿ ಕೊಂದು ಹಾಕಿಬಿಡಿ. ನಾವು ಅದಕ್ಕೆಲ್ಲಾ ಸಪೋರ್ಟ್ ಮಾಡುತ್ತೇವೆ. ಯಾರು ದೇಶದ್ರೋಹಿಗಳು ಇದ್ದಾರೆ, ಈ ರಾಜ್ಯದಲ್ಲಿ, ಈ ದೇಶದಲ್ಲಿ ಇದ್ದಾರೆ, ಅವರನ್ನು

ಹಿಡಿದು ಕೊಂದು ಹಾಕಿ. we are for that ಆದರೆ ಡೆಪ್ಯುಟಿ ಚೀಫ್ ಮಿನಿಸ್ಟರ್ ಅವರು ಉಡುಪಿಯಲ್ಲಿ ದಿಢೀರ್ ಎಂದು ನಿನ್ನೆ ಉಡುಪಿಯಲ್ಲಿ ಭಟ್ಕಳದಲ್ಲಿ ಐಎಸ್‌ಐ ಆಕ್ಟಿವಿಟೀಸ್ ನವರಿದ್ದಾರೆ ಎಂದು ಹೇಳಿದ್ದಾರೆ. I want a white paper. ಯಾರ್‍ಯಾರು ಇದ್ದಾರೆ ಎಂಬ ಬಗ್ಗೆ ನಿಮ್ಮ ಹತ್ತಿರ ಏನೇನು ಇನ್‌ಫರ್ಮೇಷನ್ ಇದೆ ದಯವಿಟ್ಟು ಕೊಡಿ. ಮುಂದೆ ಹೋಗಿ ಹೇಳುತ್ತಾರೆ? The Central Intelligence agencies have long spoken about the terrorist activities in Bhatkal ಎಂದೂ ಕೂಡ ಹೇಳುತ್ತಾರೆ. ಯಾರ್‍ಯಾರು ಭಟ್ಕಳದಲ್ಲಿದ್ದಾರೆ, ಅವರ ಹೆಸರುಗಳು ಏನು? ಎಲ್ಲಿ ಶೆಲ್ಟರ್ ಕೊಟ್ಟಿದ್ದರು? ಅವರು ಎಷ್ಟು ಜನ ಇದ್ದರು ಎಂದು ಡೀಟೇಲ್ ಆಗಿ ಉತ್ತರ ಕೊಡುವಾಗ ಕೊಡಬೇಕೆಂದು ನಾನು ಸರ್ಕಾರಕ್ಕೆ ವಿನಂತಿ ಮಾಡುತ್ತೇನೆ.

ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) : ಮಾನ್ಯ ಅಧ್ಯಕ್ಷರೆ, ಭಟ್ಕಳ್ ಘಟನೆ ಇದೊಂದು ಬಹಳ ಗಂಭೀರವಾದಂತಹ ಪ್ರಶ್ನೆ. ನಾವು ಈ ಸದನದ ಮೂಲಕ ಆ ಪ್ರದೇಶದ ಜನತೆಗೆ ಅತ್ಯಂತ ಕಳಕಳಿಯಿಂದ ಮನವಿ ಮಾಡುತ್ತೇವೆ. ಈ ಕೋಮು ಗಲಭೆಯಿಂದ ಒಂದು ಒಳ್ಳೆಯ ವಾತಾವರಣ ನಿರ್ಮಾಣ ಆಗುವುದಿಲ್ಲ. ಶಾಂತ ವಾತಾವರಣ ತರುವುದಕ್ಕೆ ಎಲ್ಲಾ ವರ್ಗದ ಜನ ಸಹಕರಿಸಬೇಕು ಎಂದು ಹೇಳಿ ಈ ಸದನದ ಮೂಲಕ ಮನವಿಯನ್ನು ಮಾಡುತ್ತೇನೆ. ಅದರ ಜೊತೆಗೆ ಇವತ್ತು ಮಾನ್ಯ ಯಡಿಯೂರಪ್ಪನವರ ಹೇಳಿಕೆ ಮತ್ತು ಮಾನ್ಯ ಮುಖ್ಯಮಂತ್ರಿಗಳ ಹೇಳಿಕೆ ವಿಚಾರ. ಮಾನ್ಯ ಯಡಿಯೂರಪ್ಪನವರು ಐಎಸ್‌ಐ ತಾಣ ಇದೆ ಎಂದು ಹೇಳಿ ಅದು ನಡೆದಿದೆ ಎನ್ನುವ ಮಾತನ್ನು ಅವರು ಹೇಳಿದ್ದಾರೆ. ಮಾನ್ಯ ಮುಖ್ಯಮಂತ್ರಿಯವರು ರಾಜಕೀಯ ಪ್ರೇರಿತ ಎನ್ನತಕ್ಕ ಮಾತನ್ನು ಇವರು ಹೇಳಿದ್ದಾರೆ. ಇವರಿಬ್ಬರಲ್ಲೂ ಮಾತು ಬಹಳ ಗೊಂದಲವಾಗಿದೆ. ಮಾನ್ಯ ಉಪಮುಖ್ಯಮಂತ್ರಿಗಳು ಒಂದು ಹೇಳಿಕೆ ನೀಡುತ್ತಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳು ಮತ್ತೊಂದು ಹೇಳಿಕೆ ನೀಡುತ್ತಿದ್ದಾರೆ. ಎರಡರ ಬಗ್ಗೆ ಇಲ್ಲಿ ಸಮಗ್ರವಾದಂತಹ ಹೇಳಿಕೆಯನ್ನು ನೀಡಬೇಕು. ಮಾನ್ಯ ಉಪಮುಖ್ಯಮಂತ್ರಿಗಳಾದ ಶ್ರೀಮಾನ್ ಯಡಿಯೂರಪ್ಪನವರು ಉಡುಪಿಯಲ್ಲಿ ಏನು ಹೇಳಿಕೆ ನೀಡಿದ್ದಾರೆ? ಐಎಸ್‌ಐ ತಾಣ ಇದೆ ಎಂದಿದ್ದಾರೆ. ಎಲ್ಲಿದೆ ತಾಣ? ಅದು ಹೊಂದಿದ್ದರೆ ಅಪಾಯಕಾರಿ ಬೆಳವಣಿಗೆ. ಕರ್ನಾಟಕಕ್ಕೆ ನಿಜಕ್ಕೂ ಅದು ಅಪಾಯಕಾರಿ ಬೆಳವಣಿಗೆ. ಯಾವಾಗ ಬಂದಿದ್ದಾರೆ? ಯಾವತ್ತು ಬಂದರು? ಈ ರಾಜ್ಯಕ್ಕೆ ಎಲ್ಲಿಂದ ಬಂದಿದ್ದಾರೆ? ಎಷ್ಟು ದಿನಗಳಿಂದ ಇಲ್ಲಿ ತಾಣ ಇದೆ? ಎಲ್ಲೆಲ್ಲಿ ನಡೆದಿದೆ ಎಂದು ಸಮಗ್ರವಾದಂತಹ ವಿವರ ಸರ್ಕಾರದಲ್ಲಿದೆ. ಅವರು ಸರ್ಕಾರ ನಡೆಸತಕ್ಕವರು. ಸರ್ಕಾರದಲ್ಲಿ ಇದ್ದ ಮೇಲೆ ಅವರಿಗೆ ಗುಪ್ತಚಾರದ ಇಲಾಖೆಯಿಂದ ಮಾಹಿತಿ ಬಂದಿರಬೇಕು. ಯಾವ್ಯಾವ ರೀತಿ ಬಂದಿದ್ದಾರೆ ಭಯೋತ್ಪಾದಕರು? ಏನೇನು ಮಾಡುತ್ತಿದ್ದಾರೆ? ಕರ್ನಾಟಕದ ಪರಿಸ್ಥಿತಿ ಏನು? ಸರ್ಕಾರ ಈ ಬಗ್ಗೆ

ಕೈಗೊಂಡಿರತಕ್ಕ ಕ್ರಮಗಳು ಏನು? ಅದೆಲ್ಲವನ್ನೂ ಸವಿಸ್ತಾರವಾಗಿ ಈ ಸದನದ ಮುಂದೆ ಮಂಡಿಸಬೇಕು. ಇದೆಲ್ಲಕ್ಕಿಂತ ಹೆಚ್ಚಾಗಿ ಮಾನ್ಯ ಮುಖ್ಯಮಂತ್ರಿಗಳು ರಾಜಕೀಯ ಪ್ರೇರಿತ ಎಂದು ಹೇಳಿದ್ದಾರೆ. ಯಾವ ರಾಜಕಾರಣ? ರಾಜಕೀಯ ಮುಖ್ಯಸ್ಥರು ಯಾರು ಇದ್ದಾರೆ? ಕಾರಣಗಳೇನು ಎಂದು ಅವರು ಮಂಡಿಸಬೇಕು. ಪೊಲೀಸ್ ವಿಚಾರದಲ್ಲಿ ನನಗೆ ಅನಿಸುತ್ತದೆ. ವಿನಾಕಾರಣ ಅವರನ್ನು ಟೀಕೆ ಮಾಡಬೇಕು ಎಂಬ ಉದ್ದೇಶ ನನಗೆ ಇಲ್ಲ. ಎಲ್ಲಿ ಅವರು ಜಟಕಾ ಒಂದು ದೇವರ ಮೂರ್ತಿ, ಅದಕ್ಕೆ ಜಖಂ ಆದಾಗ ಎಷ್ಟು ಭದ್ರವಾಗಿ ಎಚ್ಚರಿಕೆಯಿಂದ ಪೊಲೀಸ್‌ನವರು ಎಚ್ಚರ ವಹಿಸಬೇಕಾಗಿತ್ತು. ಆ ಎಚ್ಚರವನ್ನು ವಹಿಸದೇ ಇರತಕ್ಕದ್ದೇ ಭಟ್ಕಳ್‌ದಲ್ಲಿ ಇವತ್ತು ಆಗಿರತಕ್ಕಂಥ ಪರಿಸ್ಥಿತಿಗೆ ಕಾರಣ. ಆದರೆ ನನಗನ್ನಿಸುತ್ತದೆ. ಇದು ಇಲ್ಲೇ ತೀರ್ಮಾನ ಅಗುವುದಿಲ್ಲ. ನಾನು ಸರ್ಕಾರಕ್ಕೆ ಅತ್ಯಂತ ಕಳಕಳಿಯಿಂದ ಮನವಿ ಮಾಡುತ್ತಿದ್ದೇನೆ. ಮಾನ್ಯ ವಿರೋಧ ಪಕ್ಷದ ನಾಯಕರೂ ಅದನ್ನು ಹೇಳಿದ್ದಾರೆ. ಇದು ಸಂಪೂರ್ಣವಾಗಿ ಸಿಬಿಐ ತನಿಖೆ ಆಗಲೇಬೇಕು. ಅವರು ಹೇಳಲಿ. ಇದಕ್ಕೆ ಏಕೆ ಹಿಂದೆಮುಂದೆ ನೋಡಬೇಕು? ಈ ಕಡೆ ಮಾನ್ಯ ಯಡಿಯೂರಪ್ಪನವರು ಕುಳಿತಿದ್ದಾಗ ಅನೇಕ ಸಾರಿ ಸಿಬಿಐ ತನಿಖೆ ಮಾಡಬೇಕು ಎಂದು ಹೇಳಿದ್ದಾರೆ. ಇದನ್ನು ಸಿಬಿಐ ತನಿಖೆಗೆ ನಾವು ನೇರವಾಗಿ ಒಪ್ಪಿಸಿದ್ದೇವೆ ಎಂದು ಹೇಳಿ. ಮಾನ್ಯ ಯಡಿಯೂರಪ್ಪನವರು ಹೇಳಲಿ. ಈ ಬಗ್ಗೆ ಏನಾಗಿದೆ ಎಂದರೆ ರಾಜ್ಯದಲ್ಲಿ ಬರೇ ಭಟ್ಕಳ್ ಒಂದೇ ಅಲ್ಲ. ಇಡೀ ಕರ್ನಾಟಕದಲ್ಲಿ ಎಲ್ಲೋ ಒಂದು ಕಡೆ ಅಲ್ಪಸಂಖ್ಯಾತರು, ಭಯಭೀತಿ ವಾತಾವರಣದಲ್ಲಿ ಬಂದಿದ್ದಾರೆ. ಈ ಭಯಭೀತಿಯ ವಾತಾವರಣ ಹೋಗಲಾಡಿಸಬೇಕಾದರೆ ಸರ್ಕಾರ ತನ್ನ ನಿಜ ಸ್ವರೂಪವನ್ನು ಹೊರಗಡೆ ತರಬೇಕಾಗಿದೆ. ಆದ್ದರಿಂದ ಇದನ್ನು ನಿಲುವಳಿ ಸೂಚನೆ ಆಗಿ ಪರಿವರ್ತನೆ ಮಾಡಲು ತೀರ್ಮಾನ ತೆಗೆದುಕೊಳ್ಳಬೇಕು. ಈಗ ನಿಯಮ 69ರ ಕೆಳಗೆ ಎನ್ನುವುದಕ್ಕಿಂತ ಹೆಚ್ಚಾಗಿ ಇದಕ್ಕೆ ಬಹಳ ಮಹತ್ವ ಇದೆ. ನಿಲುವಳಿ ಸೂಚನೆ ಆದರೆ ಅದಕ್ಕೆ ಒಂದು ಶಕ್ತಿ ಬರುತ್ತದೆ ಎಂದು ಹೇಳಿ ನಾನು ಒತ್ತಾಯ ಮಾಡುತ್ತೇನೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ (ಬಾಗೇಪಲ್ಲಿ) : ಮಾನ್ಯ ಅಧ್ಯಕ್ಷರೆ, ದಿನಾಂಕ 20ರಿಂದ ಭಟ್ಕಳ್‌ದಲ್ಲಿ ಇಂತಹ ಪರಿಸ್ಥಿತಿ ನಿರ್ಮಾಣ ಆಗಿದೆ. 30ನೇ ತಾರೀಖು ಕೊಲೆ ನಡೆದಿದೆ. ಈ ಘಟನೆಗೆ ಕಾರಣವನ್ನು ಮಾನ್ಯ ದೇಶಪಾಂಡೆಯವರು ವಿವರಿಸಿದ್ದಾರೆ. ಎಡಿಬಿ ಯವರು ಕುಡಿಯುವ ನೀರಿನ ಯೋಜನೆಗೆ ಭೂಮಿ ಸ್ವಾಧೀನಪಡಿಸಿಕೊಳ್ಳತಕ್ಕಂಥ ಪ್ರಕ್ರಿಯೆಯನ್ನು ಪ್ರಾರಂಭ ಮಾಡಿದರು. ಮುನಿಸಿಪಾಲಿಟಿಯವರು ಅವರಿಗೆ ಜಮೀನನ್ನು ಮಂಜೂರು ಮಾಡಿದ್ದಾರೆ. ತಹಶೀಲ್ದಾರ್ ಅವರು ಎಲ್ಲಾ ಹೋಗಿ, ಎಡಿಬಿನವರೂ ಹೋಗಿ ಭೂಮಿಯನ್ನು

ಅಳತೆ ಮಾಡತಕ್ಕಂಥ ಸಂದರ್ಭದಲ್ಲಿಯೇ ಅಲ್ಲಿ ಗಲಭೆ ಆಗಿದೆ. ಇದು 20ನೇ ತಾರೀಖಿನ ದಿವಸ. ಕೊಲೆ ಆಗಿರತಕ್ಕಂಥದ್ದು 29ನೇ ತಾರೀಖು. ಇಲ್ಲಿಯವರೆಗೂ ಸರ್ಕಾರದ ಗಮನಕ್ಕೆ ಈ ವಿಚಾರ ಬರಲಿಲ್ಲವೇ? ಹೇಳಿ ಕೇಳಿ ಭಟ್ಕಳ್ ಸೂಕ್ಷ್ಮ ಪ್ರದೇಶ ಎಂದು ಹೇಳಿ ಕರ್ನಾಟಕ ರಾಜ್ಯದ ಎಲ್ಲರಿಗೂ ಗೊತ್ತಿದೆ. ಅಂತಹ ಜಾಗದಲ್ಲಿ 20ನೇ ತಾರೀಖೇ ಈ ಸೂಚನೆ ಕಂಡುಬಂದಾಗ ಜಟಕಾ ದೇವರ ಜಾಗದಲ್ಲಿ ಗುಡಿ ಕಟ್ಟಬೇಕು ಎಂದು ನಾವು ಗಲಭೆ ಎಬ್ಬಿಸಿದ್ದೇವೆ. ಗುಡಿ ಅಲ್ಲಿರಲಿಲ್ಲ ಅದು ಬೇರೆ ಪ್ರಶ್ನೆ. ಗುಡಿ ಇಲ್ಲದೇ ಇರತಕ್ಕಂಥ ಕಡೆ ಈ ದೇಶದಲ್ಲಿ ಗುಡಿ ಸೃಷ್ಟಿ ಆಗುತ್ತದೆ. ಗುಡಿ ಇರುವ ಕಡೆಗೆ ಕೆಡವಿ ಬಿಡತಕ್ಕದ್ದು ಬೆಳಿಗ್ಗೆನೇ ಆಗುತ್ತದೆ. ಅದು ಇರಲಿ. ನಾನು ಅದರ ಬಗ್ಗೆ ಚರ್ಚೆ ಮಾಡಲಿಕ್ಕೆ ಬರುವುದಿಲ್ಲ. ಅಲ್ಲಿ ಗುಡಿ ಇರಲಿಲ್ಲ. ಬರೇ ಕಲ್ಲು ದೇವರು ಇತ್ತು. ಆ ಜಾಗದಲ್ಲಿ ನಾವು ಗುಡಿ ಕಟ್ಟಬೇಕು. ನಾವು ಇದನ್ನು ನೀರಾವರಿಗೆ ಕುಡಿಯುವ ನೀರಿನ ಯೋಜನೆಗೆ ಜಾಗ ಬಿಟ್ಟು ಕೊಡಲಿಕ್ಕೆ ಆಗುವುದಿಲ್ಲ ಎಂದು ಹೇಳಿ ಅವರು ತಕರಾರು ತೆಗೆದಿದ್ದಾರೆ. ಈ ಪರಿಸ್ಥಿತಿ 20ನೇ ತಾರೀಖು ಆಗಿದೆ. ಸರ್ಕಾರ ಏನು ಮಾಡುತ್ತಿದೆ? ಸರ್ಕಾರದಲ್ಲಿ ಇಂಟೆಲಿಜೆನ್ಸಿ ಇಲ್ಲವೇ? ನನ್ನ ಲೆಕ್ಕದಲ್ಲಿ ಈ ರಾಜ್ಯದ ಇಂಟೆಲಿಜೆನ್ಸಿ ಸಂಪೂರ್ಣವಾಗಿ ವಿಫಲ ಆಗಿದೆ. ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್‌ನಲ್ಲಿ ಆದಂತಹ ಘಟನೆ ಬಗ್ಗೆ ಕೇಂದ್ರ ಸರ್ಕಾರ ಮೊದಲೇ ಇನ್‌ಫರ್ಮೇಷನ್ ಕೊಟ್ಟಿದೆ. ಇಲ್ಲಿ ಈ ತರಹ ಘಟನೆ ನಡೆಯತಕ್ಕ ಸೂಚನೆ ಇದೆ ಎಂದು ಹೇಳಿ ಮಾಹಿತಿ ಕೊಟ್ಟಿದೆ. ಆಗಲೂ ಕೂಡ ಈ ರಾಜ್ಯದ ಪೊಲೀಸ್‌ನವರು ಎಚ್ಚರ ವಹಿಸಲಿಲ್ಲ. ಎಡಿಬಿಯವರು ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳಲಿಕ್ಕೆ ಹೋಗುತ್ತಿದ್ದಾರೆ. ಮಾತಿನ ಚಕಮಕಿ ನಡೆದಿದೆ. ಗಲಭೆ ಪ್ರದೇಶದ ಬಗ್ಗೆ ಗಲಾಟೆ ನಡೆದಿದೆ ಎಂದು ಹೇಳತಕ್ಕಂಥದ್ದು ಸರ್ಕಾರದ ಗಮನಕ್ಕೆ ಬಂದಿಲ್ಲವೇ? ಬಂದಿದ್ದರೆ 29ನೇ ತಾರೀಖಿನವರೆಗೆ ಸರ್ಕಾರ ಏನು ಮಾಡುತ್ತಿತ್ತು? ನನಗೆ ಅನ್ನಿಸತಕ್ಕದ್ದು ಸನ್ಮಾನ್ಯ ಅಧ್ಯಕ್ಷರೆ, ಬಹಳ ಗಂಭೀರವಾದಂತಹ ಒಂದು ಸಮಸ್ಯೆ ಇಲ್ಲಿ ಇದೆ. 20ನೇ ತಾರೀಖು ಪ್ರಾರಂಭವಾದಂತಹ ಈ ಗಲಭೆ 29ರಂದು ಕೊಲೆ ಆಗುವವರೆಗೆ ಸರ್ಕಾರದ ಗಮನಕ್ಕೆ ಬಂದಿಲ್ಲ ಎಂದು ಹ ೀಳಿದರೆ ನಾನು ಒಪ್ಪಲಿಕ್ಕೆ ತಯಾರು ಇಲ್ಲ. ಈ ಸರ್ಕಾರ ಏನೂ ಸತ್ತು ಹೋಗಿಲ್ಲ, ಬದುಕಿದೆ, ಇಂಟೆಂಜೆನ್ಸಿ ಇದೆ. ಈ ಸರ್ಕಾರದ ಗಮನಕ್ಕೆ ಆ ವಿಚಾರ ಬಂದಿದೆ. ಬಂದಿದ್ದರೂ ಕೂಡ ಉದ್ದೇಶಪೂರ್ವಕವಾಗಿ ಅದನ್ನು ಉದಾಸೀನ ಮಾಡಿದ್ದಾರೆ. ಇಲ್ಲದೇ ಇದ್ದಿದ್ದರೆ ಸರ್ಕಾರ ಆಗಲೇ ಎಚ್ಚತ್ತು ಸರಿಯಾದಂತಹ ಕ್ರಮ ತೆಗೆದುಕೊಂಡಿದ್ದರೆ ಈ ಅನಾಹುತ ನಡೆಯುತ್ತಿರಲಿಲ್ಲ. ಅಂದರೆ ಉದ್ದೇಶಪೂರ್ವಕವಾಗಿ ಈ ಗಲಭೆಗೆ ಪ್ರಚೋದನೆ ಮಾಡತಕ್ಕಂಥ ಉದ್ದೇಶ ಸರ್ಕಾರದ ಒಳಗಡೆ ಇರತಕ್ಕ ಕೆಲವರಿಗೆ ಇದೆ ಎನ್ನತಕ್ಕ ಗುಮಾನಿ ಖಂಡಿತವಾಗಿ

ಕೂಡ ಬರುತ್ತದೆ. ಎರಡನೇ ಅಂಶ ಈ ದಿವಸದವರೆಗೂ ಕೂಡ ಭಟ್ಕಳ್‌ಗೆ ಉನ್ನತ ಪೊಲೀಸ್ ಅಧಿಕಾರಿಗಳು ಭೇಟಿ ಕೊಟ್ಟಿಲ್ಲ. ಮಾನ್ಯ ಮುಖ್ಯಮಂತ್ರಿಗಳು ಭೇಟಿ ಕೊಟ್ಟಿಲ್ಲ. ಮಾನ್ಯ ಉಪ ಮುಖ್ಯಮಂತ್ರಿಗಳು ಭೇಟಿ ಕೊಟ್ಟಿಲ್ಲ. ಇನ್‌ಚಾರ್ಜ್ ಮಿನಿಸ್ಟರ್ ಮಾತ್ರ ಅಲ್ಲಿ ಹೋಗಿದ್ದಾರೆ. ಒಂದು ವಿಚಾರ ಇಲ್ಲಿ ಯಾರೂ ದಯವಿಟ್ಟು ತಪ್ಪು ತಿಳಿದುಕೊಳ್ಳತಕ್ಕಂಥ ಅವಶ್ಯಕತೆ ಇಲ್ಲ. ಉಡುಪಿಯಲ್ಲಿ ಬಂದ್‌ಗೆ ಕರೆ ಕೊಟ್ಟವರು ಯಾರು? ನೀವು ರಾಜಕಾರಣ ಮಾಡುವುದಿಲ್ಲ. ಮಾನ್ಯ ಮುಖ್ಯಮಂತ್ರಿಗಳ ಹೇಳಿಕೆ ಇದೆ, ರಾಜಕೀಯ ಪಕ್ಷಗಳ ಕೈವಾಡ ಇದರಲ್ಲಿ ಇದೆ ಎಂಬ ಹೇಳಿಕೆ ಇದೆ. ಯಾವ ರಾಜಕೀಯ ಪಕ್ಷದ ಕೈವಾಡ ಇದೆ ಎಂದು ಮಾನ್ಯ ಮುಖ್ಯಮಂತ್ರಿಗಳು ಸದನಕ್ಕೆ ಹೇಳಬೇಕಾಗುತ್ತದೆ. ಮತ್ತೆ ಇನ್ನೊಂದು ವಿಚಾರ, ಈ ಸರ್ಕಾರದಲ್ಲಿ ಹೊಂದಾಣಿಕೆ ಇಲ್ಲ ಎಂದು ಹೇಳತಕ್ಕಂಥದ್ದು ಬಹಳ ಸ್ಪಷ್ಟವಾಗಿ ಗೊತ್ತಾಗುತ್ತದೆ. ಮಾನ್ಯ ಉಪ ಮುಖ್ಯಮಂತ್ರಿಗಳ ಮತ್ತು ಮಾನ್ಯ ಮುಖ್ಯಮಂತ್ರಿಗಳ ಹೇಳಿಕೆಯಿಂದ ಗೊತ್ತಾಗುತ್ತದೆ, ಇವರಲ್ಲಿ ಹೊಂದಾಣಿಕೆ ಇಲ್ಲ ಎಂದು. ಮಾನ್ಯ ಉಪ ಮುಖ್ಯಮಂತ್ರಿಗಳ ಪ್ರಕಾರ ಐಎಎಸ್‌ನವರು ಅಲ್ಲಿ ಭಾರೀ ಚಟುವಟಿಕೆಯಿಂದ ಇದ್ದಾರೆ, ಆಕ್ಟೀವ್ ಆಗಿ ಇದ್ದಾರೆ. ಅದು ನಮ್ಮ ಗಮನಕ್ಕೆ ಬಂದಿದೆ ಎಂದು ಹೇಳುತ್ತಾರೆ. ಮಾನ್ಯ ಮುಖ್ಯಮಂತ್ರಿಗಳು ರಾಜಕೀಯ ಪಕ್ಷಗಳ ಕೈವಾಡ ಇದೆ ಎಂದು ಹೇಳುತ್ತಾರೆ. ಇದು ಬಹಳ ಸ್ಪಷ್ಟವಾಗಿ ಗೊತ್ತಾಗುತ್ತದೆ. ಇವರಲ್ಲಿ ಹೊಂದಾಣಿಕೆ ಇಲ್ಲ. ಡೈವರ್ಜೆಂಟ್ ವ್ಯೂಸ್ ಇದೆ. ಮಾನ್ಯ ಮುಖ್ಯಮಂತ್ರಿಗಳೇ ಹೇಳಿರತಕ್ಕದ್ದು ನಿಜವಾದರೆ ಯಾವ ರಾಜಕೀಯ ಪಕ್ಷಗಳ ಕೈವಾಡ ಇದೆ ಎಂದು ಹೇಳಬೇಕಾಗುತ್ತದೆ. ಅದು ಯಾವುದೇ ರಾಜಕೀಯ ಪಕ್ಷ ಆಗಿರಲಿ. ಏಕೆಂದರೆ ಕೋಮುವಾದಿಗಳನ್ನು ಪ್ರಚೋದನೆ ಮಾಡತಕ್ಕಂಥ, ಕೋಮುವಾದಿ ಶಕ್ತಿಗಳನ್ನು ಪ್ರಚೋದನೆ ಮಾಡತಕ್ಕಂಥ ಯಾವುದೇ ರಾಜಕೀಯ ಪಕ್ಷ ಈ ದೇಶದಲ್ಲಿ ಇರಲಿಕ್ಕೆ ಅವಕಾಶ ಇಲ್ಲ. ಸಂವಿಧಾನ ಬದ್ಧವಾಗಿ ಈ ದೇಶದಲ್ಲಿ ಇರಲಿಕ್ಕೆ ಸಾಧ್ಯ ಇಲ್ಲ. ಏಕೆಂದರೆ, ಕೋಮು ಭಾವನೆಗಳನ್ನು ಕೆರಳಿಸತಕ್ಕಂಥ ರಾಜಕೀಯ ಪಕ್ಷಗಳಿಗೆ ಮಾನ್ಯತೆ ಇಲ್ಲವೆಂದು ಸಂವಿಧಾನವೇ ಸ್ಪಷ್ಟವಾಗಿ ಹೇಳುತ್ತದೆ. ಹಾಗಾದರೆ, ಯಾರು ಇದನ್ನು ಮಾಡಿದರು? ಉಡುಪಿಗೆ ಬಂದು ನೀವು ಕರೆ ಕೊಟ್ಟಿರಿ. ಅಲ್ಲಿ ಪಿಯುಸಿ ಪರೀಕ್ಷೆ ನಡೆಯುತ್ತಿದೆ. ಪಿಯುಸಿ ಪರೀಕ್ಷೆ ಬರೆಯುವ ವಿದ್ಯಾರ್ಥಿಗಳ ಗತಿ ಏನು? ಈ ಸರ್ಕಾರದ ಮುಂದೆ ಏನಾದರೂ ಮಾಹಿತಿ ಇದೆಯೇ? ಬಂದ್‌ನಿಂದಾಗಿ ಎಷ್ಟು ವಿದ್ಯಾರ್ಥಿಗಳಿಗೆ ಆ ದಿವಸ ಪಿಯುಸಿ ಪರೀಕ್ಷೆಗೆ ಹಾಜರಾಗಲು ಸಾಧ್ಯವಾಗಿಲ್ಲ? ಬಂದ್‌ನಿಂದಾಗಿ ಪರೀಕ್ಷೆಗೆ ಹಾಜರಾಗದ ವಿದ್ಯಾರ್ಥಿಗಳ ಮುಂದಿನ ಪರಿಸ್ಥಿತಿ ಏನು? ಇದಕ್ಕೆಲ್ಲಾ ಯಾರು ಕಾರಣ? ಇದು ಬಹಳ ಗಂಭೀರವಾದ ವಿಚಾರವಾಗಿದೆ. ಮೆಲ್ನೋಟಕ್ಕೆ ನೋಡಿದ ರೀತಿಯಲ್ಲಿ ಇದು ಸುಲಭವಾಗಿಲ್ಲ. ನನ್ನ ಅಭಿಪ್ರಾಯದಲ್ಲಿ ಹೇಳುವುದಾದರೆ, ಸಿ.ಬಿ.ಐ.

ತನಿಖೆಗಿಂತಲೂ ಐಐಎಸ್‌ಸಿಯಲ್ಲಿ ನಡೆದ ಘಟನೆ ಮತ್ತು ಬಟ್ಕಳ ಘಟನೆ ಸಂಬಂಧ ತನಿಖೆ ನಡೆಸಲು ಸದನದ ಸಮಿತಿ ರಚಿಸಬೇಕೆಂದು ನಾನು ಒತ್ತಾಯ ಮಾಡುತ್ತಿದ್ದೇನೆ.

ಶ್ರೀ ಕೆ.ಆರ್. ರಮೇಶ್‌ಕುಮಾರ್ (ಶ್ರೀನಿವಾಸಪುರ) : ಸನ್ಮಾನ್ಯ ಅಧ್ಯಕ್ಷರೆ, ಈ ಸದನದಲ್ಲಿ ನಿಲುವಳಿ ಸೂಚನೆ ಮಂಡನೆ ಮಾಡತಕ್ಕಂಥಾದ್ದು ಮತ್ತು ಕಾನೂನಿಗೆ ಸಂಬಂಧಿಸಿದ ವಿಚಾರಗಳಿಗೆ ತಾವು ನಂತರ ಕೊಡುವ ತೀರ್ಪು, ಇವೆಲ್ಲವೂ ನಮಗೆ ಗೊತ್ತಿರುವಂಥಾದ್ದೇ. ಪ್ರಾಸ್ತಾವಿಕ ಮನ್ನಣೆ ಮಾಡುವ ವೇಳೆಯಲ್ಲಿ ನಮ್ಮ ಹತ್ತಿರ ಏನೇನು ಮಾಹಿತಿ ಇರುತ್ತದೋ, ಅದೆಲ್ಲವನ್ನೂ ತಮ್ಮ ಮುಖಾಂತರ ಸರ್ಕಾರದ ಗಮನಕ್ಕೆ ತರುವುದು ಪದ್ಧತಿ. ಇಲ್ಲಿಯವರೆಗೂ ಕೆಲವು ವರ್ಷಗಳ ಹಿಂದಿನವರೆಗೂ ಮತೀಯ ಗಲಭೆಗಳಾದಾಗ ಸಾಮಾನ್ಯವಾಗಿ ಅಲ್ಲೇ ಸ್ಥಳೀಯವಾದ ಯಾವುದಾದರೊಂದು ಸಮಸ್ಯೆ ಇರುತ್ತಿತ್ತು. ಒಂದು ಮಸೀದಿಯದ್ದೋ, ಈದ್ಗಾದ್ದೋ, ಖಬರಸ್ಥಾನದ್ದೋ, ದೇವಸ್ಥಾನದ್ದೋ, ಎಂತಹದ್ದಾದರೂ. ಒಂದು ಸಮಸ್ಯೆ ಇರುತ್ತಿತ್ತು. ಬೇಕೆಂತಲೇ ಕೆಲವರು ಕೆಲವರು ಆ ಸಮಸ್ಯೆಯನ್ನು ಪರಿಹರಿಸುವುದಕ್ಕೇ ಬಿಡುವುದಿಲ್ಲ, ಜೀವಂತವಾಗಿಯೇ ಇಟ್ಟಿರುತ್ತಾರೆ. ಇವೆಲ್ಲವನ್ನೂ ನಾವು ನೋಡಿದ್ದೇವೆ. ಇತ್ತೀಚಿನ ದಿನಗಳಲ್ಲಿ ನಮ್ಮ ದೇಶದ ಭೌಗೋಳಿಕ ಗಡಿಯನ್ನು ಧಾಟಿ ಹೊರಗಿರತಕ್ಕಂಥ ಕೆಲವು ಶಕ್ತಿಗಳ ಪ್ರವೇಶವಾಗಿರುವುದು ಕೂಡ ಕೆಲವು ಘಟನೆಗಳ ಹಿಂದಿರುವುದನ್ನು ನಾವು ಗಮನಿಸುತ್ತಿದ್ದೇವೆ. ಶ್ರೀಮಾನ್ ಯಡಿಯೂರಪ್ಪನವರು ಹೇಳಿರತಕ್ಕಂಥ ಹೇಳಿಕೆಯನ್ನು ಗೆಳೆಯ ರೋಷನ್‌ಬೇಗ್‌ರವರು ಓದಿ ಹೇಳಿದ್ದಾರೆ. ಶ್ರೀಮಾನ್ ಯಡಿಯೂರಪ್ಪನವರು ಇವೊತ್ತು ಯಡಿಯೂರಪ್ಪನವರಾಗಿಲ್ಲ. ಅವರು ಈ ರಾಜ್ಯ ಸರ್ಕಾರದ ಉಪ ಮುಖ್ಯಮಂತ್ರಿಗಳಾಗಿದ್ದಾರೆ, ಸರ್ಕಾರವಾಗಿದ್ದಾರೆ. ಈ ಹಿಂದೆ ಅವರು ಏನಾದರೂ ಒಂದು ಹೇಳಿಕೆ ಮಾಡಿದ್ದಿದ್ದರೆ, ಅದು ಅವರ ವೈಯಕ್ತಿಕ ಹೇಳಿಕೆ, ಬಹಳ ಹೆಚ್ಚೆಂದರೆ ಪಕ್ಷದ ಅಭಿಪ್ರಾಯವಾಗಿರುತ್ತಿತ್ತು. ಇವೊತ್ತು ಅವರು ಮಾಡತಕ್ಕಂಥ ಪ್ರತಿ ಹೇಳಿಕೆ ಕೂಡ ಸರ್ಕಾರದ ಹೇಳಿಕೆಯಾಗುತ್ತದೆ. ಬೆಂಗಳೂರಿನ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್‌ನಲ್ಲಿ ಒಂದು ಘಟನೆ ನಡೆಯಿತು. ಪಾರ್ಲಿಮೆಂಟ್‌ಗೆ ಕೆಲವರು ಲಗ್ಗೆ ಹಾಕಿದರು. ಹೀಗೆ ಅನೇಕ ಘಟನೆಗಳು ನಡೆದಿವೆ. ದೆಹಲಿಯಲ್ಲಿ ದೀಪಾವಳಿ ಹಬ್ಬದ ಮೊದಲು ಮಾರುಕಟ್ಟೆಯಲ್ಲಿ explosions ಆಯಿತು. ಗುಲ್ಬರ್ಗಾದಲ್ಲಿ ನಿನ್ನೆ ಯಾರೋ ಒಬ್ಬನನ್ನು ಹಿಡಿದುಕೊಂಡು ಬಂದಿದ್ದಾರೆ. ಅವರ ಪ್ರವೇಶ ಇಲ್ಲಿಲ್ಲ ಮತ್ತು ಆ ಚಟುವಟಿಕೆಗಳು ಇಲ್ಲವೆಂದು ಹೇಳುವ ಸ್ಥಿತಿಯಲ್ಲಿ ನಾವ್ಯಾರೂ ಇಲ್ಲ. ಅಲ್ಲಲ್ಲಿ ಕಾಣುತ್ತಿದ್ದೇವೆ. ಆದರೆ, ನಮ್ಮ ರಾಜ್ಯದ ಪೊಲೀಸ್ ಇಲಾಖೆ ಏನಿದೆ, ಇವರ ಅರ್ಹತೆ ಅಥವಾ ಚೈತನ್ಯ ಇವೊತ್ತು ಬೆಳೆದಿರತಕ್ಕಂಥ ಈ ಸ್ವರೂಪದ ಸಮಸ್ಯೆಗೆ ಪರಿಹಾರವನ್ನು ಹುಡುಕಿಕೊಳ್ಳುವಂಥ ಚೈತನ್ಯ ಇವರಲ್ಲಿ ಇದೆಯೇ? ಅಷ್ಟಕ್ಕೆ ಇವರು ತಯಾರಾಗಿದ್ದಾರೆಯೇ? ಇವರಿಗೆ ತರಬೇತು ಆಗಿದೆಯೇ?

ಮಾಮೂಲಾಗಿ ಪೊಲೀಸ್ ಸ್ಟೇಷನ್‌ನಲ್ಲಿ ಪಿಕ್ ಪಾಕೆಟ್ ಮಾಡುವವರು, eve teasing ಮಾಡುವವರು, boot legging ಮಾಡುವವರು, ಸಣ್ಣಪುಟ್ಟ ರೌಡಿಗಳು, ಇವರೆಲ್ಲರ ಒಂದು ಲಿಸ್ಟ್ ಇಟ್ಟಿರುತ್ತಾರೆ. ಈಗ ಇದು ಹೊಸ ನಮೂನೆಯಾಗಿದೆ. ಈಗ ಸರ್ಕಾರದಿಂದ ಒಂದು ಹೇಳಿಕೆ ಬಂದಾಗ ಅದನ್ನು ನಂಬದೇ ಇರುವುದಕ್ಕೆ ಸಾಧ್ಯವಿಲ್ಲ. ಒಂದು ಸರ್ಕಾರವಾಗಿ ಉಪಮುಖ್ಯಮಂತ್ರಿಯಾಗಿರುವವರು ಹೇಳಿಕೆ ಮಾಡಬೇಕಾಗಿದ್ದರೆ, ಎಲ್ಲಾ ಮಾಹಿತಿಯನ್ನು ಇಟ್ಟುಕೊಂಡು ಜವಾಬ್ದಾರಿಯಿಂದಲೇ ಹೇಳಿರುತ್ತಾರೆ. ಹಾಗಿದ್ದ ಪಕ್ಷದಲ್ಲಿ, ಅಂತಹ ಮಾಹಿತಿ ಇವರ ಹತ್ತಿರ ಇದ್ದರೆ, ಅಂತರಾಷ್ಟ್ರೀಯ ಮಟ್ಟದ ಐಎಸ್ಐ ಏಜೆಂಟ್ಸ್ ಅಥವಾ ಉಳಿದವರ ಯಾರದ್ದಾದರೂ ಕೈವಾಡ ಇದ್ದರೆ, ಅವರು ಭಟ್ಕಳದಲ್ಲಿ ನಿಲ್ಲಿಸುವುದಿಲ್ಲ, ಭಟ್ಕಳದಲ್ಲಿ ಪ್ರಾರಂಭವಾಗಿದೆ. ಅವರು ನಾಳೆ ಇನ್ನು ಎಲ್ಲೆಲ್ಲಿಗೋ ಬರುತ್ತಾರೋ, ಗೊತ್ತಿಲ್ಲ. ಇದೊಂದು ಪಕ್ಷದ ಸಮಸ್ಯೆಯಾಗಿ ಅಥವಾ ಒಂದು ಕೋಮಿನ ಸಮಸ್ಯೆಯಾಗಿ ಉಳಿದಿಲ್ಲ. ಇಡೀ ದೇಶದ ಭದ್ರತೆಯ, ಸಮಗ್ರತೆಯ ಪ್ರಶ್ನೆ ಇದಾಗಿದೆ. ನಾವು ಇದರಲ್ಲಿ ಸಣ್ಣತನದಿಂದ ಆಲೋಚನೆ ಮಾಡಬೇಕಾದ ಅಗತ್ಯವಿಲ್ಲ. ದೇಶದ ನಾಗರಿಕರಾಗಿ ನಾವು ಇವೊತ್ತು ಇದರ ಬಗ್ಗೆ ಚಿಂತನೆ ಮಾಡಬೇಕಾಗಿದೆ. ನಿಮ್ಮಲ್ಲಿ ಇರತಕ್ಕಂಥ ಮಾಹಿತಿಯನ್ನು ನಮಗೆ ಕೊಡಿ ಅಥವಾ ಪಬ್ಲಿಕ್‌ಗೆ ಕೊಡಿ ಎಂದು ನಾನು ಕೇಳುತ್ತಿಲ್ಲ. ಆದರೆ ನೀವು ಹೇಳಿರತಕ್ಕಂಥ ಮಾತುಗಳಲ್ಲಿ ಸತ್ವ ಇದ್ದರೆ, ಅದು ಯಾವುದಾದರೂ ಅಂಕಿ-ಅಂಶಗಳ ಅಥವಾ ನೀವು ಮಾಡಿರತಕ್ಕಂಥ ಪ್ರಗತಿಯ ಆಧಾರದ ಮೇಲೆ ನಿಂತಿದ್ದರೆ, ಅದರ ಉಳಿದ ಆಯಾಮಗಳು ಏನೇನು ಎನ್ನುವುದರ ಬಗ್ಗೆ ನಿಮಗೆ ಅಂದಾಜು ಮಾಹಿತಿ ಸಿಕ್ಕಿದ್ದರೆ, ನೀವು ಕೂಡಲೇ ಕಾರ್ಯೋನ್ಮುಖವಾಗಬೇಕಾಗುತ್ತದೆ. ಈ ಸಮಸ್ಯೆಯ ಪರಿಹಾರ ರಾಜ್ಯ ಸರ್ಕಾರದ ಇತಿಮಿತಿ ಮೀರಿ ಹೋಗಿರುವ ಸ್ವರೂಪದ್ದಾಗಿದ್ದರೆ, ಕೇಂದ್ರ ಸರ್ಕಾರದ ಸಹಾಯ ಕೂಡ ಪಡೆದುಕೊಳ್ಳಬೇಕಾಗುತ್ತದೆ. ಒಂದು ವೇಳೆ ಹಾಗೇನೂ ಇಲ್ಲ, ಮಾಮೂಲಾಗಿ ಹೇಳಿಕೆ ಮಾಡತಕ್ಕಂಥ ಒಂದು ಹೇಳಿಕೆ ಮಾಡಿದ್ದೇವೆ ಎನ್ನುವುದಾದರೆ, ಅದು ಬಹಳ ತೊಂದರೆಗೆ ಎಡೆಮಾಡಿಕೊಡುತ್ತದೆ. ಕಾರಣ, ನಾವು ಗುಮ್ಮ ಹುಟ್ಟಿಸಿಬಿಟ್ಟು, ಈ ಅನುಭವ ಇಲ್ಲದೇ ಇರುವವರು, ತರಬೇತಿ ಇಲ್ಲದಿರುವ ಪೊಲೀಸರು ಹೋಗಿ ನಾಳೆ ಅದನ್ನು ಬೇರೆ ರೂಪದಲ್ಲಿ ತಿರುಗಿಸಿಕೊಂಡು, 'ಅವರ ಮೇಲೆ ಸೇಡು ತೀರಿಸಿಕೋ, ಇವರ ಮೇಲೆ ಸೇಡು ತೀರಿಸಿಕೋ' ಎಂದು ಅವನಿಗೆ ಒಂದು ಹಣೆಪಟ್ಟಿ ಕಟ್ಟಿ ತಂದು ಒಳಗಡೆ ಹಾಕಿದರೆ ಸಾರ್ವಜನಿಕವಾಗಿ ಸರ್ಕಾರದ credibility ಕಡಿಮೆಯಾಗುತ್ತದೆ, ನಿರಪರಾಧಿಗಳಿಗೆ ತೊಂದರೆಯಾಗುತ್ತದೆ ಮತ್ತು ಸರ್ಕಾರವೇ ಬುದ್ಧಿಪೂರ್ವಕವಾಗಿ ಅಸತ್ಯ ಹೇಳಿದಂತಾಗುತ್ತದೆ. ಪೊಲೀಸ್ ಇಲಾಖೆಯನ್ನು ದೂಷಣೆ ಮಾಡುವುದಕ್ಕೆ ನನಗೆ ಇಷ್ಟವಿಲ್ಲ. ನಾನು ಯಾವತ್ತೂ ಅದನ್ನು ಮಾಡುವುದಿಲ್ಲ. ಅಲ್ಲಿಯೂ

ನಮ್ಮವರೇ ತಾನೇ ಇರುವುದು. ದೌರ್ಭಾಗ್ಯವೆಂದರೆ, ಇವೊತ್ತು ನಾವು ಇರಬಹುದು, ನಿನ್ನೆ ಅವರು ಇದ್ದಿರಬಹುದು, ನಾಳೆ ಮತ್ತೊಬ್ಬರು ಬರಬಹುದು. ಆ ಇಲಾಖೆಯಲ್ಲಿ ಯಾರನ್ನು ಯಾರು ಹೇಗೆ ಬೆಳೆಸಬೇಕೆಂಬ ಬಗ್ಗೆ ಇವೊತ್ತಿಗೂ ನಿರೂಪಣೆ ಆಗಿಲ್ಲ. ಒಬ್ಬೊಬ್ಬರು ಇದ್ದಾಗ ಒಂದೊಂದು ರೀತಿ ಅವರವರ ಖುಷಿಗೆ ತಕ್ಕಂತೆ ಆಗುತ್ತಿದೆ. ಹಿಂದೆ ರಾಜಮಹಾರಾಜರುಗಳು ಮಾಡುತ್ತಿದ್ದರಲ್ಲಾ, ಸ್ವಲ್ಪ ಹೆಚ್ಚು ಕಡಿಮೆ ಅದೇ ರೀತಿಯಲ್ಲಿ ನಡೆಸಿಕೊಂಡು ಹೋಗುತ್ತಿದ್ದೇವೆ. ನಾನು ಹೋಮ್ ಮಿನಿಸ್ಟರ್, ಚೀಫ್ ಮಿನಿಷ್ಟರ್ ಆಗಿದ್ದರೆ, ನನಗೆ ಬೇಕಾದವರು ನನ್ನ ಸುತ್ತ ಡ್ರಮ್ ಬಾರಿಸುವವರಿದ್ದರೆ, ನಾನು ಎನ್‌ಕರೇಜ್ ಮಾಡುವುದು. ಇವರು ಬಂದರೆ, ಇವರ ಮಾತನ್ನು ಕೇಳಿದವರು, ಇವರು ಮಾಡಿಕೊಳ್ಳುವುದು. ಆ ಆಫೀಸರ್‌ನ ಇಂಟಗ್ರಿಟಿ ಏನು? ಆತನ ಹಿಸ್ಟರಿ ಏನು? ಟ್ರ್ಯಾಕ್ ರೆಕಾರ್ಡ್ ಏನು? ಎಲ್ಲೆಲ್ಲಿ ಕೆಲಸ ಮಾಡಿದ್ದಾನೆ? ಅವನು ಎಷ್ಟು ಮಾತ್ರ ಯೋಗ್ಯತೆ ಇರುವವನು? ಇದನ್ನೆಲ್ಲಾ ಪರಾಮರ್ಶಿಸಿ ಅವರಿಗೆ ಪೋಸ್ಟಿಂಗ್ಸ್ ಕೊಡತಕ್ಕಂಥ ಒಂದು ನಿರ್ಮಲ ವಾತಾವರಣದಲ್ಲಿ ನಾವು ಆಡಳಿತವನ್ನು ಇಟ್ಟಿಲ್ಲ. ನಾನು ಇವೊತ್ತಿನ ಸರ್ಕಾರಕ್ಕೆ ಅನ್ವಯಿಸಿ ಈ ಮಾತನ್ನು ಹೇಳುತ್ತಿಲ್ಲ. ಕಳೆದ ಹಲವಾರು ವರ್ಷಗಳಿಂದ ಸತತವಾಗಿ ಇದು ನಡೆದುಕೊಂಡು ಬಂದಿರುವುದರಿಂದ ಇವೊತ್ತು ನೀವೂ ಕೂಡ ಈ ತೊಂದರೆಯನ್ನು ಅನಿವಾರ್ಯವಾಗಿ ಅನುಭವಿಸಲೇಬೇಕಾಗಿದೆ. ಮಾಮೂಲಾಗಿ ಇಂಟೆಲಿಜೆನ್ಸ್ ಡಿಪಾರ್ಟ್‌ಮೆಂಟ್‌ನವರು ಯಾರು ಇರುತ್ತಾರೆ, ಸಾಮಾನ್ಯವಾಗಿ ಅವರ ತಿಳಿವಳಿಕೆಗೆ ಇಂತಹ ವಿಚಾರಗಳು ಮೊದಲೇ ಬರಬೇಕು. ಇಂಟೆಲಿಜೆನ್ಸ್ ಇಲಾಖೆಯವರು ಧರ್ಮಸಿಂಗ್‌ರವರ ಮನೆಗೆ ಯಾರು ಹೋಗಿ ಬರುತ್ತಾರೆ, ದೇಶಪಾಂಡೆಯವರ ಮನೆಗೆ ಯಾರು ಹೋಗಿಬರುತ್ತಾರೆ, ಸ್ಪೀಕರ್‌ಗೆ ಯಾರ್ಯಾರು ಫೋನ್ ಮಾಡುತ್ತಾರೆ, ವಾಟಾಳ್ ನಾಗರಾಜ್‌ರವರ ಮನೆಗೆ ಯಾರ್ಯಾರು ಹೋಗಿ ಬರುತ್ತಾರೆ, ಮಾಧುಸ್ವಾಮಿಯವರ ಹತ್ತಿರ ಯಾರ್ಯಾರು ಮಾತನಾಡುತ್ತಿದ್ದಾರೆ, ಯಾರ್ಯಾರು ನಮ್ಮ ಹಿಂದೆ ಸುತ್ತುತ್ತಿರುತ್ತಾರೆ.....ಇವರು ಇದ್ದಾಗಲೂ ಅದೇ ಕೆಲಸ, ನೀವಿದ್ದಾಗಲೂ ಅದೇ ಕೆಲಸ. ನಾವು ಇವರನ್ನು ಅನೇಕ ಸಲ 'ಇವರು ನಮಗೆ ಬಹಳ ಆತ್ಮೀಯರು, ವಿಶ್ವಾಸಿಗಳು' ಎಂದು ತಿಳಿದುಕೊಳ್ಳುತ್ತೇವೆ. ಇವರು ಯಾರಿಗೂ ಆತ್ಮೀಯರಲ್ಲ ಯಾರಿಗೂ ವಿಶ್ವಾಸಿಗಳಲ್ಲ, ಯಾರಿಗೂ ಅವರ ಜೀವಮಾನದಲ್ಲಿ ಸತ್ಯವನ್ನು ಹೇಳಿದವರೂ ಅಲ್ಲ. ಅವರು ಎಂದಾದರೂ ಜೀವನದಲ್ಲಿ ಯಾರಿಗಾದರೂ ಸತ್ಯವನ್ನು ಹೇಳಿದ್ದರೆ ಸ್ಥಿತಿ ಇಲ್ಲಿಗೆ ತಲುಪುತ್ತಿರಲಿಲ್ಲ. ಅವರಿಗೆ ಹೊತ್ತು ಕಳೆಯಬೇಕು. ಈಗ ಇವರು ಬಂದಿದ್ದಾರೆ. ಇವರೆದುರು ಯಾವ ವೇಷ, ಯಾವ ಅವತಾರ ಎತ್ತಬೇಕು, ಇವರನ್ನು ಹೇಗೆ ಓಲೈಸಬೇಕು, ಇವರನ್ನು ಹೇಗೆ ವಶೀಕರಣ ಮಾಡಿಕೊಳ್ಳಬೇಕು, ತಮ್ಮ ಕೆಲಸವನ್ನು ಹೇಗೆ ಮುಂದುವರೆಸಿಕೊಂಡು ಹೋಗಬೇಕು ಎಂಬುದರಲ್ಲಿ

ಅವರು ಬಹಳ ಪರಿಣಿತರು-ನಾರ್ಮಲ್ ಕೋರ್ಸ್‌ನಲ್ಲಿ. ಈಗ ಈಶ್ವರಪ್ಪನವರೆ, ತಾವು ಅಪರೂಪಕ್ಕೆ ಅಧಿಕಾರಕ್ಕೆ ಬಂದಿದ್ದೀರಿ. ಇಷ್ಟು ದಿವಸ ನಿಮ್ಮನ್ನು ನೋಡದೆಯೇ ಇದ್ದಿದ್ದವರೆಲ್ಲಾ ಈಗ ನಿಮಗೆ ಎರಡೆರಡು ಸಲ ಸೆಲ್ಯೂಟ್‌ನ್ನು ಹೊಡೆಯುತ್ತಾರೆ. ನೀವು ಖುಷಿಯಾಗಿಬಿಡಬೇಡಿ. ಅವರ ಕೈಗಳು ಹೇಗಿರುತ್ತವೆಂದರೆ, ಎಷ್ಟು ಚಲನಶೀಲತೆ ಇರುತ್ತದೆ ಆ ಕೈಗೆ ಮತ್ತು ಎಷ್ಟು ಬುದ್ಧಿ ಇರುತ್ತದೆಂದರೆ, ಈಗ ಧರ್ಮಸಿಂಗ್‌ರವರನ್ನು ಕಂಡರೆ ಅವರ ಕೈ ಬಾಗಿಹೋಗುತ್ತದೆ, ಲಕ್ವ ಹೊಡೆದಿರುವ ಕೈಯಂತೆ. ಏಕೆಂದರೆ ಅವರಿಗೆ ಈಗ ಸೆಲ್ಯೂಟ್ ಹಾಕಿದರೆ ವೇಸ್ಟ್, ನೀವು ಕಂಡ ತಕ್ಷಣ ಕೈ ಶಿಫ್ ಆಗಿಬಿಡುತ್ತದೆ. ಎರಡೆರಡು ಸಲ ಸೆಲ್ಯೂಟ್ ಹೊಡೆಯುತ್ತಾರೆ. ಅಂಥವರ ಅವಿವೇಕದಿಂದ, ಬೇಜವಾಬ್ದಾರಿಯಿಂದ ಅಂಥವರ ಅಸಮರ್ಪಕ ಕಾರ್ಯನಿರ್ವಹಣೆಯಿಂದ ಇಂಥ ಸ್ಥಿತಿ ಉದ್ಭವವಾಗತಕ್ಕದ್ದು ಹೆಚ್ಚು ಸಾಧ್ಯ. ನೀವು ಒಂದು ರಾಜಕೀಯ ಪಕ್ಷಕ್ಕೆ ಸೇರಿದ್ದೀರಿ. ನಿಮಗೆ ಒಂದು ಸಿದ್ಧಾಂತ ಇದೆ. ನಿಮ್ಮ ಸಿದ್ಧಾಂತಕ್ಕೆ ಇದನ್ನು ಒಂದು ಗಂಟುಹಾಕಿ ನೀವು ಮಾಡಿದ್ದೀರಿ ಎಂದು ಹೇಳಿ ಕ್ಷುಲ್ಲಕವಾದಂಥ ಮಾತುಗಳನ್ನು ಆಡುವುದಕ್ಕೆ ನಾನು ತಯಾರಿಲ್ಲ. ನಿಮಗೆ ನಿಮ್ಮದೇ ಆದ ಅರ್ಹತೆ ಇದೆ. ಪ್ರಜಾಸತ್ತಾತ್ಮಕವಾದ ರೀತಿಯಲ್ಲಿ ನೀವು ಅಧಿಕಾರಕ್ಕೆ ಬಂದಿದ್ದೀರಿ. ಅಧಿಕಾರ ನಡೆಸಿ. ಆದರೆ, ನೀವು ಕೋಮುವಾದಿಗಳು ಎನ್ನತಕ್ಕ ಆರೋಪಕ್ಕೆ ನಮ್ಮಿಂದ ಒಳಗಾಗಿರುವುದರಿಂದ ನಿಮ್ಮ ಕೈಯಲ್ಲಿ ಇವತ್ತು ಸರ್ಕಾರ ಇರುವುದರಿಂದ, ಇಂಥ ಸ್ಥಿತಿ ರಾಜ್ಯದಲ್ಲಿ ಉದ್ಭವವಾಗಿರುವುದರಿಂದ ಮಾಮೂಲು ಪರಿಸ್ಥಿತಿಗಿಂತ ಹೆಚ್ಚು ಜಾಗೃತರಾಗಿ ನೀವು ಇವತ್ತು ಕೆಲಸ ಮಾಡಬೇಕಾಗಿದೆ. ನಾವು ಅಂಥವರಲ್ಲ, ಸಂವಿಧಾನಕ್ಕೆ ಬದ್ಧರಾಗಿ ನಾವು ಕೆಲಸ ಮಾಡುತ್ತೇವೆ. ಎಲ್ಲಾ ಜನರಿಗೆ ರಕ್ಷಣೆ ಕೊಡುತ್ತೇವೆ. ಇಂಥ ನೀಚ ಕೆಲಸದಲ್ಲಿ ತೊಡಗತಕ್ಕವರನ್ನು ಮಟ್ಟ ಹಾಕುತ್ತೇವೆ ಎನ್ನುವುದನ್ನು ನೀವು ಈವತ್ತು ದೇಶಕ್ಕೆ ಸಾಬೀತು ಮಾಡಿ ನಮ್ಮನ್ನು ಸುಳ್ಳುಗಾರರನ್ನಾಗಿ ಮಾಡತಕ್ಕ ಜವಾಬ್ದಾರಿ ನಿಮ್ಮ ಮೇಲಿದೆ. ನೀವು ಈವತ್ತು ಈ ಪರಿಸ್ಥಿತಿಯನ್ನು ಭಟ್ಕಳದ ಆಸುಪಾಸಿನಲ್ಲಿ ವಾಸ ಮಾಡತಕ್ಕ ಅಲ್ಪಸಂಖ್ಯಾತ ಜನರ ಮನಸ್ಸಿಗೆ ಸಮಾಧಾನ, ನೆಮ್ಮದಿಯಾಗತಕ್ಕ ರೀತಿಯಲ್ಲಿ ನಿರ್ವಹಣೆ ಮಾಡಿದರೆ ನಾಳೆ ನಾವು ಹೊಗಿ ಏನು ಕತೆ ಹೇಳಿದರೂ ಅವರು ನಮ್ಮನ್ನು ಕೇಳುವುದಿಲ್ಲ. ನಿಮ್ಮನ್ನೇ ಅವರು ಗೌರವಿಸುತ್ತಾರೆ. ನಾನು Adjournment motion ಮೇಲೆ ಮಾತನಾಡುತ್ತಿಲ್ಲ. ಪ್ರಾಸ್ತಾವಿಕ ಮನ್ನಣೆಗೂ ಸಂಬಂಧವನ್ನು ಇಟ್ಟುಕೊಂಡು ಮಾತನಾಡುತ್ತಿಲ್ಲ. ಇದೊಂದು ವಿಶೇಷ ಸಂದರ್ಭ ಮೊದಲಬಾರಿಗೆ ಈ ರಾಜ್ಯದಲ್ಲಿ ಉದ್ಭವವಾಗಿದೆ. ನೀವು ಏನು ಹೇಳುತ್ತಿದ್ದಿರಿ? ಓಟಿನ ಭೇಟೆಗಾಗಿ ನೀವು ಸದಾಕಾಲ ಅವರನ್ನು ಆಶ್ರಿತರನ್ನಾಗಿ ಇಟ್ಟುಕೊಂಡಿದ್ದೀರಿ. ನೀವು ಅವರ ಕಲ್ಯಾಣ ಮಾಡಿದ್ದು ಅಷ್ಟರಲ್ಲೇ ಇದೆ. ನಾವು ಹಾಗಲ್ಲ, ನಾವು ಎಲ್ಲಾ ಧರ್ಮಗಳನ್ನು ಬೆಂಬಲಿಸುತ್ತೇವೆ.

ಎಲ್ಲಾ ಧರ್ಮಗಳನ್ನು ಗೌರವಿಸುತ್ತೇವೆಂದು ಹೇಳುತ್ತಿದ್ದಿರಿ. ನಮ್ಮ ನಿಮ್ಮ ಮಾತುಗಳು ನೇರವಾಗಿ ಇವತ್ತು ಜನರ ಮುಂದೆ ಈ ದುರ್ಘಟನೆಯಿಂದಾಗಿ ಪರೀಕ್ಷೆಗೆ ಒಳಗಾಗಿದೆ. ಈ ಪರೀಕ್ಷೆಯಲ್ಲಿ ನೀವು ತೇರ್ಗಡೆಯಾಗಬೇಕು. ಈ ಸರ್ಕಾರ ಈ ಪರೀಕ್ಷೆಯಲ್ಲಿ ತೇರ್ಗಡೆಯಾಗಬೇಕು. You have to establish your credibility before the people of the State and the Country more particularly, the minorities. ಹೇಗೆ ನೀವು ಕೆಲಸ ಮಾಡುತ್ತೀರಿ, ನಿಮ್ಮ ವಿವೇಚನೆಗೆ ಬಿಟ್ಟಂಥದ್ದು. ಮತ್ತೊಮ್ಮೆ ಯಡಿಯೂರಪ್ಪನವರಲ್ಲಿ, ಮಾನ್ಯ ಉಪಮುಖ್ಯಮಂತ್ರಿಯವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ, ತಾವು ಹೇಳಿರತಕ್ಕ ಮಾತುಗಳು ಎಂದು ಏನು ಇವತ್ತು ಅಚ್ಚಾಗಿ ಪತ್ರಿಕೆಗಳಲ್ಲಿ ಬಂದಿವೆ, ಒಂದು ವೇಳೆ ಆ ರೀತಿ ಮಾತುಗಳನ್ನು ನಾನು ಹೇಳಿಲ್ಲವೆಂದು ನೀವು ಹೇಳುವುದಾದರೆ ನಾನು ಮೊದಲೇ ಎಚ್ಚರಿಕೆ ವಹಿಸುತ್ತಿದ್ದೆ.

(ಮಾನ್ಯ ಉಪಾಧ್ಯಕ್ಷರು ಶ್ರೀ ಎನ್.ವೈ. ಗೋಪಾಲಕೃಷ್ಣ ರವರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು.)

ನೀವು ಆ ಮಾತುಗಳನ್ನು ಜೀರ್ಣಿಸಿಕೊಳ್ಳಬೇಕಾಗುತ್ತದೆ. ಐ.ಎಸ್.ಐ. ಎಲ್ಲೆಲ್ಲಿ ಪ್ರವೇಶವಿದೆ, ಎಲ್ಲೆಲ್ಲಿ ಕೈವಾಡವಿದೆ, ಯಾವ್ಯಾವ ರೀತಿಯಲ್ಲಿ ಅವರು ಸಂಚು ಹೂಡಿದ್ದಾರೆ, ಅದಕ್ಕೆ ಇದ್ದ ಬೇರೆ ಬೇರೆ ಸ್ವರೂಪಗಳು ಎಲ್ಲವನ್ನೂ ಕೂಡ ತ್ವರಿತಗತಿಯಲ್ಲಿ ವಿಚಾರಿಸಿ ದೇಶದ ಮತ್ತು ರಾಜ್ಯದ ಜನರಿಗೆ ನೀವು ತಿಳಿಸಿ ಎಲ್ಲಾ ಜನರ ಮೆಚ್ಚುಗೆಗೆ ನೀವು ಪಾತ್ರರಾಗಬೇಕಾಗುತ್ತದೆ. ನಿಮ್ಮ ಹೇಳಿಕೆ ಒಂದು ರೀತಿಯದ್ದು. ಮಾನ್ಯ ಮುಖ್ಯಮಂತ್ರಿಗಳ ಹೇಳಿಕೆ ಮತ್ತೊಂದು ರೀತಿಯದ್ದು. ಮಾನ್ಯ ಮುಖ್ಯಮಂತ್ರಿಗಳ ಹೇಳಿಕೆ ಮಾರ್ಮಿಕವಾಗಿದೆ. ಇದು ರಾಜಕೀಯ ಸ್ವರೂಪದ ಗಲಾಟೆಯೆಂದು ಹೇಳುತ್ತಾರೆ. ರಾಜಕೀಯ ಸ್ವರೂಪದ ಗಲಾಟೆ ಎಂದರೆ ಇಲ್ಲಿ ಇನ್ಯಾವ ಪ್ರಮುಖ ರಾಜಕೀಯ ಪಕ್ಷಗಳು ಇವೆ? ಕರ್ನಾಟಕದ ಮಟ್ಟಿಗೆ ಇವತ್ತು ಜೆ.ಡಿ.ಎಸ್., ಬಿ.ಜೆ.ಪಿ. ಮತ್ತು ಕಾಂಗ್ರೆಸ್. ಉಳಿದ ರಾಜಕೀಯ ಪಕ್ಷಗಳು ಬಿ.ಎಸ್.ಪಿ., ಎಸ್.ಪಿ. ಮತ್ತು ಎಲ್ಲ ಇದ್ದರೂ ಕೂಡ ಅಷ್ಟು ದೊಡ್ಡ ಪ್ರಮಾಣದ ಸ್ಥಾಪಿತ ಹಿತಾಸಕ್ತಿ ಅವರಿಗೆ ಇಲ್ಲ. ರೇಸ್ ಇರತಕ್ಕದ್ದು ಈ ಮೂರೂ ಪಕ್ಷಗಳ ಮಧ್ಯೆ. ನಾವು ಹೊರಗಿದ್ದೇವೆ. ನೀವಿಬ್ಬರು ಆಡಳಿತ ನಡೆಸುತ್ತಿದ್ದೀರಿ. ಒಂದು ವೇಳೆ ನಾವು ಏನಾದರೂ ಈ ರೀತಿಯ ಒಂದು ವಾತಾವರಣವನ್ನು ಸೃಷ್ಟಿ ಮಾಡಿ ನಿಮ್ಮ ಸರ್ಕಾರಕ್ಕೆ ಅಪಕೀರ್ತಿಯನ್ನು ತಂದು ಇದನ್ನು ರಾಜ್ಯದ ಎಲ್ಲಾ ಕಡೆಗೆ ಹಬ್ಬಿಸಿ ನಿಮ್ಮನ್ನು ಕೆಳಕ್ಕೆ ಇಳಿಸಿ ಅರ್ಜೆಂಟ್ ಆಗಿ ನಾವು ಬಂದು ಅಲ್ಲಿ ಕುಳಿತುಕೊಳ್ಳಬೇಕೆಂದು ಮಾಡಿದ್ದರೆ ನಮ್ಮಂಥ ದ್ರೋಹಿಗಳು, ಅಪರಾಧಿಗಳು ಮತ್ತೊಬ್ಬರು ಇಲ್ಲ, ಅದೂ ಕೂಡ ಹೊರಕ್ಕೆ ಬರಬೇಕಾಗುತ್ತದೆ. ಅಥವಾ ನಿಮ್ಮ ನಿಮ್ಮಲ್ಲೇ ಪರಸ್ಪರ ಅನುಮಾನಗಳು ಇದ್ದರೆ ಅದೂ ಹೊರಕ್ಕೆ ಬರಬೇಕಾಗುತ್ತದೆ.

ಮಾನ್ಯ ಮುಖ್ಯಮಂತ್ರಿಗಳ ಹೇಳಿಕೆ, it leads to a different conclusion all together. ತಾವು ಬಹಳ emphatic ಆಗಿ categorical ಆಗಿ ಕೆಲವು ಹೇಳಿಕೆಗಳನ್ನು ಮಾಡಿದ್ದೀರಿ. ಸರ್ಕಾರದ ಅಭಿಪ್ರಾಯುವೇನು? ಸರ್ಕಾರ ಇಲ್ಲಿಯವರೆಗೆ ಪಡೆದುಕೊಂಡಿರತಕ್ಕ ಮಾಹಿತಿಯ ಅನುಸಾರ ಈ ಗಲಭೆಗೆ ಕಾರಣವೇನು? ನೀವು ಕೈಗೊಂಡಿರತಕ್ಕಂಥ ಕ್ರಮಗಳೇನು? ಈ ಎಲ್ಲವನ್ನೂ ಕೂಡ ಪರಿಶೀಲಿಸಲು ಕೆಲವರು ಸದನದ ಸಮಿತಿ ಮಾಡಬೇಕೆಂದು ಹೇಳಿದ್ದಾರೆ, ಕೆಲವರು ಸಿಬಿಐ ತನಿಕೆ ಮಾಡಬೇಕೆಂದು ಹೇಳಿದ್ದಾರೆ.

ಶ್ರೀ ಡಿ.ಆರ್. ಪಾಟೀಲ್ : ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಯವರ ಕೈಯಲ್ಲೇ ಗೃಹ ಇಲಾಖೆ ಇದೆ. ಅವರು ಏನು ಹೇಳಿದ್ದಾರೋ ಅದನ್ನು ಇಂಟಲಿಜೆನ್ಸ್ information base ಏನಿದೆಂಯೋ ಅದನ್ನು ಹೇಳಿರುತ್ತಾರೆ. ಮಾನ್ಯ ಯಡಿಯೂರಪ್ಪನವರ ಕೈಯಲ್ಲಿ ಅವರ ಕಾರ್ಯಕರ್ತರು ಏನು ಹೇಳಿರುತ್ತಾರೋ ಅದನ್ನು ಅವರು ಬಹುತೇಕ ಹೇಳಿರುತ್ತಾರೆಂಬುದು ನನ್ನ ಭಾವನೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಇದುವರೆಗೆ ಎಲ್ಲವನ್ನೂ ನೋಡಿಕೊಳ್ಳುತ್ತಿದ್ದ ವಿರೋಧ ಪಕ್ಷದ ನಾಯಕರಿದ್ದಾರೆ. ಅವರ ಹತ್ತಿರವೇ ಎಲ್ಲಾ ಮಾಹಿತಿ ಇದೆ.

ಶ್ರೀ ಕೆ.ಆರ್. ರಮೇಶ್ ಕುಮಾರ್ : ಮಾನ್ಯ ಯಡಿಯೂರಪ್ಪನವರೆ, ಏನಾಗುತ್ತದೆಂದರೆ, ಇಂಟಲಿಜನ್ಸ್ ಅವರು ಇವರು ಎಲ್ಲರೂ ಕೂಡ ಒಬ್ಬರ ಹತ್ತಿರವೇ ಹೋಗುವುದಿಲ್ಲ. ಕೆಲವರು ನಿಮ್ಮ ಹತ್ತಿರ ಬರುತ್ತಾರೆ. ಕೆಲವರು ಅವರ ಹತ್ತಿರ ಹೋಗುತ್ತಾರೆ. ಅವರಿಗೆ ಪೋಸ್ಟಿಂಗ್ಸ್ ತಾಪತ್ರಯವಿದೆಯಲ್ಲಾ, ದುಡ್ಡು ಸಿಗುವ ಜಾಗಗಳು ಬೇಕು ನೋಡಿ. ಮೊನ್ನೆಯೆಲ್ಲಾ ಲೋಕಾಯುಕ್ತದವರು ಹೋಗಿ ಹಿಡಿದುದ್ದನ್ನೆಲ್ಲಾ ನೋಡಿದ್ದೇವಲ್ಲಾ. ಆ ರೀತಿ ಸಿಕ್ಕಿರುವವರು ಬಹುಶಃ tip of the iceberg ಅಷ್ಟೆ. ಯಾರೋ ಒಬ್ಬರು ಡಿ.ವೈ.ಎಸ್.ಪಿ. ಯವರ ಹತ್ತಿರವೇ ಅಷ್ಟು ಸಿಗಬೇಕಾಗಿದ್ದರೆ ಇನ್ನೂ ಸ್ವಲ್ಪ ಎತ್ತರದಲ್ಲಿ ಇರತಕ್ಕವನು, ಇನ್ನೂ ಸ್ವಲ್ಪ ಅನುಕೂಲಕರವಾದ ಜಾಗದಲ್ಲಿ ಇರತಕ್ಕವನ ಹತ್ತಿರ ಇನ್ನೂ ಎಷ್ಟಿರಬಹುದು? ಶೋರೂಮ್‌ನಲ್ಲೇ ಇಷ್ಟು ಇದ್ದರೆ ಇನ್ನು ಗೋಡೌನ್‌ನಲ್ಲಿ ಎಷ್ಟಿರಬೇಕು? ಲೋಕಾಯುಕ್ತದವರಿಗೆ ಎಲ್ಲೋ ಪೂರ್ತಿ ಅಡ್ರಸ್ ಸಿಕ್ಕಿದಂತೆ ಕಾಣುತ್ತಿಲ್ಲ! ನಮಗೂ ಗೊತ್ತಾಗುತ್ತಿಲ್ಲ ಹೇಳೋಣವೆಂದರೆ! ಇನ್ನೇನಾದರೂ ಸಹಾಯ ಮಾಡುವುದಾದರೆ ಮಾನ್ಯ ಯಡಿಯೂರಪ್ಪನವರು ಮಾಡಬೇಕು! ಮಾನ್ಯ ಡಿ.ಆರ್. ಪಾಟೀಲರು ಬಹಳ ಒಳ್ಳೆಯ ಮಾತನ್ನು ಆಡಿದರು. ಅವರ ಹತ್ತಿರ ಗೃಹ ಖಾತೆ ಇದೆ. ಅವರಿಗೆ ಇವರ ಸ್ಥಳೀಯ ಕಾರ್ಯಕರ್ತರ ವರ್ತಮಾನವಿದೆಯೆಂದು. ಅದು ಏನೇ ಇದ್ದರೂ ಕೂಡ ಅವರು ನೀವು ಇಬ್ಬರೂ ಒಟ್ಟಿಗೆ ಸರ್ಕಾರವನ್ನು ನಡೆಸುತ್ತಿದ್ದೀರಿ. ಸರ್ಕಾರದ ಮೇಲೆ ಯಾವುದೇ ವಿಧವಾದಂಥ ಆಪಾದನೆಯನ್ನು ಮಾಡತಕ್ಕ ಹವ್ಯಾಸಕ್ಕೆ

ಹೋಗದೆ, ಯಾವ ಬೇಜವಾಬ್ದಾರಿಯ ಮಾತುಗಳನ್ನು ಆಡದೆಯೇ ಇರತಕ್ಕ ವಾಸ್ತವಿಕ ಸನ್ನಿವೇಶವನ್ನು ತಮ್ಮ ಗಮನಕ್ಕೆ ತಂದು, ಸಮಸ್ಯೆಯ ಸ್ವರೂಪವನ್ನು ನಿಮ್ಮೆದುರಿಗೆ ಇಟ್ಟು, ನಿಮ್ಮ ಮೇಲಿರತಕ್ಕ ಜವಾಬ್ದಾರಿ ಮತ್ತು ನೀವು ಇವತ್ತು ರಾಜ್ಯಕ್ಕೆ ದೇಶಕ್ಕೆ ಹೇಳಬೇಕಾಗಿರತಕ್ಕ ಉತ್ತರ ಏನಿದೆ ಎನ್ನತಕ್ಕದ್ದನ್ನು ನಿಮಗೆ ಮನದಟ್ಟು ಮಾಡಿಕೊಟ್ಟು, ನಿಮ್ಮ ಆತ್ಮಸಾಕ್ಷಿಗೆ ಅನುಗುಣವಾಗಿ, ಅದು ಸದನದ ಸಮಿತಿಯನ್ನೋ ಅಥವಾ ಸಿ.ಬಿ.ಐ ಯನ್ನೋ ಮತ್ತೊಂದನ್ನೋ ಮಾಡುವುದು ನಿಮಗೆ ಬಿಟ್ಟಿದ್ದು. ನೀವು ಪ್ರಮಾಣ ವಚನ ಸ್ವೀಕಾರ ಮಾಡುವ ಸಂದರ್ಭದಲ್ಲಿ, ಎಲ್ಲಾ ವರ್ಗದ ಜನರಿಗೆ ನ್ಯಾಯ ಮಾಡುತ್ತೇವೆ, ರಾಗ, ದ್ವೇಷ ಇಲ್ಲದೆಯೇ ಕೆಲಸ ಮಾಡುತ್ತೇವೆಂದು ಹೇಳಿದ್ದೀರಿ. ಸಂವಿಧಾನ ಈ ದೇಶದ ಎಲ್ಲಾ ವರ್ಗದ ಜನರಿಗೆ ರಕ್ಷಣೆ ಕೊಡಬೇಕೆಂದು ಇದೆ.

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಉಪಾಧ್ಯಕ್ಷರೆ, Adjournment motion ಕೊಟ್ಟಿದ್ದಾರೆ. ಪ್ರಿಲಿಮಿನರಿ ಸಬ್‌ಮಿಷನ್ ಮಾಡಬೇಕು.

ಶ್ರೀ ಜೆ.ಸಿ. ಮಾಧುಸ್ವಾಮಿ : ಇದನ್ನು ಚರ್ಚೆಗೆ ತೆಗೆದುಕೊಂಡಿದ್ದಾರೆ.

ಶ್ರೀ ಜಗದೀಶ್ ಶೆಟ್ಟರ್ : ಚರ್ಚೆಗೆ ತೆಗೆದುಕೊಂಡಿದ್ದರೆ ಅಡ್ಡಿ ಇಲ್ಲ.

Sri K.R. Ramesh Kumar : Even otherwise ಶೆಟ್ಟರ್‌ರವರೆ, ನನ್ನ ಮತುಗಳಲ್ಲೇ ಸ್ಪಷ್ಟೀಕರಣ ಕೊಟ್ಟುಬಿಟ್ಟೆ. ಅಡ್ಮಿಷನ್ ಆಯಿತೋ ಇಲ್ಲವೋ ಎಂದು technicalities ಗೆ ಹೋಗುವುದು ಬೇಡ. ನಾನು ವಾಸ್ತವಾಂಶವನ್ನು ನಿಮ್ಮೆದುರಿಗೆ ಇಟ್ಟೆ. ಎಲ್ಲಿಯ ತನಕ boil down ಆಗುತ್ತದೆ ಎಂದರೆ, ರಿಪಿಟೇಷನ್ ಮಾಡಿದರೆ ನಾನು ಕುಳಿತುಕೊಂಡುಬಿಡುತ್ತೇನೆ. ಏಕೆಂದರೆ ಇನ್ನೂ ಮಾತನಾಡುವವರು ಇದ್ದಾರೆ. ನಾವು ನಿಮ್ಮ ಮೇಲೆ ಮಾಡಿರತಕ್ಕ ಆರೋಪ, ನೀವು ನಮ್ಮ ಮೇಲೆ ಮಾಡಿರತಕ್ಕ ಆರೋಪ ರಾಜಕೀಯವಾಗಿ, ಇವತ್ತಿನ ವಿಶೇಷ ಸಂದರ್ಭ, ನೀವು ಅಧಿಕಾರದಲ್ಲಿರತಕ್ಕದ್ದು, ಇಂತ ಸ್ಥಿತಿ ಉದ್ಭವವಾಗಿರತಕ್ಕದ್ದು. ಇದರಿಂದ ನೀವು ಪಾರಾಗಬೇಕಾಗಿದೆ. ಇದೊಂದು ಪರೀಕ್ಷೆಯಲ್ಲಿ ನೀವು ತೇರ್ಗಡೆಯಾಗಬೇಕು, ಜನರಿಗೆ ಮನದಟ್ಟಾಗಬೇಕು. ನೀವು ನ್ಯಾಯರೀತಿಯಿಂದ ಆಡಳಿತವನ್ನು ನಿರ್ವಹಣೆ ಮಾಡಿದ್ದೀರಿ ಎನ್ನತಕ್ಕ ಮಾತನ್ನು ನಾನು ಹೇಳಿದ್ದೇನೆ. ನಾವು ನಿಲುವಳಿ ಸೂಚನೆ ಮಂಡನೆ ಮಾಡಿದಾಗ, ವಿನಂತಿಗಳ ಜೊತೆಯಲ್ಲಿ ಹೇಳಿ, ವಿನಂತಿಸಿಕೊಳ್ಳುತ್ತೇವೆ ಎಂದು ಯಾರೂ ತಮ್ಮ ಮಾತನ್ನು ಮುಕ್ತಾಯ ಮಾಡುವುದಿಲ್ಲ, ಇರತಕ್ಕಂಥ business ಅನ್ನು adjourn ಮಾಡಿ ಇದನ್ನೇ ತೆಗೆದುಕೊಳ್ಳಬೇಕು. Adjourn ಮಾಡಿ ತೆಗೆದುಕೊಂಡರೂ ಇದಕ್ಕಿಂತ ಹೆಚ್ಚು ಹೇಳುವುದಕ್ಕೆ ನಮ್ಮ ಹತ್ತಿರ ಮಾಹಿತಿಯೇನೂ ಇಲ್ಲ. ಹೇಳಬೇಕಾದುದೆಲ್ಲವನ್ನೂ ಕೂಡ ಅತ್ಯಂತ ಪ್ರಾಮಾಣಿಕವಾಗಿ ತಮ್ಮ ಮುಖಾಂತರ ಸರ್ಕಾರದ ಗಮನಕ್ಕೆ ತಂದಿದ್ದೇವೆ. ಈ ಎಡಬಿಡಂಗಿತನ ಏನಿದೆ,

ಹೇಳಿಕೆಗಳಲ್ಲಿ ಇರತಕ್ಕಂಥ ವ್ಯತ್ಯಾಸ ಮತ್ತು ವಾಸ್ತವಾಂಶ ಇದೆಲ್ಲವನ್ನೂ ಗಮನದಲ್ಲಿಟ್ಟುಕೊಂಡು ಸರ್ಕಾರ ಸತ್ಯವನ್ನು ಸದನಕ್ಕೆ ಮತ್ತು ಜನರಿಗೆ ತಿಳಿಸಬೇಕೆಂದು ಹೇಳಿ, ನಾನು ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ (ಬ್ರಹ್ಮಾವರ) : ಮಾನ್ಯ ಉಪಾಧ್ಯಕ್ಷರೆ, ಈ ನಿಲುವಳಿ ಸೂಚನೆ ಜೊತೆಗೆ ನಾನು ಮೊನ್ನೆಯೇ ಭಟ್ಕಳ ಗಲಭೆ ನಂತರ ಉಡುಪಿಯಲ್ಲಿ ನಡೆದಂತಹ ಘಟನೆಗಳ ಬಗ್ಗೆ ಚರ್ಚೆ ಮಾಡಲಿಕ್ಕೆ ನೋಟಿಸ್‌ವೊಂದನ್ನು ಕೊಟ್ಟಿದ್ದೆ. ಮಾನ್ಯ ದೇಶಪಾಂಡೆಯವರು ಮತ್ತು ನಮ್ಮ ಇತರ ಮಿತ್ರರೆಲ್ಲಾ ಭಟ್ಕಳ ಘಟನೆ ಬಗ್ಗೆ ಇಲ್ಲಿ ಪ್ರಸ್ತಾಪಿಸಿದ್ದಾರೆ. ದೇವರ ಕಲ್ಲು ಇದ್ದದ್ದರ ಬಗ್ಗೆ ಪ್ರಾರಂಭವಾದಂತಹ ಘಟನೆ ಯಾವ ಪ್ರಮಾಣಕ್ಕೆ ದೊಡ್ಡದಾಗಿ ಬೃಹದಾಕಾರವಾಗಿ ಬೆಳೆಯಿತು, ಒಬ್ಬ, ಅಮಾಯಕ ಶ್ರೀಧರ್ ನಾಯಕ್ ಎಂಬುವವನ ಕೊಲೆಯಾಯಿತು, ಇಷ್ಟು ಆಗುವವರೆಗೂ ಅಲ್ಲಿಯ ಇಲಾಖೆಯ ಅಧಿಕಾರಿಗಳಿಗೆ, ಎಲ್ಲಾ ಇಲಾಖೆಗಳೂ ಸೇರಿದಂತೆ, ಜಿಲ್ಲಾಡಳಿತಕ್ಕೆ ಮಾಹಿತಿಯೇ ಇರಲಿಲ್ಲ ಮುಂತಾದ ವಿಚಾರಣೆಗಳನ್ನೆಲ್ಲಾ ಅವರು ತಿಳಿಸಿದ್ದಾರೆ. ಒಬ್ಬ ಅಮಾಯಕನ ಕೊಲೆಯಾದ ನಂತರದ ಘಟನೆಗಳ ಬಗ್ಗೆಯೂ ಗಮನಹರಿಸಬೇಕಾಗಿತ್ತು. ಅನೇಕ ವರ್ಷಗಳಿಂದ ಭಟ್ಕಳ ಬೂದಿ ಮುಚ್ಚಿದ ಕೆಂಡದ ಹಾಗಿದೆ. ಇದು ಇವರಿಗೆ ಗೊತ್ತಿಲ್ಲದೇ ಇಲ್ಲ. ಇಡೀ ಜಿಲ್ಲಾಡಳಿತಕ್ಕೆ ಗೊತ್ತಿದೆ, ಈವರೆಗೆ ಬಂದಂತಹ ಎಲ್ಲಾ ರಾಜ್ಯ ಸರ್ಕಾರಗಳಿಗೂ ಗೊತ್ತಿದೆ. ಏಕೆಂದರೆ, ದಿವಂಗತ ಚಿತ್ತರಂಜನ್‌ರವರ ಕೊಲೆ ಪ್ರಕರಣದ ನಂತರದ ಘಟನೆಗಳನ್ನು ನೆನಪು ಮಾಡಿಕೊಂಡಾಗ ಇದು ವೇದ್ಯವಾಗುತ್ತದೆ. ಮೊನ್ನೆ ಶ್ರೀಧರ್ ನಾಯಕನ ಕೊಲೆ, ನಂತರ ಇನ್ನೋರ್ವ ವ್ಯಕ್ತಿಗೆ ಮಚ್ಚಿನಲ್ಲಿ ಕಡಿದಂತದ್ದು, ಕೆಲವರಿಗೆ ಗಾಯಗಳಾಗಿ, ಅವರನ್ನು ಅಲ್ಲಿಂದ ಕುಂದಾಪುರ ಆಸ್ಪತ್ರೆಗೆ ತಂದಂಥದ್ದು, ಅಲ್ಲಿ ವೈದ್ಯರಿಗೆ ದೂರವಾಣಿ ಮುಖೇನ ಅವರಿಗೆ ಚಿಕಿತ್ಸೆ ಕೊಡಬಾರದು ಎಂದು ಹೇಳಿದಂತಾದ್ದು, ಅಲ್ಲಿಂದ ಮಂಗಳೂರಿಗೆ ಕರೆದುಕೊಂಡು ಹೋಗುವಾಗ ಕೂಳೂರಿನಲ್ಲಿ ನಡೆದಂತಹ ಘಟನೆ, ಆಮೇಲೆ ಮಲ್ಪೆಯಲ್ಲಿ ನಡೆದಂತಹ ಘಟನೆಗಳನ್ನು ನೋಡಿದಾಗ, ಅಲ್ಲಿ ಈ ಭಟ್ಕಳ ಘಟನೆಯ ಒಂದು ಭಾಗವನ್ನು ಮಾತ್ರ ಮಾನ್ಯ ದೇಶಪಾಂಡೆಯವರು ಮತ್ತು ಇತರರು ವಿವರಿಸಿದ್ದಾರೆ. ಉಡುಪಿಯಲ್ಲಿ ಅಂದು ಒಂದು ಸಂಘಟನೆಯವರು ಬಂದ್ ಕಾಲ್ ಅನ್ನು ಕೊಟ್ಟರು. ಬಂದ್ ಕಾಲ್ ಅನ್ನು ಕೊಟ್ಟ ನಂತರ, ಆ ದಿವಸ ಬೆಳಿಗ್ಗೆ ಅದನ್ನು ವಾಪಸ್ಸು ಪಡೆದಿದ್ದಾರೆ ಎಂದು ಪತ್ರಿಕೆಯಲ್ಲಿ ಬಂದಿತು. ಏಕೆಂದರೆ, ಪಿ.ಯು.ಸಿ. ಪರೀಕ್ಷೆ ಇತ್ತು. ವಾಪಸ್ ಪಡೆದಿದ್ದಾರೆ ಎಂದು ಬಂದಿತು. ಆದರೆ ಬಸ್ಸು ಮತ್ತು ಇತರ ವಾಹನ ಸಂಚಾರವನ್ನೇ ಸ್ಥಗಿತಗೊಳಿಸಿಬಿಟ್ಟರು. ಅಂದು ಮಕ್ಕಳು ಪರೀಕ್ಷೆಗೆ ಹೋಗಬೇಕಾಗಿತ್ತು. ಮಾನ್ಯ ಶ್ರೀರಾಮರೆಡ್ಡಿಯವರು ಮಾತನಾಡುವಾಗ ನಾನು ಅದನ್ನು ಹೇಳಿದ್ದೆ. ಮಕ್ಕಳು

ಎಷ್ಟು ಜನಕ್ಕೆ ಪರೀಕ್ಷೆಗೆ ಹೋಗಲಿಕ್ಕೆ ಆಗಿದೆ ಅಥವಾ ಆಗಿಲ್ಲ ಎನ್ನುವುದೊಂದು. ಪರೀಕ್ಷೆಗೆ ಹೋಗುವ ಮುಂಚೆ the tension they have undergone, ಅದರ ಬಗ್ಗೆಯೂ ನಾವು ಆಲೋಚನೆ ಮಾಡಬೇಕಾಗುತ್ತದೆ. ಬಂದ್ ಕಾಲ್ ಕೊಟ್ಟವರಿಗೆ ಮತ್ತು ವಾಹನಗಳನ್ನು ನಿಲ್ಲಿಸುವವರಿಗೆ ಅದರ ಬಗ್ಗೆ ಏನೂ ಆಲೋಚನೆಯೇ ಇಲ್ಲ. ಇದರಿಂದ ಸಮಾಜದಲ್ಲಿ ಏನಾಗುತ್ತದೆ ಎಂಬುದನ್ನೇ ಅವರು ಯೋಚಿಸಲಿಲ್ಲ. ನಾನೇನು ಹೇಳುತ್ತೇನೆ ಎಂದರೆ, ಇದು ಒಂದು ಸಮಾಜಕ್ಕಲ್ಲ, ಒಂದು ಗಲಭೆ ಪ್ರಾರಂಭವಾದಾಗ ಎಲ್ಲಾ ಸಮಾಜದವರಿಗೂ ತೊಂದರೆಯಾಗುವಂತಾದ್ದು ಇದೆ. ಒಂದು ಸಮಾಜಕ್ಕೆ ತೊಂದರೆಯಾಗುವಂತಾದ್ದಲ್ಲ. ಇದು ಕರಾವಳಿಯ ಇನ್ನೊಂದು ದೊಡ್ಡ ಸಮಸ್ಯೆ. ಇಡೀ ಕರಾವಳಿಯಲ್ಲಿ ಈ ಸಮಸ್ಯೆ ಇದೆ. ಗಲಭೆ ಹೇಗೆ ಪ್ರಾರಂಭವಾಯಿತು? ಅದು ಮುಂದುವರೆದದ್ದು ಹೇಗೆ? ಅದಕ್ಕೆ ಕಾರಣರಾದ ವ್ಯಕ್ತಿಗಳ ಬಗ್ಗೆ ಕ್ರಮ ಏನು ತೆಗೆದುಕೊಂಡಿದ್ದೀರಿ? ಮತ್ತು ಅಲ್ಲಿ ಆದ ಘಟನೆಗೆ ಉಡುಪಿಯಲ್ಲಿ ಏಕೆ ಬಂದ್ ಕಾಲ್ ಕೊಟ್ಟರು ಎಂದು ನಾನು ಕೇಳುತ್ತೇನೆ. ಉಡುಪಿಯಲ್ಲಿ ಬಂದ್ ಕಾಲ್ ಕೊಟ್ಟಂತಹ ಸಂದರ್ಭದಲ್ಲಿ ಪರೀಕ್ಷೆ ಇದೆ. ಆ ಸಮಯದಲ್ಲಿ ಆರಕ್ಷಕರು ಮತ್ತು ಇಲಾಖೆಯ ಅಧಿಕಾರಿಗಳು ನನಗೆ ದೂರವಾಣಿ ಮುಖೇನ ಫೋನ್‌ನಲ್ಲಿ ಮಾತನಾಡಿ, ಪರಿಸ್ಥಿತಿ ಹೀಗಿದೆ, ಮಕ್ಕಳಿಗೆ ಕೆಲವರಿಗೆ ಪರೀಕ್ಷೆಗೆ ಹೋಗಲಿಕ್ಕಾಗುತ್ತಿಲ್ಲ, ಕೆಲವು invigilators ಗೆ ಪರೀಕ್ಷೆಗೆ ಹೋಗಲಿಕ್ಕಾಗಲಿಲ್ಲ. ಶಾಲಾ ಕಾಲೇಜುಗಳಿಗೆ ಪರೀಕ್ಷೆಯನ್ನು ನಡೆಸಲಿಕ್ಕೆ ಹೋಗಲಿಕ್ಕಾಗಿಲ್ಲ ಎಂದು ಹೇಳಿದರು. ಅಲ್ಲಿಯೇ ಪಕ್ಕದಲ್ಲಿದ್ದ ಪ್ರಾಥಮಿಕ ಶಾಲೆಯ graduate teachers ಅನ್ನು ಕರೆದುಕೊಂಡು ಇಲ್ಲಿ ಪರೀಕ್ಷೆಯನ್ನು ಮಾಡಿಸಿದ್ದಾರೆ. ಅವರನ್ನು invigilator ರನ್ನಾಗಿ ತೆಗೆದುಕೊಂಡಿದ್ದಾರೆ. ಇದೆಲ್ಲಾ ನಡೆದ ಘಟನೆ. ಆದ್ದರಿಂದ ಇದು ಒಂದು ಸಂಘಟನೆ ಎಂದು ನಾನು ಹೇಳುವುದಿಲ್ಲ. ಇದರ ಬಗ್ಗೆ ಒಂದು ತನಿಖೆಯಾಗಬೇಕಾಗುತ್ತದೆ. ಅದರೊಟ್ಟಿಗೆ ಮಾನ್ಯ ಉಪ ಮುಖ್ಯಮಂತ್ರಿಗಳ ಹಾಗೂ ಮಾನ್ಯ ಮುಖ್ಯಮಂತ್ರಿಗಳ ಹೇಳಿಕೆಗಳನ್ನು ನೋಡಬೇಕಾಗುತ್ತದೆ. ಒಂದು ISI ತಾಣ, ಅದರ ಬಗ್ಗೆ ಮಾನ್ಯ ರಮೇಶ್ ಕುಮಾರ್‌ರವರು ಹೇಳಿದರು. ನಾವೂ ಸಹ ಅದು ಇಲ್ಲವೆಂದು ಹೇಳುವಂತಹ ಪರಿಸ್ಥಿತಿಯಲ್ಲಿಲ್ಲ. ಕರಾವಳಿ ಪ್ರದೇಶದಲ್ಲಿ ಇಂತಹ ಘಟನೆಗಳು ಜಾಸ್ತಿಯಾಗುತ್ತಿವೆ. ಇನ್ನೊಂದು ರಾಜಕೀಯ ಪ್ರೇರಿತ ಆಗಿರುವಂಥಾದ್ದು. ಅದಕ್ಕೆ ಅವರು ಹೇಳಿದರು, ಇದರ ಬಗ್ಗೆ ತನಿಖೆಯಾಗಬೇಕು ಎಂದು. ವಿರೋಧ ಪಕ್ಷದಲ್ಲಿದ್ದಂತಹ ಕಾಂಗ್ರೆಸ್‌ನವರು ಮತ್ತು ಆಡಳಿತದಲ್ಲಿ ಇರುವಂತಹ ಬಿ.ಜೆ.ಪಿ. ಮತ್ತು ಜೆ.ಡಿ. (ಎಸ್) ನವರ ಬಗ್ಗೆ ಇಲ್ಲಿ ಆರೋಪ ಕೇಳಿ ಬಂದಿತು. ಘಟನೆ ತನಿಖೆಗೆ ನನ್ನ ಅನೇಕ ಸ್ನೇಹಿತರು ಸದನದ ಸಮಿತಿಯೊಂದನ್ನು ಮಾಡಿ ಎಂದು ಆಗ್ರಹಿಸಿದ್ದಾರೆ. ಅವರು ಹೇಳಿದ ಆಧಾರದ ಮೇಲೆ ಸಮಿತಿ

ರಚನೆ ಮಾಡುವುದಾದರೆ, ಈ ಮೂರು ಪಕ್ಷಗಳವರನ್ನು ಬಿಟ್ಟು ಮಾಡಬೇಕಾಗುತ್ತದೆ. ಕಾಂಗ್ರೆಸ್‌ನವರೂ ಇರಬಾರದು, ಬಿ.ಜೆ.ಪಿ.ಯವರೂ ಇರಬಾದರು, ಜೆ.ಡಿ.(ಎಸ್)ನವರೂ ಇರಬಾರದು. ಏಕೆಂದರೆ, ನೀವು ಮಾನ್ಯ ಮುಖ್ಯಮಂತ್ರಿಗಳ ಹತ್ತಿರವೇ ಗೃಹ ಇಲಾಖೆ ಇರುವುದರಿಂದ ಅನುಮಾನಕ್ಕೆ ಅವಕಾಶವಾಗುತ್ತದೆ. ಸ್ವತಃ ಗೃಹ ಇಲಾಖೆಯನ್ನು ಅವರು ಇಟ್ಟುಕೊಂಡಿರುವುದರಿಂದ, intelligence report ಆಧಾರದ ಮೇಲೆ ಅವರು ಆ ಹೇಳಿಕೆಯನ್ನು ಕೊಟ್ಟಿರಬಹುದು. ನಾನೇ ಸಮಿತಿಯಲ್ಲಿ ಇರಬೇಕೆಂದೇನಿಲ್ಲ, ಬೇರೆ ಕೆಲವರು ಪಕ್ಷೇತರರು ಇದ್ದಾರೆ, ಕನ್ನಡ ನಾಡು ಪಾರ್ಟಿಯವರು ಇದ್ದಾರೆ ಆದರೆ ಈ ಪಕ್ಷಗಳವರನ್ನು ಬಿಟ್ಟು ಒಂದು ಸದನ ಸಮಿತಿಯನ್ನು ಮಾಡಿ, ತಮಗೆ ವರದಿಯನ್ನು ಒಪ್ಪಿಸಲಿಕ್ಕೆ ಹೇಳಿ. ಮಾನ್ಯ ಮುಖ್ಯಮಂತ್ರಿಗಳು ಏನೂ ಮಾಹಿತಿ ಇಲ್ಲದೆ ಈ ರೀತಿಯಲ್ಲಿ ಹೇಳಿಕೆ ಕೊಡಲಿಕ್ಕೆ ಸಾಧ್ಯವಾಗುವುದಿಲ್ಲ, ಮಾನ್ಯ ಉಪ ಮುಖ್ಯಮಂತ್ರಿಗಳ ಹೇಳಿಕೆ ಸುಳ್ಳು ಎಂದು ನಾವು ಭಾವಿಸಲಿಕ್ಕೂ ಸಾಧ್ಯವಾಗುವುದಿಲ್ಲ. ಮಾನ್ಯ ಡಿ.ಆರ್. ಪಾಟೀಲ್‌ರು ತಮ್ಮ ಕಾರ್ಯಕರ್ತರು ಕೊಟ್ಟಂತಹ ಮಾಹಿತಿ ಮೇರೆಗೆ ಮಾನ್ಯ ಉಪ ಮುಖ್ಯಮಂತ್ರಿಗಳು ಹೇಳಿಕೆ ನೀಡಿರಬೇಕು ಎಂದರು. ಆದರೆ ಕಾರ್ಯಕರ್ತರು ಕೊಟ್ಟಂತಹ ಮಾಹಿತಿಯ ಆಧಾರದ ಮೇಲೆ ನಿರ್ಧಾರಕ್ಕೆ ಬರಲಿಕ್ಕೆ ಸಾಧ್ಯವಾಗುವುದಿಲ್ಲ. ಇಲಾಖೆಯವರು ಕೊಟ್ಟಂತಹ ಮಾಹಿತಿಯನ್ನು ನಾವು ಒಪ್ಪುತ್ತೇವೆ. ಯಾವುದಾದರೂ ಸರಿ. ಮಾನ್ಯ ಮುಖ್ಯಮಂತ್ರಿಗಳು ಮತ್ತು ಮಾನ್ಯ ಉಪ ಮುಖ್ಯಮಂತ್ರಿಗಳ ಹೇಳಿಕೆಯಿಂದಾಗಿ ರಾಜ್ಯದಲ್ಲಿ ಇನ್ನೂ ಗೊಂದಲ ಉಂಟಾಗಿದೆ. ರಾಜ್ಯದ ಜನತೆಯ ಮನಸ್ಸಿನಲ್ಲಿ ಗೊಂದಲ ಉಂಟಾಗಿದೆ. ಅದಕ್ಕೆ ಪರಿಹಾರವನ್ನು ಕಂಡು ಹಿಡಿಯುವಂತಾದ್ದು ಆಗಬೇಕು. ಮುಂದಿನ ದಿನಗಳಲ್ಲಿ ಇಂತಹ ಘಟನೆಗಳು ನಡೆಯದಿದ್ದ ಹಾಗೆ ನೋಡಿಕೊಳ್ಳಬೇಕು. ನಮ್ಮದು ಉಡುಪಿ ಜಿಲ್ಲೆ. ಮಾನ್ಯ ಆಚಾರ್ಯರವರೇ ಉತ್ತರ ಕನ್ನಡಕ್ಕೂ ಜಿಲ್ಲಾ ಉಸ್ತುವಾರಿ ಸಚಿವರು, ಉಡುಪಿಗೂ ಜಿಲ್ಲಾ ಉಸ್ತುವಾರಿ ಸಚಿವರಾಗಿದ್ದಾರೆ. ಮುಂದಿನ ದಿನಗಳಲ್ಲಿ ಇಂತಹ ಘಟನೆಗಳಾಗಬಾರದು. ಏಕೆಂದರೆ, ಮೊನ್ನೆ ಕನ್ನಡ ಪ್ರಭದಲ್ಲಿ ಒಂದು article ಬಂದಿತ್ತು. ಡಾ|| ಆಚಾರ್ಯರವರು ಅದನ್ನು ಓದಿದ್ದಾರೋ ಇಲ್ಲವೋ ನನಗೆ ಗೊತ್ತಿಲ್ಲ. ಅದರಲ್ಲಿ ಒಂದು ಮಾಹಿತಿಯನ್ನು ಕೊಟ್ಟಿದ್ದಾರೆ. ನಮ್ಮ ಜಿಲ್ಲೆಯಲ್ಲಿ ಸಂಸ್ಕೃತಿಯ ರಕ್ಷಣೆಯನ್ನು ಮಾಡತಕ್ಕಂಥವರು ಪೊಲೀಸರಲ್ಲ. ಅದಕ್ಕಾಗಿ ಇನ್ನೊಂದು ಪಡೆ ನಮ್ಮಲ್ಲಿ ಪ್ರಾರಂಭವಾಗಿದೆ. ದಾರಿಯಲ್ಲಿ ಹೋಗುವಾಗ ಅಡ್ಡ ಹಾಕುವಂತಾದ್ದು, ಬಸ್ಸಿನಲ್ಲಿ ಹೋಗುವವರನ್ನು ಇಳಿಸಿ ಅವರೇ ಕಾನೂನನ್ನು ಕೈಗೆತ್ತಿಕೊಂಡಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ಪತ್ರಿಕೆಯಲ್ಲಿ ಇದು ವರದಿಯಾಗಿದೆ. ಅದರ ಬಗ್ಗೆ ತನಿಖೆಯಾಗಬೇಕಾಗುತ್ತದೆ. ಅವರು moral police ಅಂತೆ, ಉಳಿದವರಿಗೆಲ್ಲಾ morality ಇಲ್ಲವೇ? ಅದರ ಬಗ್ಗೆ ತನಿಖೆಯಾಗಿ, ಯಾರು

ಕಾನೂನನ್ನು ಆರಕ್ಷಕರಲ್ಲದೆ ಬೇರೆಯವರು ಕೈಗೆ ತೆಗೆದುಕೊಳ್ಳುತ್ತಾರೋ ಸರ್ಕಾರ ತಕ್ಷಣವೇ ಅವರ ಮೇಲೆ ಕ್ರಮ ತೆಗೆದುಕೊಳ್ಳುವಂತಾದ್ದು ಮಾಡಬೇಕಾಗುತ್ತದೆ. ಇಲ್ಲದಿದ್ದರೆ, ಇಂತಹ ಘಟನೆಗಳು ಜಾಸ್ತಿಯಾಗಿ, ಗಲಭೆಗಳು ಜಾಸ್ತಿಯಾಗಲಿಕ್ಕೆ ಪ್ರಚೋದನೆ ನೀಡಿದಂತಾಗುತ್ತದೆ ಎಂದು ಹೇಳುತ್ತಾ ಸರ್ಕಾರ ಇದಕ್ಕೆ ಯಾವ ಕ್ರಮವನ್ನು ತೆಗೆದುಕೊಳ್ಳುತ್ತದೆ ಎಂದು ಹೇಳಬೇಕೆಂದು ತಮ್ಮ ಮುಖೇನ ಕೇಳಿಕೊಳ್ಳುತ್ತೇನೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಅಂಕೋಲ) : ಮಾನ್ಯ ಉಪಾಧ್ಯಕ್ಷರೆ, ತಾವು ಈ ನಿಲುವಳಿ ಸೂಚನೆಯನ್ನು ನಿಯಮ 69ರ ಪ್ರಕಾರ ಪರಿವರ್ತಿಸಿ ನಮ್ಮೆಲ್ಲರಿಗೆ ಈ ಚರ್ಚೆಯಲ್ಲಿ ಭಾಗವಹಿಸಲಿಕ್ಕೆ ಅವಕಾಶ ಮಾಡಿಕೊಟ್ಟಿದ್ದೀರಿ. ತಮಗೆ ಧನ್ಯವಾದಗಳನ್ನು ಸಲ್ಲಿಸುತ್ತೇನೆ.......

ಶ್ರೀ ಬಸವರಾಜ ರಾಯರೆಡ್ಡಿ : ಇದನ್ನು convert ಮಾಡಿಲ್ಲ. ಯಾರು signatories ಇದ್ದಾರೋ ಅವರು ಮಾತ್ರ ಇದರ ಬಗ್ಗೆ ಮಾತನಾಡಬೇಕಾಗುತ್ತದೆ.

ಶ್ರೀ ಜಗದೀಶ್ ಶೆಟ್ಟರ್ : ಅದಕ್ಕಾಗಿಯೇ ನಾನು ಆಗಲೇ ಆ ಮಾತನ್ನು ಹೇಳಿದ್ದು......

(ಗೊಂದಲ)

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಭಟ್ಕಳದ ವಿಷಯದ ಕುರಿತಂತೆ ಇದುವರೆಗೆ ಅನೇಕರು ಈಗಾಗಲೇ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ. ನಾನು 1994ನೇ ಇಸವಿಯಲ್ಲಿ ಪ್ರಥಮ ಬಾರಿಗೆ ಆಯ್ಕೆಯಾಗಿ ಬಂದ ನಂತರದಲ್ಲಿ, ಉತ್ತರ ಕನ್ನಡ ಜಿಲ್ಲೆ ಬಗ್ಗೆ, ಭಟ್ಕಳದ ಬಗ್ಗೆ ಸಾಕಷ್ಟು ಬಾರಿ ಈ ಸದನದಲ್ಲಿ ಚರ್ಚೆಯಾಗಿದೆ. ಆಗ ನಮ್ಮ ಜೊತೆಯಲ್ಲಿ, ನಮ್ಮೆಲ್ಲರಿಗೂ ಹಿರಿಯರಾಗಿದ್ದಂತಹ ಡಾ॥ ಚಿತ್ತರಂಜನ್‌ರವರು ಆಯ್ಕೆಯಾಗಿ ಬಂದಿದ್ದರು. 1996ರಲ್ಲಿ ಅವರ ಕೊಲೆಯೂ ಆಯಿತು. ಅದಕ್ಕಿಂತ ಮೊದಲು 1991ರಿಂದ 1993ರವರೆಗೆ ಅಲ್ಲಿ ನಡೆದಂತಹ ಕೋಮು ಗಲಭೆ, ಆ ಕೋಮು ಗಲಭೆ ಏಕೆ ನಡೆಯಿತು? ಅದಕ್ಕೆ ಏನೇನು ಕಾರಣಗಳಿತ್ತು ಎಂದು ತನಿಖೆ ಮಾಡಿರುವಂತಹ ಜಗನ್ನಾಥ್ ಶೆಟ್ಟಿ ಆಯೋಗ, ಅದರ ವರದಿ ಮತ್ತು ಚಿತ್ತರಂಜನ್‌ರವರ ಹತ್ಯೆಗೆ ಸಂಬಂಧ ಪಟ್ಟಂತೆ ರಾಮಚಂದ್ರಯ್ಯ ಆಯೋಗ ವರದಿಯನ್ನು ಬಹಿರಂಗಪಡಿಸಬೇಕು ಎನ್ನುವುದಕ್ಕೆ ನಡೆದಂತಹ ಪ್ರಯತ್ನ, ಅದಾದ ನಂತರದಲ್ಲಿ ಕಳೆದ ಒಂದು ಅಥವಾ ಒಂದೂವರೆ ವರ್ಷಗಳ ಹಿಂದೆ ನಮ್ಮ ಬಿ.ಜೆ.ಪಿ.ಯ ಅಧ್ಯಕ್ಷರಾಗಿದ್ದಂತಹ ಶ್ರೀ ತಿಮ್ಮಪ್ಪ ನಾಯಕರ ಕೊಲೆಯಾಯಿತು. ಇದುವರೆಗೂ ಅದರ ಆರೋಪಿಗಳು ಯಾರು ಎಂದು ಕಂಡುಹಿಡಿಯದೆ ಬಂಧಿಸಲಿಕ್ಕೆ ಆಗದೆ ಇರುವಂತಹ ಒಂದು ಸಂದರ್ಭ, ಇದೆಲ್ಲದರ ಹಿನ್ನೆಲೆಯಲ್ಲಿ, ಇದಕ್ಕೂ ಹಿಂದಿನ ಇತಿಹಾಸಕ್ಕೆ ನಾನು ಹೋಗುವುದಕ್ಕೆ ಬಯಸುವುದಿಲ್ಲ, ಭಟ್ಕಳ ನಮ್ಮ

ರಾಜ್ಯದಲ್ಲಿ ಅತ್ಯಂತ ಸೂಕ್ಷ್ಮವಾದಂತಹ ಪ್ರದೇಶ ಎನ್ನುವುದು ಇಡೀ ಸದನಕ್ಕೇ ಗೊತ್ತಿರುವಂತಹ ಸತ್ಯ ಸಂಗತಿಯಾಗಿದೆ. ಇಲ್ಲಿ ಈ ಸೂಕ್ಷ್ಮವಾದಂತಹ ಪ್ರದೇಶ ಎನ್ನುವುದು ಇಡೀ ಸದನಕ್ಕೇ ಗೊತ್ತಿರುವಂತಹ ಸತ್ಯ ಸಂಗತಿಯಾಗಿದೆ. ಇಲ್ಲಿ ಈ ಸೂಕ್ಷ್ಮವಾದಂತಹ ಪರಿಸ್ಥಿತಿಯ ದುರ್ಲಾಭ ಪಡೆದುಕೊಳ್ಳುತ್ತಿರುವಂತಹ ಅನೇಕ ಕಾಣದ ಕೈಗಳು ಕೆಲಸ ಮಾಡುತ್ತಿರುವುದನ್ನು ಬಹಳ ಗಂಭೀರವಾಗಿ ನಾವು ನೋಡಬೇಕಾಗಿದೆ. ಈಗ ನಾನು ವಿಷಯಕ್ಕೆ ಹೋಗುವುದಕ್ಕಿಂತ ಮೊದಲು, ನಮ್ಮ ಜಿಲ್ಲೆ ಶಾಂತಿಪ್ರಿಯವಾದಂತಹ ಜಿಲ್ಲೆ, ಶಾಂತಿಯನ್ನು ಕಾಪಾಡಿಕೊಳ್ಳುತ್ತಾರೆ ಅನ್ನುವುದು ಇದೆ, ರಾಜ್ಯದಲ್ಲೂ ಶಾಂತಿಯನ್ನು ಕಾಪಾಡಿಕೊಳ್ಳಬೇಕು ಎನ್ನುವಂತಾದ್ದು ನಮ್ಮೆಲ್ಲರ ಅಪೇಕ್ಷೆ ಇದೆ, ಈ ಸದನದ ಅಭಿಪ್ರಾಯ ಇದೆ. ಹಾಗಾಗಿ ಶಾಂತಿ ನೆಲಸಬೇಕು, ನಾವು ಪರಸ್ಪರ ಪ್ರೀತಿ, ವಿಶ್ವಾಸದಿಂದ ಆಡಳಿತವನ್ನು ನಡೆಸಬೇಕು. ಜನ ತಮ್ಮ ಜೀವನವನ್ನು ನಡೆಸಬೇಕು ಎನ್ನುವಂತಹ ಒಂದು ಸದಿಚ್ಛೆಯಿಂದ ನಾವು ಇಲ್ಲಿ ಇರುವಂತಹವರು. ಹಾಗಾಗಿ ಅಲ್ಲಿ ಶಾಂತಿ ನೆಲೆಸಬೇಕೆಂದರೆ ಕೆಲವು ಕ್ರಮ ಸರ್ಕಾರದಿಂದಲೂ ಆಗಬೇಕಾಗಿದೆ, ಕೆಲವು ಕ್ರಮ ಸರ್ಕಾರದ ಮೂಲಕ ನಾವು ಇಲ್ಲಿಂದ ಸಂದೇಶವನ್ನು ಕಳುಹಿಸುವ ಮೂಲಕವೂ ಆಗಬೇಕಾಗಿದೆ. ಮೊನ್ನೆಯ ಘಟನೆಯಲ್ಲಿ, ಯುಗಾದಿ ಹಬ್ಬದ ವಾತಾವರಣದ ಸಂದರ್ಭದಲ್ಲಿ ಶ್ರೀಧರ್‌ನಾಯಕ್‌ರವರ ಕೊಲೆ ಆಯಿತು. ನಾನು ಶ್ರೀಧರನಾಯಕ್‌ರವರ ಆತ್ಮಕ್ಕೆ ಶ್ರದ್ಧಾಂಜಲಿಯನ್ನು ಕೋರುತ್ತೇನೆ. ಡಾ: ವಿ.ಎಸ್. ಆಚಾರ್ಯರವರು ನಮ್ಮ ಜಿಲ್ಲೆಯ ಉಸ್ತುವಾರಿ ಸಚಿವರು. ಅವರು ಸರ್ಕಾರದ ಪರವಾಗಿ ಅಲ್ಲಿ ಬಂದು ಅವರ ಮನೆಗೆ ಸಾಂತ್ವನ ಹೇಳಿ, ಒಂದು ಲಕ್ಷ ರೂಪಾಯಿಗಳ ಪರಿಹಾರವನ್ನು ಕೊಟ್ಟು ಬಂದಿದ್ದಾರೆ. ಅವರ ಕುಟುಂಬಕ್ಕೆ ಐದು ಲಕ್ಷ ರೂಪಾಯಿಗಳ ಪರಿಹಾರವನ್ನು ಕೊಡಬೇಕೆಂದು ನಾನು ಈ ಸಂದರ್ಭದಲ್ಲಿ, ಸದನದ ಮೂಲಕ ಮಾನ್ಯ ಹಣಕಾಸಿನ ಸಚಿವರಲ್ಲಿ, ಮಾನ್ಯ ಮಂತ್ರಿಗಳನ್ನು ಹಾಗೂ ಮಾನ್ಯ ಉಪ ಮುಖ್ಯಮಂತ್ರಿಗಳನ್ನು ವಿನಂತಿಸಿಕೊಳ್ಳುತ್ತೇನೆ. ಆದರೆ ಈ ಘಟನೆಯ ಮೂಲಕ್ಕೆ ನಾವು ಹೋಗಬೇಕಾಗಿದೆ. ಅಧಿಕಾರಿಗಳು ಸಾಕಷ್ಟು ಶ್ರಮವಹಿಸಿ ಕೆಲಸ ಮಾಡಿದ್ದಾರೆ. ಅದರ ವಿವರಗಳನ್ನು ಮಾನ್ಯ ದೇಶಪಾಂಡೆಯವರು ಸದನದಲ್ಲಿ ಹೇಳಿದ್ದಾರೆ. ಇಲ್ಲಿ ಮುಖ್ಯವಾಗಿರುವುದು ಪುರಸಭೆ ಪಾತ್ರ. ಪುರಸಭೆ ಏನು ಮಾಡಿದೆ, ಅದು ಈ ಘಟನೆಗೆ ಪ್ರಚೋದನೆ ನೀಡಿದೆ. ಎಡಿಬಿಯಿಂದ ಹಣ ಮಂಜೂರಾಗಿದೆ, ಎಲ್ಲಿ ಟ್ಯಾಂಕ್ ಕಟ್ಟಬೇಕೆಂದು ಜಾಗ ಗುರುತಿಸಿದ್ದಾರೆ. ಅಲ್ಲಿ ಜಟಕಾ ಮತ್ತು ಮಾಸ್ತಿ ವಿಗ್ರಹ ಅನಾದಿ ಕಾಲದಿಂದ ಇದೆ ಎಂದು ಇಡೀ ಜಗತ್ತಿಗೇ ಗೊತ್ತಿದೆ. ಅದು ಅನಾದಿ ಕಾಲದಿಂದ ಇದೆ. ಯಾರೋ ಹತ್ತು ಇಪ್ಪತ್ತು ವರ್ಷಗಳ ಹಿಂದೆ ಸ್ಥಾಪನೆ ಮಾಡಲಿಲ್ಲ, ಅನಾದಿ ಕಾಲದಿಂದ ಇದೆ. ಜಟಕಾ ಮತ್ತು ಮಾಸ್ತಿ ವಿಗ್ರಹ ಅಲ್ಲಿ ಇದೆ. ಅನಾದಿ ಕಾಲದಿಂದ

ಅಲ್ಲಿ ಪೂಜೆ ಪುನಸ್ಕಾರಗಳು ನಡೆಯುತ್ತಿವೆ ಎನ್ನುವುದು ಎಲ್ಲರಿಗೂ ಗೊತ್ತಿರುವಂತಹ ಸಂಗತಿ. ಎಡಿಬಿಯವರು ಅಲ್ಲಿ ಟ್ಯಾಂಕ್ ಕಟ್ಟಬೇಕೆಂದು ನಿರ್ಧರಿಸಿದಾಗ ಮಿನಿಸಿಪಾಲಿಟಿಯವರು, ಅಲ್ಲಿಯ ಪುರಸಭೆಯವರು ಅವರು ಹೋಗಿ ನೋಡಿಕೊಳ್ಳಬೇಕಾಗಿತ್ತು ಎನ್ನುವುದು ಬಹಳ ಮುಖ್ಯವಾಗಿರುವುದು. ಅವರ ಉದ್ಧಟತನದ, ಅವರ ದುರಹಂಕಾರದ, ಅವರು ಸಮಾಜದಲ್ಲಿ ಗಲಭೆಯನ್ನು ಸೃಷ್ಟಿಸಬೇಕೆಂಬ ಒಂದು ಷಡ್ಯಂತ್ರದ ಹಿನ್ನೆಲೆಯಲ್ಲಿ ಈ ಗಲಭೆ ಆಗಿರುವುದು. ಇದನ್ನು ಉಲ್ಲೇಖ ಮಾಡುವುದಕ್ಕೆ ನಮಗೆ ಕಷ್ಟವಾಗುತ್ತದೆ. ಏಕೆಂದರೆ ಪುರಸಭೆಯವರು ಹಿಂದೆ ಹೇಳಬೇಕಾಗಿತ್ತು.

ಶ್ರೀ ಬಸವರಾಜ ರಾಯರೆಡ್ಡಿ : ಹಾಗಿದ್ದರೆ ಐಎಸ್ಐಗೆ ಇದಕ್ಕೆ ಏನು ಸಂಬಂಧ?

(ಗೊಂದಲ)

ಶ್ರೀ ಆರ್.ವಿ. ದೇಶಪಾಂಡೆ : ನಾನು ಇಂಟರ್‌ವೀಸ್ ಮಾಡುತ್ತಿಲ್ಲ. ಅವರು ಸ್ಪಾಟ್‌ಗೆ ಹೋಗಿಲ್ಲ. ತಮ್ಮ ಮಾಹಿತಿ ಹೇಳುತ್ತಿದ್ದಾರೆ.

(ಗೊಂದಲ)

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಈ ಜಾಗ ಕಂದಾಯ ಇಲಾಖೆಯ ಜಾಗ. ಮೂರು ಎಕರೆ ಕೆಲವು ಗುಂಟೆಗಳು ಈ ಜಾಗದಲ್ಲಿ ಇದೆ. ಅಲ್ಲಿ ಈ ಮಾಸ್ತಿ ಮತ್ತು ಜಟಕಾ ವಿಗ್ರಹ ಒಟ್ಟಾರೆ ಇರುವುದು ಒಂದು–ಎರಡು ಗುಂಟೆ ಜಾಗ ಆಗಬಹುದು. ಮೂರು ಎಕರೆ ಚಿಲ್ಲರೆ ಜಾಗದೊಳಗೆ ಒಂದು–ಎರಡು ಗುಂಟೆ ಜಾಗ ಇದಕ್ಕೆ ಬೇಕಾಗಿರುವುದು ಇರಬಹುದು. ಈಗಾಗಲೇ ಹೇಳಿದಂತೆ ಮುನಿಸಿಪಾಲಿಸಿ ಚೀಫ್ ಆಫೀಸರ್ ಇರಬಹುದು, ತಹಶೀಲ್ದಾರ್ ಇರಬಹುದು, ಅಸಿಸ್ಟೆಂಟ್ ಕಮಿಷನರ್ ಇರಬಹುದು, ಪೊಲೀಸ್ ಇರಬಹುದು, ಇವರೆಲ್ಲರೂ ಹೇಳಿದ್ದಾರೆ. ಇಲ್ಲೇ ಜಟಕಾ ಮಾಸ್ತಿ ವಿಗ್ರ ಇದೆ, ಇದಕ್ಕೆ ಅಲ್ಲಿ ಬೇಲಿಯನ್ನು ಹಾಕಿ ಅಲ್ಲಿ ಮೊದಲಿನಿಂದ ಏನು ಪೂಜೆ ನಡೆಯುತ್ತಿದೆ, ಇದಕ್ಕೆ ಒಂದು ಶಾಶ್ವತವಾದ ಬೇಲಿಯನ್ನು ಹಾಕಿ, ಪೂಜೆಗೆ ಅವಕಾಶ ಮಾಡಿಕೊಡಬೇಕೆಂದು ಸತತವಾಗಿ ಎಲ್ಲರೂ ಹೇಳುತ್ತಿದ್ದಾರೆ. ನಿನ್ನೆ ಸಂಜೆ ನಡೆದಂತಹ ಶಾಂತಿ ಸಭೆಯಲ್ಲಿ ಸ್ವತಃ ಜಿಲ್ಲಾಧಿಕಾರಿಗಳು ಇದನ್ನು ಒಪ್ಪಿಕೊಂಡಿದ್ದಾರೆ, ಮತ್ತು ಅಲ್ಲಿ ಬೇಲಿ ಹಾಕಿ ಪೂಜೆ ಮಾಡುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ಆಗ್ರಹ ಇದೆ. ಸರ್ಕಾರ ಅದನ್ನು ಮಂಜೂರು ಮಾಡಿಕೊಡಬೇಕಾಗುತ್ತದೆ, ಅಸೈನ್ ಮಾಡಿಕೊಡುತ್ತಾರೆ. ಎಲ್ಲಾ ಕೋಮಿನವರು ಇದಕ್ಕೆ ಒಪ್ಪಿದ್ದಾರೆ. ಏಕೆಂದರೆ ಇದು ಸತ್ಯ ಸಂಗತಿ. ಅಲ್ಲಿ ಮೊದಲಿನಿದಲೂ ಪೂಜೆ ನಡೆಯುತ್ತಿದೆ, ಆದರೆ ಇಲ್ಲಿ ಪುರಸಭೆಯವರು ಅಲ್ಲಿ ಹೇಗೆ ಆ ಜಾಗವನ್ನು ಪೂಜೆಗೆಂದು ನೀವು ಬೇಡುತ್ತೀರಿ, ಈ ಜಾಗವನ್ನು ಬಿಟ್ಟು ನೀವು ಹೇಗೆ ವಾಟರ್

ಟ್ಯಾಂಕನ್ನು ಮುಂದೆ ಅಲ್ಲೆ ಕಟ್ಟುತ್ತೀರಿ, ಈ ಜಾಗವನ್ನು ಖುಲ್ಲಾ ಮಾಡಿ ಈ ಜಾಗದಲ್ಲಿ ವಾಟರ್ ಟ್ಯಾಂಕನ್ನು ಕಟ್ಟಬೇಕು, ಈ ರೀತಿ ಪ್ರಚೋದನಕಾರಿ ಪ್ರಯತ್ನಗಳು ಅಲ್ಲಿಯ ಪುರಸಭೆಯ ಉಪಾಧ್ಯಕ್ಷರು, ಮತ್ತು ಪುರಸಭೆಯ ಕೆಲವು ಸದಸ್ಯರಿಂದ 28ರ ರಾತ್ರಿ ಆ ಘಟನೆ ನಡೆಯಿತು. ಅಲ್ಲಿ ಜಟಕಾ ಮಾಸ್ತಿ ವಿಗ್ರಹಗಳನ್ನು ನೆಲಸಮ ಮಾಡಿದರು. ಜಟಕಾ ಮತ್ತು ಮಾಸ್ತಿ ವಿಗ್ರಹವನ್ನು ಯಾರು ನೆಲಸಮ ಮಾಡಿದರು, ಯಾರು ಅದನ್ನು ಭಗ್ನಗೊಳಿಸಿದರು. ಅವರನ್ನು ಹಿಡಿಯುವಂತಹ ಪ್ರಯತ್ನ ಸರ್ಕಾರದಿಂದ ಆಗುತ್ತಿರುವಂಥದ್ದು, ಅವರನ್ನು ತಕ್ಷಣವೇ ಹಿಡಿಯಬೇಕೆಂದು ಆಗ್ರಹ ಇದೆ. ಜನ ಹೇಳಿದರು ಇಂತಹವರುಗಳೆಲ್ಲಾ ಆರೋಪಿಗಳು ಇದ್ದಾರೆ ಎಂದು, ಮರುದಿನ ಪೊಲೀಸ್‌ನವರು ಹಿಡಿದರು. ಕೆಲವನ್ನು ಬಂಧಿಸಿ ವಿಚಾರಣೆಗೆ ಒಳಪಡಿಸಿದರು. ಹಾಗೆ ವಿಚಾರಣೆಗಳನ್ನು ನಡೆಸುವಾಗ ಅವರು ಕೆಲವು ಮಾಹಿತಿಗಳನ್ನು ಹೇಳಿದ್ದಾರೆ. ಗಲಭೆ ನಡೆದಿದೆ, ಕೊಲೆ ಆಗಿದೆ, ಆ ಸಂದರ್ಭದಲ್ಲಿ ನಮ್ಮ ಶ್ರೀಧರನಾಯಕರ ಕೊಲೆಯಾಗಿದೆ, ಬೇರೆ ಬೇರೆ ಅನೇಕ ಸಂಗತಿಗಳು ಇವೆ. ಹಾಗಾಗಿ ಪುರಸಭೆ ಜವಾಬ್ದಾರಿ ಇಲ್ಲೆ ಅತ್ಯಂತ ಮುಖ್ಯವಾದುದು. ಪುರಸಭೆ ಆ ಜಾಗ, ಕಂದಾಯ ಇಲಾಖೆಯ ಜಾಗ ಎನ್ನುವುದನ್ನು ಅರಿತುಕೊಂಡು ಅವರೇನು ಅಡ್ಡಿಪಡಿಸುವಂತಹ ಪ್ರಯತ್ನ ಮಾಡಿದ್ದಾರೆ, ಇದು ಎಲ್ಲಾ ಗಲಭೆಗೆ ಮೂಲ ಇದು ಇರುವುದು. ಹಾಗಾಗಿ ಅಲ್ಲಿಯ ಸಾರ್ವಜನಿಕರು ಇವತ್ತು ಹೇಳುತ್ತಿದ್ದಾರೆ. ಈ ರೀತಿ ಪುರಸಭೆ ನಮಗೆ ಬೇಡ, ಇದನ್ನು ಬರಖಾಸ್ತು ಮಾಡಬೇಕೆಂದು ಅಭಿಪ್ರಾಯ ಬರುತ್ತಿದೆ. ಅಂದು ಇದು ಸಮಜದಲ್ಲೆ ಅಶಾಂತಿ ಮೂಡಿಸುವುದಕ್ಕೆ ಈ ಪುರಸಭೆ ಪ್ರಯತ್ನ ಮಾಡಿದೆ. ಹಾಗಾಗಿ ಇಂತಹ ಪುರಸಭೆಯೇ ಬೇಡ ನಮಗೆ ಎಂದು ಹೇಳುತ್ತಿದ್ದಾರೆ. ಈಗ ಅಲ್ಲಿ ಜಟಕಾ ಮತ್ತು ಮಾಸ್ತಿ ವಿಗ್ರಹಗಳು ಸ್ಥಾಪನೆ ಆಗಬೇಕು, ಪೂಜೆಗೆ ಅವಕಾಶ ಕೊಡಬೇಕೆಂದು ನಿನ್ನೆ ಸಂಜೆ ಶಾಂತಿ ಸಭೆಯಲ್ಲಿ ಎಲ್ಲರೂ ಸೇರಿ ಒಟ್ಟಾಗಿ ತೆಗೆದುಕೊಂಡ ನಿರ್ಣಯ ಅದು. ಅದು ಆಗಲೇಬೇಕು. ಐದು ಲಕ್ಷ ರೂಪಾಯಿಗಳ ಪರಿಹಾರವನ್ನು ಕೊಡುವುದರ ಜೊತೆಯಲ್ಲಿ ಅಲ್ಲಿ ಈ ಪೂಜೆಗೆ ಅವಕಾಶ ಕಲ್ಪಿಸಿಕೊಡಲೇಬೇಕು. ಶ್ರೀಧರನಾಯಕ್‌ರವರ ಕೊಲೆಗೆ ಯಾರು ಕಾರಣಕರ್ತರಾಗಿದ್ದಾರೆ, ಅವರನ್ನು ತಕ್ಷಣ ಬಂಧಿಸುವಂತಹ ಪ್ರಯತ್ನವೂ ಆಗಬೇಕು, ಪ್ರಯತ್ನಗಳು ನಡೆಯುತ್ತಿವೆ, ಒಬ್ಬರನ್ನು ಬಂಧಿಸಿದ್ದಾರೆ, ಕೆಲವರನ್ನು ವಿಚಾರಣೆಗೆ ಒಳಪಡಿಸಿದ್ದಾರೆ, ಇತ್ಯಾದಿ ಪ್ರಯತ್ನಗಳು ನಡೆಯುತ್ತಿವೆ. ಆದರೆ ಹಿಂದಿನ ಎಲ್ಲಾ ಘಟನೆಗಳನ್ನು ನೋಡಿದಾಗ ಈ ಘಟನೆಗಳಲ್ಲಿ ತಕ್ಷಣದಲ್ಲಿ ಅಪರಾಧಿಗಳು ಯಾರು ಎನ್ನುವುದನ್ನು ಪತ್ತೆ ಹಚ್ಚಿ ಅವರನ್ನು ಬಂಧಿಸಿ ಅವರನ್ನು ಶಿಕ್ಷೆಗೆ ಒಳಪಡಿಸುವಂತಹ ಪ್ರಯತ್ನಗಳು ಆಗಲೇಬೇಕಾದಂತಹ ಅಗತ್ಯವೂ ಇದೆ. ಹಾಗಾಗಿ ಇಲ್ಲಿ ಮುಖ್ಯವಾಗಿ ಈ ರೀತಿಯ ಪರಿಸ್ಥಿತಿಯ ಲಾಭವನ್ನು ಪಡೆದು ಹೊಸದಾಗಿ

ಬಂದಿರುವಂತಹ ಸರ್ಕಾರದ ಮೇಲೆ ಕೆಟ್ಟ ಹೆಸರು ತರಬೇಕೆಂದು ಅನೇಕರು ಕಾದುಕೊಂಡಿದ್ದಾರೆ. ಯಾವ ಯಾವ ಸಂದರ್ಭ ಸಿಗುತ್ತದೆ, ಯಾವ ಯಾವ ಅವಕಾಶ ಸಿಗುತ್ತದೆ ಎಂದು ಕಾಯುತ್ತಿದ್ದಾರೆ. ಅವರ ಬಗ್ಗೆ ನಾವು ಎಚ್ಚರಿಕೆಯಿಂದ ಇರಬೇಕಾಗಿದೆ. ಇದು ಅಲ್ಲಿಯೇ ಇತ್ಯರ್ಥವಾಗುವಂತಹ ವಿಷಯ. ಅಲ್ಲಿಯೇ ಇತ್ಯರ್ಥವೂ ಆಗುತ್ತದೆ ಎಂದು ಸಂಪೂರ್ಣ ನಂಬಿಕೆಯೂ ಇದೆ. ಹಾಗಾಗಿ ನಿನ್ನೆ ಶಾಂತಿ ಸಭೆಯಲ್ಲಿ ಎಲ್ಲಾ ಕೋಮಿನವರು ಸೇರಿ ನಿರ್ಣಯ ಮಾಡಿದ್ದಾರೆ. ಇಂತಹ ಪರಿಸ್ಥಿತಿಯಿಂದ ಈ ಸರ್ಕಾರದ ಮೇಲೆ ಗೂಬೆ ಕೂರಿಸುವುದಕ್ಕೆ ಸಿದ್ಧರಾಗಿರುವವರು ಇದ್ದಾರೆಂದು ನಮಗೆಲ್ಲರಿಗೂ ಗೊತ್ತಿದೆ. ಒಂದು ಸಣ್ಣ ಕಡ್ಡಿಯನ್ನೂ ಸಹ ಗುಡ್ಡವನ್ನಾಗಿ ಮಾಡಿ, ಈ ಸರ್ಕಾರಕ್ಕೆ ಕೆಟ್ಟ ಹೆಸರು ತರಬೇಕು, ನಾವು ಅಲ್ಪಸಂಖ್ಯಾತರ ವಿರೋಧಿಗಳು ಎನ್ನುವಂತಹ ಭಾವನೆಯನ್ನು ಸಮಾಜದಲ್ಲಿ ಮೂಡಿಸಬೇಕು ಎಂದು ಕಾಯುತ್ತಿರುತ್ತಾರೆ. ನಾನು ಕಾಂಗ್ರೆಸ್‌ನ ನಮ್ಮ ಎಲ್ಲಾ ಹಿರಿಯ ನಾಯಕರಿಗೆ ಹೇಳುವುದಕ್ಕೆ ಬಯಸುತ್ತೇನೆ, ನಿಮ್ಮ ಈ ಪ್ರಯತ್ನ ನಿಮಗೆ ಯಾವ ಫಲವನ್ನೂ ಕೊಡುವುದಿಲ್ಲ. ಮಾನ್ಯ ವಾಜಪೇಯಿಯವರು ಆರು ತಿಂಗಳುಗಳ ಕಾಲ ಎನ್‌ಡಿಎ ಮಾಡಿದ್ದಾರೆ. ಆರು ತಿಂಗಳು, ಮೂರು ತಿಂಗಳು ಅಲ್ಲ.

ಮಾನ್ಯ ಸದಸ್ಯರು : ಅವರು ನೇರವಾಗಿ ಆರೋಪ ಮಾಡುತ್ತಿದ್ದಾರೆ ಅಧ್ಯಕ್ಷರೇ, ಮಾತನಾಡುವ ಶೈಲಿಯೆ ಇದು? ಕಾಂಗ್ರೆಸ್‌ನವರು ಎಂದು ನೇರವಾಗಿ ಆರೋಪ ಮಾಡುತ್ತಿದ್ದಾರೆ. ಈ ಸರ್ಕಾರ ಅಲ್ಪಸಂಖ್ಯಾತರ ಮೇಲೆ ದೌರ್ಜನ್ಯ ಮಾಡುತ್ತಿದೆ. ಇವರು ನೇರವಾಗಿ ಆರೋಪ ಮಾಡುತ್ತಿದ್ದಾರೆ. ನೀವು ಯಾವ ರೀತಿ ಅವರಿಗೆ ಅವಕಾಶ ಮಾಡಿಕೊಡುತ್ತೀರಿ?

(ಗೊಂದಲ)

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಅನೇಕ ರಾಜ್ಯಗಳಲ್ಲಿ ಇನ್ನೂ ಅಧಿಕಾರ ಮಾಡುತ್ತಿದ್ದೇವೆ, ಗುಜರಾತ್‌ನಲ್ಲಿಯೂ ಅಧಿಕಾರ ಮಾಡುತ್ತಿದ್ದೇವೆ, ರಾಜಸ್ಥಾನದಲ್ಲಿಯೂ ಅಧಿಕಾರ ಮಾಡುತ್ತಿದ್ದೇವೆ. ಅನೇಕ ರಾಜ್ಯಗಳಲ್ಲಿ ಅಧಿಕಾರ ಮಾಡುತ್ತಿದ್ದೇವೆ. ನಿಮ್ಮ ಈ ಪ್ರಯತ್ನ ನಮ್ಮ ಪಕ್ಷದ ಸರ್ಕಾರದ ಮೇಲೆ ಪರಿಣಾಮ ಬೀರುವುದಿಲ್ಲ.

ಉಪಾಧ್ಯಕ್ಷರು : ಹೆಗಡೆಯವರೇ, ಬೇಗ ಮುಗಿಸಿ.

(ಗೊಂದಲ)

ಶ್ರೀ ಮಲ್ಲಿಕಾರ್ಜುನ ಖರ್ಗೆ : ಈ ರೀತಿಯಾಗಿ ಬೇಜವಾಬ್ದಾರಿಯಿಂದ ಮಾತನಾಡಬಾರದು. ಅವರು ಮಾತನಾಡಿದ ಮೇಲೆ ನನಗೂ ಅವಕಾಶ ಮಾಡಿಕೊಡಿ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಮಾನ್ಯ ಉಪಾಧ್ಯಕ್ಷರೆ, ಭಾರತೀಯ ಜನತಾ ಪಾರ್ಟಿ, ನಮ್ಮ ಪಕ್ಷ ಅಥವಾ ನಮ್ಮ ಮಿತ್ರ ಪಕ್ಷಕ್ಕೂ, ನಾನು ತಮ್ಮಲ್ಲಿ ಒಂದೇ ಒಂದು ವಿನಂತಿ ಮಾಡಿಕೊಳ್ಳುವುದು......

ಉಪಾಧ್ಯಕ್ಷರು : ಸ್ವಲ್ಪ ಬೇಗ ಮುಗಿಸಿ ನೀವು. ವಿಷಯ ಡೈವರ್ಟ್ ಮಾಡಬೇಡಿ. ಸುಮ್ಮನೆ ಗಲಾಟೆಗೆ ನೀವು ಅವಕಾಶ ಮಾಡಿಕೊಡಬೇಡಿ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಈ ಸರ್ಕಾರದ ಬಗ್ಗೆ ಯಾರಾದರೂ ಕೆಟ್ಟ ಹೆಸರು ತರಬೇಕೆಂದು ಇದ್ದರೆ........

(ಗೊಂದಲ)

Sri Basavaraj Rayareddy : He is not a signatory.

ಶ್ರೀ ಆರ್.ವಿ. ದೇಶಪಾಂಡೆ : ಶಾಂತಿ ಸಭೆ ಮಾಡುವುದಕ್ಕೆ ಡಿಸಿಯವರು ಎಲ್ಲರಿಗೂ ಕರೆದರು. ನಿಮ್ಮ ಜನ ಶಾಂತಿ ಸಭೆಗೆ ಹೋಗಲಿಲ್ಲ. ಹೋಗಿದ್ದರಾ ಕೇಳಿ ಆಚಾರ್‌ರವರಿಗೆ?

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಮಾನ್ಯ ಅಧ್ಯಕ್ಷರೆ, ಈ ಸಂದರ್ಭದಲ್ಲಿ ನಾನು ಒಂದೇ ಒಂದು ವಿನಂತಿ ಮಾಡಿಕೊಳ್ಳುವುದು......

ಶ್ರೀ ಕೆ.ಆರ್. ರಮೇಶ್ ಕುಮಾರ್ : ಮಾನ್ಯ ಉಪಾಧ್ಯಕ್ಷರೆ, ತಾವು ನನ್ನ ಮಾತುಗಳನ್ನು ಕೇಳಿದ್ದೀರಿ. ಈಶ್ವರಪ್ಪನವರೂ ಕೇಳಿದರು. ನಾನು ಬಹಳ ಸರಳವಾದ ಕನ್ನಡದಲ್ಲಿ ಬಹಳ ಸ್ಪಷ್ಟವಾಗಿ ಅವರಿಗೆ ಹೇಳಿದೆ. ನಾವು ಆಪಾದನೆಗಳನ್ನು ಮಾಡುತ್ತಿಲ್ಲ. ರಾಜಕೀಯವಾಗಿ ನೀವು ನಮ್ಮ ಮೇಲೆ ಈ ತರಹದ ಆರೋಪಗಳನ್ನು ಮಾಡುವುದು, ನಮ್ಮ ಮೇಲೆ ನೀವು ಈ ತರಹದ ಪ್ರತ್ಯಾರೋಪಗಳನ್ನು ಮಾಡುವುದು ಇದೆ. ಅಪರೂಪಕ್ಕೆ ನೀವು ಸರ್ಕಾರದಲ್ಲಿ ಇದ್ದೀರಿ, ಇಂತಹ ದುರ್ಘಟನೆ ಸಂಭವಿಸಿದೆ, ನಿಮಗೆ ಇದೊಂದು ಪರೀಕ್ಷೆ. ಈ ಪರೀಕ್ಷೆಯಲ್ಲಿ ನೀವು ಪಾಸಾಗಬೇಕು. ಹೌದೋ ಅಲ್ಲವೋ ಯಡಿಯೂರಪ್ಪನವರೇ, ನಾನೇನು ನೀವು ಮಾಡಿಬಿಟ್ಟಿರಿ ಎಂದು ಹೇಳಿದೆನೆ? ನೀವು ಏಕೆ ಮೈಮೇಲೆ ಹಾಕಿಕೊಳ್ಳುತ್ತೀರಿ? ಅಲ್ಲಿ ಅವರೆಷ್ಟೋ ಜಾಣತನದಿಂದ ಒಂದು ವೇಳೆ ನಿಮ್ಮವರ್‍ಯಾರಾದರೂ ಇದ್ದರೂ ಕೂಡ ತಪ್ಪಿಸಬೇಕು ಎಂದು ಪ್ರಯತ್ನ ಮಾಡುತ್ತಿದ್ದರೆ ನೀವು ಎಳೆದೆಳೆದು ಮೈಮೇಲೆ ಹಾಕಿಕೊಳ್ಳುತ್ತೀರಿ, ಜಾಣತನ ಇರಬೇಕು.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಮಾನ್ಯ ಅಧ್ಯಕ್ಷರೆ, ನಾನು ಹೆಚ್ಚು ಸಮಯ ತೆಗೆದುಕೊಳ್ಳುವುದಕ್ಕೆ ಬಯಸುವುದಿಲ್ಲ. ಮುಗಿಸುವುದಕ್ಕೆ ಬಯಸುತ್ತಿದ್ದೇನೆ. ಆದರೆ ನಾನು ಮತ್ತೆ ಸ್ಪಷ್ಟವಾಗಿ ಹೇಳುವುದಕ್ಕೆ ಬಯಸುವುದೇನೆಂದರೆ, ನಮಗೆ ಗೊತ್ತಿದೆ ನಮ್ಮ ರಾಜ್ಯ ಹೇಗಾಗಿದೆ ಎಂದು. ಮೊನ್ನೆ ರಮೇಶ್‌ಕುಮಾರ್‌ರವರೆ, ತಾವು ವಿಷಯವನ್ನು ಪ್ರಸ್ತಾಪ ಮಾಡಿದಿರಿ. ನಮ್ಮ ರಾಜ್ಯ ಹೀಗಾಗುವುದಕ್ಕೆ ಕಾರಣವೇನೆಂದು ನಾನು ಹಿಂದೊಮ್ಮೆ ಮಾತನಾಡಿದ್ದೆ. ಅಸ್ನೋಟಿಕರ್‌ರವರು ಕೊಲೆಯಾದಂಥ ಸಂಧರ್ಬದಲ್ಲಿ, ಯಾವ ರಾಜಕೀಯ ಸಂಸ್ಕೃತಿ ಇದಕ್ಕೆಲ್ಲಾ ಕಾರಣವಾಯಿತು, ಏಕೆ ನಾವಿಲ್ಲಿ ಬಂದು ತಲುಪಿದ್ದೇವೆ ಎಂಬುದನ್ನು ಹೇಳಿದ್ದೆ. ನಾನು ಮತ್ತೆ

ಅದನ್ನು ಮಾತನಾಡುವುದಕ್ಕೆ ಬಯಸುವುದಿಲ್ಲ. ಇವೊತ್ತು ಗುಲ್ಬರ್ಗಾದಲ್ಲಿ ಬಂಧಿಸುತ್ತಾರೆ. ಈಗಲೇ ಸಂಜೆ ಪತ್ರಿಕೆ ಬಗ್ಗೆ ಇಲ್ಯಾರೋ ನಮ್ಮ ಸ್ನೇಹಿತರು ಹೇಳಿದರು. ಬಳ್ಳಾರಿಯಲ್ಲಿ ಸಾಕಷ್ಟು ಶಸ್ತ್ರಗಳು, ಮದ್ದುಗುಂಡುಗಳು ಸಿಕ್ಕಿವೆ. ಅಲ್ಲಿ ಅದು ತಯಾರು ಮಾಡುವಂಥದ್ದು ಎಂದು. ಶಿವರಸನ್‌ನಿಂದ ಹಿಡಿದುಕೊಂಡು, ಇಲ್ಲಿ ಐ.ಐ.ಎಸ್.ಸಿ ಯಲ್ಲಿ ಧಾಳಿ ಆದ ಘಟನೆಯಿಂದ ಹಿಡಿದು ಇಡೀ ರಾಜ್ಯದ ಪರಿಸ್ಥಿತಿಯನ್ನು ನೋಡಿದರೆ ನಮ್ಮ ಮೂಲಭೂತವಾದಂಥ ಜವಾಬ್ದಾರಿ ಜನರ ಜೀವನವನ್ನು ರಕ್ಷಿಸುವುದು, ಆಸ್ತಿಪಾಸ್ತಿಗಳನ್ನು ರಕ್ಷಿಸುವುದು, ಅದಕ್ಕೆ ಹೆಚ್ಚಿನ ಮಹತ್ವವನ್ನು ಗಂಭೀರವಾಗಿ ಇಡೀ ಸದನದ ಮೂಲಕ ನಾವೆಲ್ಲರೂ ಒಂದು ರೀತಿಯ ವಿಶ್ವಾಸವನ್ನು ಜನತೆಗೆ ಕೊಡಬೇಕಾದಂಥ ಅಗತ್ಯ ಇದ್ದೇ ಇದೆ. ಇದಕ್ಕೆ ನಾನು ಮತ್ತೆ ಯಾವ ಯಾವ ಸರ್ಕಾರ, ಈಗ ಬಂದಿರುವ ಎರಡು ತಿಂಗಳ ಒಂದೂವರೆ ತಿಂಗಳ ಈ ಸರ್ಕಾರ, ಹಿಂದಿನ ಸರ್ಕಾರಗಳು ಎಂದು ಹೇಳುವುದಕ್ಕೆ ಹೋಗುವುದಿಲ್ಲ. ಆದರೆ ಪರಿಸ್ಥಿತಿ ಇವೊತ್ತು ಅತ್ಯಂತ ಸೂಕ್ಷ್ಮವಾಗುತ್ತಿದೆ. ಇಷ್ಟು ಶಾಂತಪ್ರಿಯ ರಾಜ್ಯದಲ್ಲಿಯೇ ಹೀಗೆ ಆಗುತ್ತಿದೆ. ಇನ್ನು ಬೇರೆ ಬೇರೆ ರಾಜ್ಯಗಳಲ್ಲಿ ಹೇಗೆ ಆಗುತ್ತಿರಬಹುದು ಎಂದು ಊಹಿಸಿಕೊಂಡರೆ ಮುಂದಿನ ದಿನಗಳಲ್ಲಿ ನಾಗರೀಕ ಜೀವನವನ್ನೇ ಹೇಗೆ ಅಪಹರಿಸುವಂಥ ಒಂದು ಪ್ರಯತ್ನಗಳು ಒಂದು ಅಂತರ್‌ರಾಷ್ಟ್ರೀಯ ಮಟ್ಟದ ಷಡ್ಯಂತ್ರದ ಕಾರಣದಿಂದ ನಡೆಯುತ್ತಿದೆ ಎನ್ನುವಂಥ ಗಂಭೀರವಾದಂಥ ಸವಾಲು ನಮ್ಮ ಮುಂದೆ ಇದೆ. ಹೀಗಾಗಿ ನಾನು ಆ ವಿಷಯಗಳ ಬಗ್ಗೆ ಹೇಳುವುದಕ್ಕೆ ಹೋಗುವುದನ್ನು ಬಯಸದೆ ಇಂಥ ಸಂಧರ್ಬದಲ್ಲಿ ನಾವು ಶಾಂತಿಯನ್ನು ಕಾಪಾಡಿಕೊಳ್ಳುವುದಕ್ಕೆ ವಿನಂತಿಯನ್ನು ಮಾಡುವುದರ ಜೊತೆಯಲ್ಲಿ, ಅಲ್ಲಿ ಭಟ್ಕಳ ಜನತೆಗೆ, ನಮ್ಮ ಜಿಲ್ಲೆಯ ಜನತೆಗೆ ಇನ್ನಷ್ಟು ಹೆಚ್ಚು ವಿಶ್ವಾಸವನ್ನು ತುಂಬತಕ್ಕಂಥ ಅಗತ್ಯತೆ ಇದೆ. ನಾನು ಆಗಲೇ ಹೇಳಿದೆ. ನಾವು ಜಗನ್ನಾಥ್‌ಶೆಟ್ಟಿ ಆಯೋಗದ್ದು ಇರಬಹುದು, ರಾಮಚಂದ್ರಯ್ಯ ಆಯೋಗದ್ದು ಇರಬಹುದು, ತಿಮ್ಮಪ್ಪ ನಾಯಕರ ಕೊಲೆ ವಿಷಯದಲ್ಲಿ ಇರಬಹುದು, ಅಲ್ಲಿ ನಡೆದಂಥ ಬೇರೆ ಬೇರೆ ಅನೇಕ ಸರಣಿ ಘಟನೆಗಳಿರಬಹುದು, ಇತ್ಯಾದಿಗಳ ಕಾರಣದಿಂದ ಅಲ್ಲಿ ಜನರು ಸಾರ್ವಜನಿಕರು ಪಕ್ಷಾತೀತವಾಗಿ ಭಯಗೊಂಡಿದ್ದಾರೆ. ಭಟ್ಕಳ ಹೀಗಾಗುತ್ತಿದೆ, ನಮ್ಮ ಜಿಲ್ಲೆ ಹೀಗಾಗುತ್ತಿದೆ, ಎಂದು ಜನ ಬಯಗೊಂಡಿದ್ದಾರೆ. ಹೀಗಾಗಿ ಆ ಜನರಿಗೆ ವಿಶ್ವಾಸವನ್ನು ತುಂಬಿಸುವಂಥ ಕೆಲಸ ಕೂಡ ಈ ಸದನದಿಂದ ಆಗಬೇಕಾಗಿದೆ. ಅದಕ್ಕೆ ಪೂರಕವಾದಂಥ ಚಟುವಟಿಕೆಗಳು ಅಲ್ಲಿ ಆಗಬೇಕಾದಂಥದ್ದು ಅಗತ್ಯತೆ ಇದೆ. ಇದು ಸರ್ಕಾರದಿಂದ ನಡೆಯಬೇಕಾಗಿದೆ. ಅಲ್ಲಿ ಇಂಥ ಪರಿಸ್ಥಿತಿಯ ದುರ್ಲಾಭವನ್ನು ಪಡೆಯುವುದಕ್ಕೆ ಯಾರಾದರೂ ಪ್ರಯತ್ನ ಮಾಡಿದರೆ ಅವರಿಗೆ ನಾವ್ಯಾರೂ ಅವಕಾಶಗಳನ್ನು ಕೊಡದೇ ಇಂಥ ಪರಿಸ್ಥಿತಿಯನ್ನು ಶಾಂತಮಯವಾಗಿ

ಅದನ್ನು ನಿರ್ವಹಿಸುವುದಕ್ಕೆ ಬೇಕಾಗಿರುವಂಥ ಪ್ರಯತ್ನವನ್ನು ಮಾಡಬೇಕಾಗಿದೆ. ಮಾನ್ಯ ಉಪಾಧ್ಯಕ್ಷರೆ, ನಾನು ಮತ್ತೊಮ್ಮೆ ಶ್ರೀಧರ್‌ನಾಯಕ್ ಕುಟುಂಬಕ್ಕೆ 5 ಲಕ್ಷ ರೂ.ಗಳ ಪರಿಹಾರ ಕೊಡಬೇಕು ಎನ್ನುವುದರ ಜೊತೆಯಲ್ಲಿ ಜಟಕಾಮಾಸ್ತಿಯಲ್ಲಿ ಕಟ್ಟೆಯನ್ನು ಕಟ್ಟಿ ಸರ್ಕಾರ ಆ ಜಾಗವನ್ನು ಅವರಿಗೆ ಕೊಟ್ಟು ಅಲ್ಲಿ ಪೂಜೆಯನ್ನು ಮಾಡುವುದಕ್ಕೆ ಅವಕಾಶವನ್ನು ಕೊಡಬೇಕು. ಶ್ರೀಧರ್‌ನಾಯಕ್‌ರವರ ಕೊಲೆ ಆರೋಪಿಗಳನ್ನು ಹಿಡಿಸುವುದಕ್ಕೆ ತಕ್ಷಣದ ಪ್ರಯತ್ನ ಸರ್ಕಾರದ ಕಡೆಯಿಂದ ಆಗಬೇಕು. ಮತ್ತೆ ಅಲ್ಲಿ ಶಾಂತಿಯನ್ನು ಕಾಪಾಡಿಕೊಂಡು ಹೋಗಬೇಕು ಎಂದು ಹೇಳುವುದರ ಜೊತೆಯಲ್ಲಿ ಪುರಸಭೆ ಬಗ್ಗೆ ಸರ್ಕಾರ ಬಹಳ ಕಟ್ಟೆಚ್ಚರದಿಂದ ಇದ್ದು ಬಿಗುವಾದಂಥ ಕ್ರಮವನ್ನು ಪುರಸಬೆ ಬಗ್ಗೆ ತೆಗೆದುಕೊಳ್ಳಬೇಕು. ಪುರಸಭೆಯು ಇಲ್ಲದ ಒಂದು ವಿಷಯವನ್ನು ದೊಡ್ಡದು ಮಾಡಿ ಸಮಾಜದಲ್ಲಿ ಈ ರೀತಿಯಲ್ಲಿ ಶಾಂತಿಯನ್ನು ಕದಡುತ್ತಿದೆ. ಹೀಗಾಗಿ ಪುರಸಭೆಯ ಬಗ್ಗೆ ವಿಶೇಷವಾದಂಥ ಗಮನವನ್ನು ನಮ್ಮ ಸರ್ಕಾರ ಇಡಬೇಕು ಎನ್ನುವಂಥ ಮಾತನ್ನು ಹೇಳುತ್ತಾ ಈ ಪರಿಸ್ಥಿತಿಯ ದುರ್ಲಾಭವನ್ನು ತೆಗೆದುಕೊಳ್ಳುವುದಕ್ಕೆ ಯಾರಿಗೂ ಅವಕಾಶವನ್ನು ಕೊಡಬಾರದು ಎನ್ನುವಂಥ ಮಾತನ್ನು ಈ ಸಂದರ್ಭದಲ್ಲಿ ಹೇಳಿ ನನಗೆ ಮಾತನಾಡಲು ಅವಕಾಶ ಕೊಟ್ಟ ಮಾನ್ಯ ಉಪಾಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಉಪಾಧ್ಯಕ್ಷರು : ಮಲ್ಲಿಕಾರ್ಜುನ ಖರ್ಗೆಯವರೆ, ತಾವು ಮಾತನಾಡಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಗುರುಮಿಠ್‌ಕಲ್) : ಮಾನ್ಯ ಉಪಾಧ್ಯಕ್ಷರೆ, ಇದಕ್ಕೆ ನಾನೂ ಕೂಡ ಒಬ್ಬ ಸಿಗ್ನೇಟರಿ. ಅದಕ್ಕಾಗಿ ಒಂದೆರಡು ಮಾತುಗಳನ್ನು ಈ ಭಟ್ಕಳದ ಪ್ರಕರಣದ ಬಗ್ಗೆ ಹೇಳಬೇಕೆಂದು ನಿಂತಿದ್ದೇನೆ. ದಿನಾಂಕ 29–3–2006 ರಂದು ನಡೆದಂಥ ಈ ಒಂದು ಘಟನೆ ನಿಜವಾಗಿಯೂ ದುರ್ದೈವ. ಆದರೆ ಅನೇಕ ಸಾರಿ ನಾವು ಭಾವನಾತ್ಮಕವಾಗಿ ಅದರ ಮೂಲ ವಿಷಯವನ್ನು ತಿಳಿದುಕೊಳ್ಳದೇ ಅದಕ್ಕೆ ಯಾವುದೋ ಒಂದು ಬಣ್ಣವನ್ನು ಕೊಡತಕ್ಕಂಥ ಪ್ರಯತ್ನವನ್ನು ಮಾಡುತ್ತೇವೆ. ಅಲ್ಲಿ ನಾಗಜಟಕಾ ಆ ಒಂದು ವಿಗ್ರಹ ಏನಿತ್ತು ಅದು ಕಳ್ಳತನ ಆಗಿದೆ ಅನ್ನತಕ್ಕಂಥ ಪೊಲೀಸ್ ರಿಪೋರ್ಟ್ ಪ್ರಕಾರ ಅದು ಬಂದು 27ನೇ ತಾರೀಖು ಆಗಿದೆ ಎನ್ನತಕ್ಕಂಥದ್ದು, ಅದು ಎಲ್ಲರಿಗೂ ಕೂಡ ಗೊತ್ತಿದೆ. ಸರ್ಕಾರಕ್ಕೂ ಕೂಡ ಗೊತ್ತಿದೆ. ಆದರೆ ಈ ಸದನದಲ್ಲಿಯೇ ನಾವು ತಪ್ಪು ದಾರಿಗೆ ಎಳೆಯತಕ್ಕಂಥ ಪ್ರಯತ್ನವನ್ನು ನಾವೇ ಮಾಡುತ್ತಿದ್ದೇವೆ. ಏನು? ಅಲ್ಲಿ ಪೊಲೀಸ್ ರಿಪೋರ್ಟ್ ಇದ್ದರೂ ಕೂಡ, ಅದನ್ನು ಅಲ್ಲಿ ಯಾರೋ ಒಬ್ಬರು ಕಳ್ಳತನ ಮಾಡಿಕೊಂಡು ಒಯ್ದಿದ್ದಾರೆ ಎನ್ನತಕ್ಕಂಥದ್ದು ಗೊತ್ತಿದ್ದರೂ ಕೂಡ ಆ ವಿಗ್ರಹಗಳನ್ನು ಅಲ್ಲಿ ನೆಲಸಮ ಮಾಡಿಬಿಟ್ಟರು ಎಂದು ಹೇಳಿ.

ಶ್ರೀ ಜಗದೀಶ್ ಶೆಟ್ಟರ್ : ಕಳ್ಳತನ ಮಾಡಿಕೊಂಡು ಹೋಗಿಲ್ಲ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಹಾಗಾದರೆ ಅದನ್ನು ನೆಲಸಮ ಮಾಡಿದರೆ?

ಶ್ರೀ ಜಗದೀಶ್ ಶೆಟ್ಟರ್ : ಭಗ್ನ ಆಗುವ ಹಾಗೆ ಮಾಡಿದರು.

ಶ್ರೀ ಆರ್.ವಿ. ದೇಶಪಾಂಡೆ : ಮಾನ್ಯ ಶೆಟ್ಟರ್‌ರವರೆ, ಈಗ ಮಾನ್ಯ ಖರ್ಗೆಯವರು ಏನೋ ಹೇಳುತ್ತಿದ್ದಾರೆ. ಅವರು ಹೇಳುವುದಕ್ಕೆ ಬಿಡಿ. ಮಧ್ಯೆ ಏಕೆ ಅವರಿಗೆ ಡಿಸ್ಟ್‌ರ್ಬ್ ಮಾಡುವುದು. ಅವರು ಮಾತನಾಡಲಿ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಅಂದರೆ ಯಾವ ರೀತಿಯಾಗಿ ಪ್ರಕರಣಗಳಿಗೆ ಪ್ರಚೋದನೆ ಮಾಡುತ್ತಾರೆ ಜನ ಎನ್ನುವುದಕ್ಕೆ ಇದೊಂದೇ ಉದಾಹರಣೆ. ಇವೊತ್ತಿನ ದಿನ...........

ಡಾ: ವಿ.ಎಸ್. ಆಚಾರ್ಯ : ಖರ್ಗೆಯವರೆ, ಒಂದ್ನಿಮಿಷ ....

ಶ್ರೀ ಮಲ್ಲಿಕಾರ್ಜುನ ಖರ್ಗೆ : ಸಾರಿ. ನೀವು ಹೇಳುವಾಗ ಹೇಳಿ. ಅಲ್ಲಿ ಉಸ್ತುವಾರಿ ಸಚಿವರು ಹೋಗಿದ್ದಾರೆ. ಪಕ್ಕದ ಕ್ಷೇತ್ರದ ಶಾಸಕರಾದ ಮಾನ್ಯ ದೇಶಪಾಂಡೆಯವರು ಹೋಗಿದ್ದಾರೆ. ಕಣ್ಣಾರೆ ಅವರು ನೋಡಿದ್ದಾರೆ. ಇಷ್ಟು ನೋಡಿ ಅವರು ವಿವರಗಳನ್ನು ಕೊಟ್ಟರೂ ಕೂಡ ನಿಮ್ಮ ಕಾಂಗ್ರೆಸ್‌ನ ಕೆಲವು ಮುಖಂಡರಿಗೆ ನಾನು ಹೇಳಬಯಸುತ್ತಿದ್ದೇನೆ ಎಂದು ಹೇಳಿ ಈ ಮನೆಯ ಸದಸ್ಯರು ನೇರವಾಗಿ ಈ ರೀತಿಯಾಗಿ ಹೇಳಿದರೆ ಅದು ಏನನ್ನು ತೋರಿಸುತ್ತಿದೆ ಎಂದರೆ ಅವರ ಪ್ರಿಜ್ಯುಡಿಸಸ್, ಆಗಿ ಕಾಂಗ್ರೆಸ್ ಬಗ್ಗೆ ಇರತಕ್ಕಂಥ ಪ್ರಜ್ಯುಡಿಸಸ್, ಮೈನಾರಿಟೀಸ್ ಬಗ್ಗೆ ಇರತಕ್ಕಂಥ ಪ್ರಿಜ್ಯುಡಿಸಸ್, ಮೈನಾರಿಟೀಸ್ ಬಗ್ಗೆ ಇರತಕ್ಕಂಥ ಪ್ರಿಜ್ಯುಡಿಸಸ್ ಮತ್ತು ಯಾವುದೇ ರೀತಿಯಿಂದ ಕಾಲು ಕೆರೆದುಕೊಂಡು ಜಗಳ ತೆಗೆಯಬೇಕು ಎನ್ನತಕ್ಕಂಥ ಅವರೊಳಗೆ ಏನು ಈ ರೀತಿಯ ನಂಬಿಕೆ ಇದೆ, ಯಾವ ತತ್ವದ ಮೇಲೆ ಅವರಿಗೆ ನಂಬಿಕೆ ಇದೆ, ಡಿವೈಡ್ ಅಂಡ್ ರೂಲ್ ಮಾಡತಕ್ಕಂಥದ್ದು. ಆ ಬುದ್ಧಿ ಇನ್ನೂ ಅವರಿಗೆ ಹೋಗಿಲ್ಲ ಎನ್ನತಕ್ಕಂಥದ್ದು ಇವರು ಮಾತನಾಡಿದ್ದೇ ಸಾಕ್ಷಿ. ಇವೊತ್ತು ಯಾರೂ ನಿಮ್ಮ ಮೇಲೆ ನೇರವಾಗಿ ಆಪಾದನೆ ಮಾಡಿರಲಿಲ್ಲ. ನಿಮ್ಮ ಪಕ್ಷದ ಹೆಸರನ್ನು ತೆಗೆದುಕೊಂಡು ಹೇಳಲಿಲ್ಲ. ಇಲ್ಲಿ ವಿರೋಧ ಪಕ್ಷದ ನಾಯಕರಾಗಲಿ, ಶ್ರೀಮಾನ್ ದೇಶಪಾಂಡೆಯವರಾಗಲಿ, ಅಥವಾ ನಮ್ಮ ವಾಟಾಳ್‌ನಾಗರಾಜ್‌ರವರಾಗಲಿ, ಜಯಪ್ರಕಾಶ್ ಹೆಗಡೆಯವರಾಗಲಿ ಯಾರೂ ಇವತ್ತಿನ ದಿವಸ ನೇರವಾಗಿ ಇಂಥ ಪಕ್ಷದವರೇ ಮಾಡಿದ್ದಾರೆ, ಇದರಲ್ಲಿ ಇನ್ವಾಲ್ವ್ ಆಗಿದ್ದಾರೆ ಅಥವಾ ಪ್ರಚೋದನೆ ಮಾಡಿದ್ದಾರೆ ಎನ್ನತಕ್ಕಂಥ ಮಾತನ್ನು ಹೇಳಲಿಲ್ಲ. ಈ ಕಡೆಯಿಂದ ಆ ಮಾತು ಬಂದಿಲ್ಲ. ಆದರೂ ರಾಜಕೀಯ ದುರುದ್ದೇಶದಿಂದ ನಿಮ್ಮ ಬಾಯಿಂದ ಇಂಥ ಮಾತುಗಳನ್ನು ಆಡಿ ಸಮಾಜವನ್ನು ಒಡೆದ ಹಾಗೆ ಇಡಬೇಕು ಎಂಬುದು ನಿಮ್ಮ ಉದ್ದೇಶವಾ? ಆ ಭಾಗದಲ್ಲಿ ನೀವು ನೋಡ್ರಿ

ಎಲ್ಲೆಲ್ಲಿ ಗಲಾಟೆ ಆಗುತ್ತಿದೆ, ಬಂದ್ ಎಲ್ಲಿ ಆಗುತ್ತದೆ, ಉಡುಪಿಯಲ್ಲಿ ಬಂದ್ ಆಗುತ್ತಿದೆ. ಗಲಾಟೆ ಭಟ್ಕಳದಲ್ಲಿ ಆಗುತ್ತದೆ, ಮತ್ತೆ ಇಂಥ ಕೋಮುವಾದಿ ಗಲಾಟೆಗಳು ನಡೆಯತಕ್ಕಂಥದ್ದು ಯಾವ ಭಾಗದಲ್ಲಿದೆ ಇಲ್ಲಾ ಬೆಳಗಾಂನಲ್ಲಿ, ಇಲ್ಲಾ ನಾರ್ತ್ ಕೆನರಾದಲ್ಲಿ, ಇಲ್ಲಾ ಸೌತ್ ಕೆನರಾದಲ್ಲಿ, ಇಲ್ಲಾ ಹುಬ್ಬಳ್ಳಿ-ಧಾರವಾಡದಲ್ಲಿ. ಮತ್ತೆ ಬೇರೆ ಕಡೆ ಏಕಿಲ್ಲಾ ಸ್ವಾಮಿ? ಅಂದರೆ ಅದಕ್ಕೆ ಪ್ರಚೋದನೆ ಮಾಡತಕ್ಕಂಥ ಜನ ಇದ್ದಾರೆ ಎನ್ನತಕ್ಕಂಥದ್ದು ಸ್ಪಷ್ಟವಾಗಿ ಆ ಮಾತಿನಿಂದಲೇ ಗೊತ್ತಾಗುತ್ತದೆ. ಅಂದರೆ ಇವರು ಎಲ್ಲಿದ್ದಾರೋ ಅಲ್ಲಿ ಬೆಂಕಿ ಹಚ್ಚುವ ಕೆಲಸ ಒಂದೇ ಮಾಡುವುದು. ಇಲ್ಲದಿದ್ದರೆ ಈ ರೀತಿಯಾಗಿ ನೀವು ಇದೇ ಮಾತನ್ನು ಅಲ್ಲಿ ಹೋಗಿ ಅವರು ಮಾತನಾಡಿದರೆ ಖಂಡಿತವಾಗಿ ಇನ್ನೂ ಕೋಮುಗಲಭೆಗಳು ಆಗುತ್ತವೆ. ಅಥವಾ ಈ ಸದನದ ಮುಖಾಂತರ ಈ ಸಂದೇಶ ಹೋದರೆ ಪುನಃ ಅಲ್ಲಿ ಜಗಳಗಳು ಆಗಿಯೇ ಆಗುತ್ತವೆ. ಅದಕ್ಕಾಗಿ ದಯವಿಟ್ಟು ತಮ್ಮ ಮುಖಾಂತರ ನಾನು ಅವರಲ್ಲಿ ಕೇಳಿಕೊಳ್ಳುತ್ತೇನೆ, ತಾವೆಂದೂ ಕೂಡ ಇಂಥ ಪ್ರಚೋದನೆಯ ಮಾತುಗಳನ್ನು ಆಡಬಾರದು ಮತ್ತು ಶಾಂತಿಯನ್ನು ಕದಡತಕ್ಕಂಥ ವಾತಾವರಣವನ್ನು ಸೃಷ್ಟಿ ಮಾಡಬಾರದು. ಅದರಿಂದಲೇ ಇವೊತ್ತು ಈ ರೀತಿಯಾಯಿತು. ಇದು ಒಂದು ಕಡೆ ಇರಲಿ. ಅವರು ಆ ರೀತಿಯಾಗಿ ಹೇಳಿದರು. ಎಲ್ಲಿಯವರೆಗೂ ಹೇಳಿದರೆಂದರೆ ಮುನಿಸಿಪಾಲಿಟಿಯ ಒಬ್ಬರು ಉಪಾಧ್ಯಕ್ಷರು ಇದಕ್ಕೆ ಕಾರಣಕರ್ತರು ಎಂದರು. ಯಾವ ಪಕ್ಷದವರು ಸ್ವಾಮಿ ಅವರು? ಹೇಳಿ. ಇದು ಒಂದು. ಎರಡನೆಯದು ತಾವೆಲ್ಲಾ ಅಡ್ಡಾಡಿ ಮಾಹಿತಿ ತಂದಿರಲ್ಲಾ, ಅವರು ಉಪಾಧ್ಯಕ್ಷರು ಎಂದು ಹೇಳಿ. ಡೆಪ್ಯುಟಿ ಸಿ.ಎಂ. ರವರು ಹೇಳಿದರು, ಐ.ಎಸ್.ಐ. ಏಜೆಂಟ್ ಇದರಲ್ಲಿದ್ದಾರೆಂದು. ಅದಕ್ಕೆ ನಮ್ಮ ರೋಶನ್‌ಬೇಗ್‌ರವರು, ನಮ್ಮ ರಮೇಶ್‌ಕುಮಾರ್‌ಜಿಯವರು ಡಿಮ್ಯಾಂಡ್ ಮಾಡಿದ್ದಾರೆ, ವೈಟ್ ಪೇಪರ್‌ನ್ನು ಈ ಸದನದಲ್ಲಿಡಬೇಕು, ಯಾರು ಇದರಲ್ಲಿ ಇದ್ದಾರೆ, ಯಾರು ಇಲ್ಲ ಎನ್ನತಕ್ಕಂಥದ್ದರ ಬಗ್ಗೆ ಕೇಳಿದ್ದಾರೆ. ಅವರು ಕೊಡಲಿ. ಡೆಪ್ಯುಟಿ ಸಿ.ಎಂ. ರವರು ಇಂಟರ್‌ನ್ಯಾಶನಲ್ ಏಜೆನ್ಸಿ ಬಗ್ಗೆ ಹೇಳಿದರು. ಆದರೆ ಇವರು ಮುನಿಸಿಪಾಲಿಟಿಗೆ ಬಂದರು. ಇದನ್ನು ಮುನಿಸಿಪಾಲಿಟಿಯವರು ಮಾಡಿದ್ದಾರೆ, ಮೊದಲು ಅದನ್ನು ಸೂಪರ್‌ಸೀಡ್ ಅಂತ ಹೇಳಿದರು. ಸೂಪರ್‌ಸೀಡ್ ಮಾಡಿ ಅಂದರೆ ಅಧಿಕಾರವನ್ನು ಕಿತ್ತುಕೊಳ್ಳುವುದಕ್ಕೆ ನೋಡುತ್ತಿದ್ದಾರೆಯೇ ಹೊರತಾಗಿ ಅದಕ್ಕೆ ಮೂಲ ಕಾರಣವೇನು ಎನ್ನತಕ್ಕಂಥದ್ದನ್ನು ಹುಡುಕುವುದಕ್ಕೆ ಇವರು ತಯಾರಿಲ್ಲ. ಮುನಿಸಿಪಾಲಿಟಿ ಟು ಇಂಟರ್‌ನ್ಯಾಶನಲ್. ಮಾತನಾಡಬೇಕಾದರೆ ಜವಾಬ್ದಾರಿ ಇರಬೇಕು. ಆಮೇಲೆ ಐ.ಎಸ್.ಐ. ಏಜೆಂಟರು ಅಂಥವರು ಎಲ್ಲೆಲ್ಲಿದ್ದಾರೆ ಅವರನ್ನು ಪತ್ತೆ ಹಚ್ಚುವುದಕ್ಕೆ ನೀವೇನೂ ಇವೊತ್ತು ವಿರೋಧ ಪಕ್ಷದಲ್ಲಿ ಇಲ್ಲ. ಸರ್ಕಾರ ನಿಮ್ಮ ಕೈಯಲ್ಲಿದೆ. ಪತ್ತೆ ಹಚ್ಚಿ, ಲಿಸ್ಟ್ ಪಬ್ಲಿಷ್ ಮಾಡಿ ಅವರನ್ನು ಒಳಗೆ ಹಾಕಿ.

ಬೇಡವೆಂದು ಯಾರು ಹೇಳುತ್ತಾರೆ? ಯಾರಾದರೂ ನಿಮ್ಮ ಕೈಯನ್ನು ಹಿಡಿದುಕೊಂಡಿದ್ದಾರಾ? ನಮಗೇನೋ ತೊಂದರೆ ಇತ್ತೆಂದು ಇವತ್ತು ಹಿಂದಿನ ಮಾನ್ಯ ಮುಖ್ಯಮಂತ್ರಿಗಳು ಈಗಿನ ಮಾನ್ಯ ವಿರೋಧ ಪಕ್ಷದ ನಾಯಕರು ಹೇಗೆ ಪ್ರತಿಯೊಂದು ಡೆವಲಪ್‌ಮೆಂಟ್ ಕೆಲಸಕ್ಕೆ ನೀವು ಅಡ್ಡಿ ಬರುತ್ತಿದ್ದೀರಿ ಎಂಬುದನ್ನು ಹೇಳಿದರು. ನಿಮಗೆ ಏನೂ ಈಗ ಅಡ್ಡಿ ಇಲ್ಲವಲ್ಲಾ. ಇವತ್ತು ನಿಮಗೆ ಸಂಪೂರ್ಣವಾದಂತಹ ಸ್ವಾತಂತ್ರ್ಯ ಇದೆ. ಯಾರ್‍ಯಾರು ತಪ್ಪು ಮಾಡಿದ್ದಾರೆ ಅವರನ್ನು ಹಾಕಿಬಿಡಿ. ಆದರೆ ಸ್ಟೇಟ್‌ಮೆಂಟ್ ಕೊಡುವುದು, ಹಿಟ್ ಅಂಡ್ ರನ್ ರೀತಿಯಲ್ಲಿ ಏನಾದರೂ ಒಂದು ಹೇಳಿ ಮುಂದಕ್ಕೆ ಹೋಗುವುದು. ಅದು ಮಾಡುವಂತಹ ಬ್ಲೇಮ್ ಅಪೋಜೆಷನ್ ಮೇಲೆಯಾದರೂ ಹೋಗಲಿ ಅಥವಾ ಕಾಂಗ್ರೆಸ್‌ನವರ ಮೇಲೆ ಹೋಗಲಿ, ಬೇರೆಯವರ ಮೇಲೆ ಆದರೂ ಹೋಗಲಿ ಎಂದು ತಾವು ಏನಾದರೂ ಒಂದು ಹೇಳಿಕೊಂಡು ಸುಮ್ಮನೆ ಇರುವುದು. ಆದರೆ ಬೇರೆ ಜನರು ಏನಪ್ಪ ಇವರು ದೇಶಭಕ್ತರು, ದೇಶಕ್ಕಾಗಿ, ಜನರಿಗಾಗಿ, ಸಮಾಜಕ್ಕಾಗಿ ಒಳ್ಳೆಯ ಮಾತನ್ನು ಹೇಳುತ್ತಾರೆ ಇವರು ದೇಶಪ್ರೇಮಿಗಳು ಎಂದು ತಿಳಿದುಕೊಳ್ಳುವ ಹಾಗೆ ಮಾಡುವುದು. ಉಳಿದವರು ಎಲ್ಲಾ ದೇಶದ್ರೋಹಿಗಳು ನಾವು ಶಾಂತಿ ಕಾಪಾಡಿ ಎಂದು ಹೇಳುವವರು ದೇಶದ್ರೋಹಿಗಳು. ಗಲಭೆ ಆಗಬಾರದು ಎಂದು ಹೇಳುವವರು ದೇಶದ್ರೋಹಿಗಳು ಹಾಗೂ ಸಮಾಜ ದ್ರೋಹಿಗಳು. ಇವರು ಪ್ರಚೋದನೆ ಮಡುವವರು ದೇಶಭಕ್ತರಾ? ಅದಕ್ಕೆ ಈ ಮಾತು ಮಾನ್ಯ ಉಪ ಮುಖ್ಯಮಂತ್ರಿಗಳಿಂದ ಬಂದಿದೆ, ಐಎಸ್‌ಐ ಏಜೆಂಟ್ ಯಾರ್‍ಯಾರು? ಎಲ್ಲೆಲ್ಲಿ ಇದ್ದಾರೆ? ಅದರ ಲಿಸ್ಟ್ ತಾವು ಪಬ್ಲಿಷ್ ಮಾಡಿ. ಅದನ್ನು ಈ ಸದನದ ಮುಂದೆ ಕೊಡಿ. ಅವರು ಮುನಿಸಿಪಾಲಿಟಿಗೆ ಬಂದಿದ್ದಾರೆ, ಆ ಮುನ್ಸಿಪಾಲಿಟಿಯಲ್ಲಿ ಇರುವವರು ಯಾರು? ಅವರು ಯಾವ ಪಕ್ಷದವರು? ಯಾವ ಕಾರಣಕ್ಕಾಗಿ ಅವರ ಹೆಸರು ಬಂತು? ಮತ್ತೆ ಏಕೆ ಬಿಡುಗಡೆಯಾಯಿತು? ಯಾರಿಂದ ಬಿಡುಗಡೆಯಾಯಿತು? ಅವರನ್ನು ಬಿಡಿಸಿದವರು ಯಾರು? ಅದನ್ನೂ ಹೇಳಿ. ಇನ್ನು ಮೂರನೆಯದಾಗಿ, ಮಾನ್ಯ ಮುಖ್ಯಮಂತ್ರಿಗಳು ಕೂಡ ಅದೇ ರೀತಿಯಾಗಿ ಹೇಳಿಕೆಯನ್ನು ಕೊಟ್ಟರು. ಮಾನ್ಯ ಉಪ ಮುಖ್ಯಮಂತ್ರಿಯವರು ಐಎಸ್‌ಐ ಏಜೆಂಟ್ ಏನು ಕೆಲವರು ಪ್ರಚೋದನೆ ಮಾಡುತ್ತಿದ್ದಾರೆ, ಅವರು ನಮ್ಮ ಸರ್ಕಾರ ಬಂದಿರುವುದನ್ನು ಸಹಿಸುತ್ತಿಲ್ಲವೆಂದು ಹೇಳಿಕೊಂಡು ಕಾಲ ಕಳೆದುಕೊಂಡು ಹೋಗಬೇಕೆಂದು ಮಾಡಿರಬೇಕು. ಇವರು ಒಂದು ಕಡೆಯಾದರೆ, ಇನ್ನೊಂದು ಕಡೆ ಕೆಲವು ಕುತಂತ್ರ ಶಕ್ತಿಗಳು ನಾವು ಅಧಿಕಾರಕ್ಕೆ ಬಂದಿರುವುದನ್ನು ಸಹಿಸುತ್ತಿಲ್ಲ ಎನ್ನುವಂತಹ ಮಾತುಗಳನ್ನು ಕೆಲವು ರಾಜಕಾರಣಿಗಳ ಬಗ್ಗೆ ಮಾನ್ಯ ಮುಖ್ಯಮಂತ್ರಿಯವರು ಹೇಳುತ್ತಿದ್ದಾರೆ. ಆಡಳಿತ ನಡೆಸತಕ್ಕಂಥವರು ನೀವು. ಮತ್ತು ಶಾಂತಿ ಕಾಪಾಡುವುದು ನಿಮ್ಮ ಜವಾಬ್ದಾರಿ.

ಈ ರಾಜ್ಯದಲ್ಲಿ ಶಾಂತಿಯನ್ನು ಕಾಪಾಡಿ, ಸುವ್ಯವಸ್ಥೆಯನು, ಕಾನೂನು ವ್ಯವಸ್ಥೆಯನ್ನು ಕಾಪಾಡುವುದು ನಿಮ್ಮ ಜವಾಬ್ದಾರಿ. ನೀವು ನಿಮ್ಮ ಜವಾಬ್ದಾರಿಯನ್ನು ಮರೆತು ಅದನ್ನು ರಾಜಕೀಯ ಪಕ್ಷಗಳ ಮೇಲೆ ಹಾಕುವುದು. ರಾಜಕಾರಣಿಗಳ ಹೆಸರು ಹೇಳಿಕೊಂಡು ತಮ್ಮ ಜವಾಬ್ದಾರಿಯನ್ನು ತಪ್ಪಿಸಿಕೊಳ್ಳತಕ್ಕಂಥಾದ್ದು. ಮತ್ತು ಯಾವುದೇ ಒಂದು ಗಲಭೆ ತಡೆಯುವುದಕ್ಕೆ ಶಕ್ತಿ ಇಲ್ಲದೇ ಇರುವವರು ಬೇರೆಯವರ ಮೇಲೆ ಹೇಳುತ್ತೀರಿ. ಬೇರೆಯವರು ಇವತ್ತು ಆ ಕೆಲಸ ಮಾಡಿದ್ದಕ್ಕಾಗಿ ಈ ರೀತಿಯಾಗಿದೆ. ಅಥವಾ ಅವರು ಪ್ರಚೋದನೆ ಮಾಡುತ್ತಿದ್ದಾರೆ ಎನ್ನುವಂತಹ ಮಾತನ್ನು ಯಾರಿಗೆ ಹೇಳಿದಿರಿ? ತಾವು ವಿರೋಧ ಪಕ್ಷದವರಿಗೆ ಹೇಳಿದ ಹಾಗೆ ಆಯಿತು. ಏಕೆಂದರೆ ನಿಮ್ಮ ಪರ ಇರುವವರು ಗಲಾಟೆ ಮಾಡುವುದಕ್ಕೆ ಸಾಧ್ಯವಿಲ್ಲ. ಅಥವಾ ಗಲಾಟೆ ಮಾಡುವುದಿಲ್ಲವೆನ್ನುವಂತಹ ಭಾವನೆ ನಿಮ್ಮದು. ಗಲಾಟೆ ಯಾರು ಮಾಡಿಸಿದರು, ಪ್ರಚೋದನೆ ಯಾರು ಕೊಟ್ಟರು? ವಿರೋಧ ಪಕ್ಷದವರು ಕೊಟ್ಟಿರಬೇಕು ಎನ್ನುವಂತಹ ಭಾವನೆ ಮೂಡಿಸತಕ್ಕಂಥ ರೀತಿಯಲ್ಲಿ ಮುಖ್ಯಮಂತ್ರಿಗಳು ಮಾತನಾಡುತ್ತಾರೆ ಮತ್ತು ಅದಕ್ಕೆ ಪುಷ್ಟಿ ಕೊಡುವಂತಹ ರೀತಿಯಲ್ಲಿ ಮಾನ್ಯ ಉಪ ಮುಖ್ಯಮಂತ್ರಿಗಳು ಮಾತನಾಡುತ್ತಾರೆ. ಆ ಭಾಗದಿಂದ ಬಂದಂತಹ ಶಾಸಕರು ಇನ್ನೂ ಮುಂದೆ ಹೋಗಿ, ರಾಜ್ಯ, ರಾಷ್ಟ್ರ ಹಾಗೂ ಇಂಟರ್‌ನ್ಯಾಷನಲ್ ಮಟ್ಟದಲ್ಲಿ ಅವರಿಬ್ಬರೂ ಮಾತನಾಡಿದರೆ, ಅವರು ಮುನ್ಸಿಪಾಲಿಟಿ ಲೆವೆಲ್‌ನಲ್ಲಿ ಮಾತನಾಡುತ್ತಾರೆ. ಅದಕ್ಕೆ ನಮಗೆ ಇವತ್ತು ಕೆಲವು ಎಕ್ಸ್‌ಪ್ಲನೇಷನ್ ಬೇಕು. ಐಎಸ್‌ಐ ಆಗಲಿ, ಅಲ್ಲಿರತಕ್ಕಂಥ ಮುನಿಸಿಪಾಲಿಟಿ ಉಪಾಧ್ಯಕ್ಷರಾಗಲಿ ಏನು ಮಾಡಿದರು? ಅವರನ್ನು ಏಕೆ ಬಿಟ್ಟರು? ಏಕೆ ಹಿಡಿದಿರಿ ಎನ್ನುವುದನ್ನೂ ಕೂಡ ಹೇಳಬೇಕು. ಇನ್ನು ಮೂರನೆಯದಾಗಿ ಈ ರೀತಿಯಾಗಿ ಪ್ರಚೋದನೆ ಮಾಡತಕ್ಕಂಥವರು ಯಾರೇ ಇರಬಹುದು, ಅವರು ಯಾರೇ ಶಾಸಕರಿರಲಿ, ಯಾವುದೇ ಪಕ್ಷವಿರಲಿ, ಆ ಪಕ್ಷದ ಮೇಲೆ ಕೂಡ ಸರ್ಕಾರದ ಕಣ್ಣು ಇರಬೇಕು. ಅದು ಸಂಘಪರಿವಾರ ಇರಬಹುದು, ಭಜರಂಗದಳ ಇರಬಹುದು ಅಥವಾ ಐಎಸ್‌ಐ ಇರಬಹುದು, ಯಾರೇ ಇರಬಹುದು. ಕೇವಲ ನಿಮ್ಮ ಕಣ್ಣು ಯಾವುದೋ ಒಂದು ಸಂಸ್ಥೆ ಮೇಲೆ ಗೂಬೆ ಕೂರಿಸಿ, ಇನ್ನೊಬ್ಬರು ಪ್ರಚೋದನೆ ಮಾಡಿದಾಗ ಸುಮ್ಮನೆ ಕುಳಿತುಕೊಳ್ಳತಕ್ಕಂಥದ್ದು ಅಥವಾ ಆಟ ಆಡುವಂಥಾದ್ದು ಸರಿಯಾದುದಲ್ಲ. ಆದುದರಿಂದ ದಯವಿಟ್ಟು ಇದರ ಬಗ್ಗೆ ಸ್ಪಷ್ಟವಾದಂತಹ ಹೇಳಿಕೆ ಕೂಡ ತಮ್ಮಿಂದ ಬರಬೇಕು, ಮತ್ತು ಈಗಾಗಲೇ ನಮ್ಮ ನಾಯಕರು ಏನು ಕೇಳಿದ್ದಾರೆ, ಅದಕ್ಕೆ ಸರಿಯಾದಂತಹ ಉತ್ತರವನ್ನೂ ಕೂಡ ತಾವು ಕೊಡಿಸಬೇಕು ಎನ್ನುವಂತಹ ಮಾತನ್ನೂ ಕೂಡ ನಾನು ಹೇಳುತ್ತೇನೆ. ಕೊನೆಯದಾಗಿ ಹೇಳುವುದಾದರೆ ಡಾ: ಆಚಾರ್ಯರವರು ಏಕೆ ನಿಧಾನವಾಗಿ ಹೋದರು? ಬೇರೆ ಬೇರೆ ವಿಚಾರಗಳಿಗೆ ಬಹಳ ಕ್ವಿಕ್‌ರಿಯಾಕ್ಟ್ ಮಾಡುತ್ತಾರೆ. ಎಲ್ಲಿಯಾದರೂ ಕೋಳಿ

ಜ್ವರ ಬಂತು, ಇಲಿ ಜ್ವರ ಬಂತು ಅಥವಾ ಚಿಕನ್ ಗುನ್ಯಾ ಎಂದರೆ, ಅಂಥದ್ದಕ್ಕೆ ಕ್ವಿಕ್‌ರಿಯಾಕ್ಟ್ ಮಾಡುತ್ತಾರೆ. ಆದರೆ ಇದಕ್ಕೆ ಏಕೆ ಕ್ವಿಕ್ ರಿಯಾಕ್ಟ್ ಮಾಡಲಿಲ್ಲ? ಅವರು ಒಂದು ದಿವಸ ಏಕೆ ಲೇಟ್ ಮಾಡಿ ಹೋದರೆಂಬುದು ಗೊತ್ತಾಗಲಿಲ್ಲ. ಅಥವಾ ಇದರ ಬಗ್ಗೆ ಸ್ಪಷ್ಟತೆ ಅವರಲ್ಲಿ ಏಕೆ ಇಲ್ಲ ಅನ್ನತಕ್ಕಂಥದ್ದು, ತಾವು, ಪದೇಪದೇ ಸರಿಯಾದಂತಹ ಮೆಡಿಸಿನ್ ಕೊಟ್ಟರೆ ಮನುಷ್ಯನ ಖಾಯಿಲೆ ಹೋಗುತ್ತದೆ ಎನ್ನುವಂತಹ ಮಾತನ್ನು ಹೇಗೆ ಹೇಳುತ್ತೀರೋ ಅದೇ ರೀತಿಯಾಗಿ ಈ ಖಾಯಿಲೆ ಹೋಗುವಂತಹ ದೃಷ್ಟಿಯಿಂದ ತಮ್ಮ ಪ್ರಯತ್ನ ಏನು? ತಾವು ಕೇವಲ ಅರ್ಧ ಅಥವಾ ಒಂದು ತಾಸಿನಲ್ಲಿ ಕುಳಿತು ಮಾತನಾಡಿ ಬಂದರೆ ಮುಗಿಯಿತಾ? ನೀವು ಬಂದಮೇಲೆ ಅಲ್ಲಿ ನಡೆದಂತಹ ಘಟನೆಗಳು ಏನು? ತಾವು ತಮ್ಮ ಕ್ಷೇತ್ರಕ್ಕೆ ಅಥವಾ ಉಡುಪಿಗೆ ಬಂದಮೇಲೆ ಅಲ್ಲಿ ಏಕೆ ಬಂದ್ ಆಗುತ್ತದೆ? ಅಂದರೆ ಅಲ್ಲಿನ ಜನರಿಗೆ ಎಮೋಷನಲ್ ಆಗಿರಬೇಕು. ಪ್ರತ್ಯಕ್ಷವಾಗಿ ಅಥವಾ ಅಪ್ರತ್ಯಕ್ಷವಾಗಿ ಅಲ್ಲಿ ನಡೆದಂತಹ ಘಟನೆ ಬಗ್ಗೆ ತಾವು ವಿವರವನ್ನು ಕೊಟ್ಟಾಗ ಜನ ಉದ್ವೇಗದಿಂದ ಅಲ್ಲಿ ಇವತ್ತು ಸ್ಟ್ರೈಕ್ ಮಾಡಿರಬಹುದು ಅಥವಾ ಬಂದ್ ಮಾಡಿರಬಹುದು. ಇದರ ಹಿನ್ನೆಲೆ ಏನು? ಇದು ಬೇರೆ ಕಡೆಯಾಗಿಲ್ಲ, ಅಲ್ಲಿ ಆಗಿರುವಂತಾದ್ದು ಹೇಗೆ? ಇದಕ್ಕೆಲ್ಲಾದಕ್ಕೂ ಕೂಡ ಸ್ಪಷ್ಟವಾದಂತಹ ಉತ್ತರವನ್ನು ಕೊಡಬೇಕೆಂದು ತಮ್ಮ ಮುಖಾಂತರ ಕೇಳಿಕೊಂಡು ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಹೆಚ್.ಎಸ್. ಶಂಕರಲಿಂಗೇಗೌಡ : ಮಾನ್ಯ ಉಪಾಧ್ಯಕ್ಷರೆ,

ಕತ್ತೆ ಬೂದಿಯಲ್ಲಿ ಹೊರಳಿ ಮತ್ತೆ ಯತಿಯಪ್ಪುದೆ,
ತತ್ವಜ್ಞಾನ ಅರಿಯದಲೆ ಬಸಿದ ವಿದ್ಯೆ ಶುದ್ಧ ಕತ್ತೆಯಿಂದ ಕಡೆ......

ಆ ಕತ್ತೆಗಳು ನೀವ್ಯಾರೂ ಆಗುವುದು ಬೇಡ.

ಉಪಾಧ್ಯಕ್ಷರು : ಈಗ ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಡುವುದಾದರೆ ಕೊಟ್ಟಬಿಡಲಿ, ರವಿಯವರೇ, ತಾವು ಐದು ನಿಮಿಷದಲ್ಲೆ ಮುಗಿಸಿ.

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಉಪಾಧ್ಯಕ್ಷರೆ, ಡಿಸ್‌ಕಷನ್ ನಡೆಯುತ್ತಿದೆ, ಇದು ಎಲ್ಲಿಯವರೆಗೆ ನಡೆಯುತ್ತದೆ? ಅವರು ಸಿಗ್ನೇಚರ್ ಮಾಡಿದ್ದಾರಾ?

ಉಪಾಧ್ಯಕ್ಷರು : ಜಗದೀಶ್ ಶೆಟ್ಟರ್‌ರವರೇ ಒಂದು ನಿಮಿಷ ತಾಳಿ, ರವಿಯವರು 5 ನಿಮಿಷದಲ್ಲಿ ಮುಗಿಸಬೇಕು. ರವಿಯವರು ಇದೇ ವಿಷಯದ ಮೇಲೆ ರೈಜ್ ಮಾಡಿದ್ದಾರೆ, ಆ ಪ್ರಶ್ನೆ ಇಲ್ಲಿದೆ.

ಶ್ರೀ ಸಿ.ಟಿ. ರವಿ (ಚಿಕ್ಕಮಗಳೂರು) : ಮಾನ್ಯ ಉಪಾಧ್ಯಕ್ಷರೆ, ವಿರೋಧ ಪಕ್ಷದ ನಾಯಕರುಗಳು ಮತ್ತೆ ಸ್ಥಳೀಯ ಶಾಸಕರಾದಂತಹ.......

ಮಾನ್ಯ ಸದಸ್ಯರು : ಮಾನ್ಯ ಉಪಾಧ್ಯಕ್ಷರೆ, ಮಾನ್ಯ ರವಿಯವರಿಗೆ ಈಗಾಗಲೇ ತಾವು ಅನುಮತಿ ಕೊಟ್ಟಾಗಿದೆ.

(ಗೊಂದಲ)

ಉಪಾಧ್ಯಕ್ಷರು : ಐದು ನಿಮಿಷ ಮಾತನಾಡುವುದಾಗಿ ಅವರು ಶೂನ್ಯ ವೇಳೆಯಲ್ಲಿ ಕೇಳಿಕೊಂಡಿದ್ದಾರೆ. ಭಟ್ಕಳದಲ್ಲಿ ಆಗಿರುವ ಗಲಭೆ ಬಗ್ಗೆ ಮಾತನಾಡಬೇಕೆಂದು ಅವರು ಕೇಳಿಕೊಂಡಿದ್ದಾರೆ.

ಶ್ರೀ ಸಿ.ಟಿ. ರವಿ (ಚಿಕ್ಕಮಗಳೂರು) : ಮಾನ್ಯ ಉಪಾಧ್ಯಕ್ಷರೆ, ನೀವು ನನಗೆ ಅನುಮತಿ ಕೊಟ್ಟಿದ್ದೀರಿ. ವಿರೋಧ ಪಕ್ಷದ ನಾಯಕರು ಮತ್ತು ಸ್ಥಳೀಯ ಶಾಸಕರಾದಂತಹ ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿಯವರು ಈ ಭಟ್ಕಳ ಗಲಭೆಗೆ ಸಂಬಂಧಿಸಿದಂತೆ ಸೂಕ್ಷ್ಮ ವಿಚಾರಗಳನ್ನು ಎಳೆಎಳೆಯಾಗಿ ಬಿಡಿಸಿಡತಕ್ಕಂಥ ಕೆಲಸವನ್ನು ಮಾಡಿದ್ದಾರೆ.

ಉಪಾಧ್ಯಕ್ಷರು : ಈಗ ಸ್ವಲ್ಪ ಕೇಳಿ, ನೀವು ಕೇಳಿದ್ದು ಅಡ್ಜರ್ನ್‌ಮೆಂಟ್ ಮೋಷನ್‌ನಲ್ಲಿ. ಅದನ್ನು ಈಗ ನಿಯಮ 69ಕ್ಕೆ ಕನ್‌ವರ್ಟ್ ಮಾಡಿದ್ದೇವೆ. ಅದರ ಮೇಲೆ ಚರ್ಚೆ ನಡೆಯುತ್ತಿದೆ. ಇದೇ ಸಬ್ಜೆಕ್ಟ್ ಮೇಲೆ ಶೂನ್ಯ ವೇಳೆಯಲ್ಲಿ ಮಾತನಾಡಬೇಕೆಂದು ಅವರು ಕೊಟ್ಟಿದ್ದಾರೆ. ಐದು ನಿಮಿಷದಲ್ಲಿ ಮಾನ್ಯ ರವಿಯವರು ಮುಗಿಸುತ್ತಾರೆ, ಅವರು ಮುಗಿಸಿದ ತಕ್ಷಣ ತಾವು ಮಾತನಾಡಿ.

ಶ್ರೀ ಬಸವರಾಜ್ ರಾಯರೆಡ್ಡಿ (ಯಲಬುರ್ಗಾ) : ನೀವು ಯಾರಿಗೆ ಮಾತನಾಡುವುದಕ್ಕೆ ಅವಕಾಶ ಕೊಡಬೇಕೆಂದು ಇದೆ ಅದು ನಿಮ್ಮ ಹಕ್ಕು. ಅದರ ಬಗ್ಗೆ ಪ್ರಶ್ನೆ ಮಾಡುತ್ತಿಲ್ಲ. ಆದರೆ ಈಗ ಯಾರು ಮಾತನಾಡಬೇಕೆಂದು ಸ್ಪಷ್ಟವಾಗಿ ಹೇಳಿ.

ಉಪಾಧ್ಯಕ್ಷರು : ಸಿ.ಟಿ. ರವಿಯವರು ಮಾತನಾಡುತ್ತಾರೆ.

ಶ್ರಿ ಸಿ.ಟಿ. ರವಿ (ಚಿಕ್ಕಮಗಳೂರು) : ಮಾನ್ಯ ಉಪಾಧ್ಯಕ್ಷರೆ, ಸೂಕ್ಷ್ಮವಾಗಿ ಭಟ್ಕಳದ ಬಗ್ಗೆ ಮಾನ್ಯ ವಿರೋಧ ನಾಯಕರುಗಳು ಮತ್ತು ಸ್ಥಳೀಯ ಶಾಸಕರಾದ ಶ್ರೀ ಕಾಗೇರಿಯವರು ವಿಚಾರಗಳನ್ನು ಬಿಡಿಸಿಟ್ಟಿದ್ದಾರೆ. ನಾವಿಲ್ಲಿ ಮೂಲ ಬೇರನ್ನು ಮರೆತುಬಿಟ್ಟರೆ, ಗಲಾಟೆ ಏಕೆ ಪದೇಪದೇ ಆಗುತ್ತದೆ ಎಂದು ಯೋಚನೆ ಮಾಡದೇ ಇದ್ದರೆ ಖಾಯಿಲೆ ಗುಣವಾಗುವ ಪ್ರಶ್ನೆಯೇ ಇಲ್ಲ. 1991 ರಲ್ಲಿ ದಿವಂಗತ ಶ್ರೀ ವೀರೇಂದ್ರ ಪಾಟೀಲ್‌ರವರು ಮುಖ್ಯಮಂತ್ರಿಗಳಾಗಿದ್ದಾಗ ರಾಮನಗರ, ಚನ್ನಪಟ್ಟಣದಲ್ಲಿ ಗಲಭೆ ನಡೆಯಿತು. ಗಲಭೆ ಏಕೆ ನಡೆಯಿತು? ಅದಕ್ಕೆ ಕಾರಣಕರ್ತರು ಯಾರು? ಅವರನ್ನು ಇಳಿಸುವುದನ್ನೇ ಉದ್ದೇಶವನ್ನಾಗಿ ಇಟ್ಟುಕೊಂಡು ಯಾರು ಗಲಾಟೆ ಮಾಡಿಸಿದರು ಎಂದು ನಾನಿಲ್ಲಿ ಒಡೆದು ಹೇಳುವುದಕ್ಕೆ ಹೋಗುವುದಿಲ್ಲ. ಯಾವ ಮನಸ್ಸುಗಳು ಯಾವ್ಯಾವ ರೀತಿಯಲ್ಲಿ ಯಾವ್ಯಾವ ಸಂದರ್ಭವನ್ನು, ಹೇಗೆ ಉಪಯೋಗಿಸಿಕೊಳ್ಳುತ್ತವೆ ಎನ್ನುವುದನ್ನು ಈ ಸಭೆಯ ಅವಗಾಹನೆಗೆ ನಾನು ಬಿಡುತ್ತೇನೆ.

1993 ರಿಂದ ಭಟ್ಕಳದಲ್ಲಿ ಭಾರೀ ಪ್ರಮಾಣದ ಗಲಭೆಗಳು ಪ್ರಾರಂಭವಾದವು. ಮೊನ್ನೆ ಮೊನ್ನೆ ಒಂದೂವರೆ ತಿಂಗಳಿಂದೀಚೆಗೆ ಬಿಟ್ಟರೆ, 12 ವರ್ಷಗಳ ಕಾಲ ಹಿರಿಯ ಸದಸ್ಯರಾದಂಥ ಸನ್ಮಾನ್ಯ ದೇಶಪಾಂಡೆಯವರು ಉತ್ತರ ಕನ್ನಡ ಜಿಲ್ಲೆಗೆ ಉಸ್ತುವಾರಿ ಸಚಿವರಾಗಿದ್ದರು. ಅದಕ್ಕೆ ಮುಂಚೆ ಅವರು ವಿರೋಧ ಪಕ್ಷದ ನಾಯಕರಾಗಿದ್ದರು. ಈ ಗಲಭೆಯ ಹಿನ್ನಲೆಯಲ್ಲಿರತಕ್ಕಂಥ ಸುತ್ರದಾರರು ಯಾರು? ವ್ಯಕ್ತಿಗಳ್ಯಾರು? ಸಂಘಟನೆಗಳ್ಯಾವುವು ಎನ್ನುವುದನ್ನು ಜಗನ್ನಾಥ ಶೆಟ್ಟಿ ಆಯೋಗದ ವರದಿಯಲ್ಲಿ ತಿಳಿಸಿದ್ದಾರೆ ಎನ್ನುವುದನ್ನು ನಾನು ಪತ್ರಿಕಾ ವರದಿಯಲ್ಲಿ ಓದಿದ್ದೇನೆ. ಏಕೆ ಅದನ್ನು ಬಹಿರಂಗಪಡಿಸಲಿಲ್ಲ? ಅದರ ಹಿನ್ನೆಲೆಯಲ್ಲಿ ಇರುವಂಥ ವ್ಯಕ್ತಿಗಳ ಮೇಲೆ, ಶಕ್ತಿಗಳ ಮೇಲೆ ಏಕೆ ಕ್ರಮ ಕೈಗೊಳ್ಳಲಿಲ್ಲ? ಯಾವ ದಾಕ್ಷಿಣ್ಯ ಅದಕ್ಕೆ ಅಡ್ಡ ಹಾಕಿತು ಅಥವಾ ಯಾವ ಮತಬ್ಯಾಂಕ್ ರಾಜಕಾರಣ ನಿಜವಾದ ಆರೋಪಿಗಳನ್ನು, ಅಪರಾಧಿಗಳನ್ನು ಶಿಕ್ಷೆಗೊಳಪಡಿಸುವುದನ್ನು ತಡೆಯತಕ್ಕಂಥ ಕೆಲಸ ಮಾಡಿತು ಎನ್ನುವುದನ್ನು ನಾವು ಇಲ್ಲಿ ಯೋಚನೆ ಮಾಡಬೇಕಾಗುತ್ತದೆ. ಏಕೆ ಹೀಗಾಯಿತು? ಈ ರೀತಿಯ ಕಾರಣದಿಂದಲೇ ಮತ್ತೆ ಮತ್ತೆ ಗಲಭೆಗಳು ಮರುಕಳಿಸಲಿಕ್ಕೆ ಕಾರಣವಾಗುತ್ತಿದೆ. ಚಿತ್ತರಂಜನ್‌ರವರ ಹತ್ಯೆಯಾಯಿತು. ಈ ಹತ್ಯೆಯ ಬಗ್ಗೆ ಈ ಸದನದಲ್ಲೇ ನೂರಾರು ಬಾರಿ ಕೂಗು ಎದ್ದಿರಬಹುದು. ಆದರೆ ಇವತ್ತಿಗೂ ಕೂಡ ಅದರ ಆರೋಪಿಗಳನ್ನು ಬಂಧಿಸಲಿಕ್ಕೆ ಸಾಧ್ಯವಾಗಿಲ್ಲ. ಯಾವ ಸರ್ಕಾರ ಎಂದು ನಾನು ಹೇಳುವುದಿಲ್ಲ. ಆದರೆ, ಆರೋಪಿಗಳನ್ನು ಬಂಧಿಸಲು ಸಾಧ್ಯವಾಗದೇ ಇರತಕ್ಕಂಥ ವೈಫಲ್ಯದ ಬಗ್ಗೆ ನಾನು ಹೇಳುತ್ತಿದ್ದೇನೆ. ತಿಮ್ಮಪ್ಪ ನಾಯಕರ ಹತ್ಯೆಯಾಯಿತು. ತಿಮ್ಮಪ್ಪ ನಾಯಕರ ಹತ್ಯೆಯಾದಾಗ ಮಾನ್ಯ ಯಡಿಯೂರಪ್ಪನವರು ಉಪಮುಖ್ಯಮಂತ್ರಿಗಳಾಗಿರಲಿಲ್ಲ. ಆದರೆ ಆ ಹತ್ಯೆಯ ಆರೋಪಿಗಳನ್ನು ಈ ಘಳಿಕೆಯವರೆಗೂ ಪತ್ತೆ ಹಚ್ಚಲು ಆಗಲಿಲ್ಲ. ಅಂದರೆ, ಏಕೆ, ಇವರು ಇಷ್ಟೊಂದು ಬಲಾಢ್ಯರೇ? ನಮ್ಮ ಪೊಲೀಸ್ ವ್ಯವಸ್ಥೆ, ಕಾನೂನು ವ್ಯವಸ್ಥೆ, ಗೃಹ ಇಲಾಖೆಗಿಂತ, ಇಂಟೆಲಿಜೆನ್ಸ್‌ಗಿಂತಲೂ ಆರೋಪಿಗಳು ಬಲಾಢ್ಯರೇ? ಅಥವಾ ಆ ರೀತಿಯ ಆರೋಪಿಗಳನ್ನು ರಕ್ಷಣೆ ಮಾಡತಕ್ಕಂಥ ಬಲಾಢ್ಯ ಶಕ್ತಿಯೇನಾದರೂ ಕೆಲಸ ಮಾಡುತ್ತಿದೆಯೇ ಎನ್ನುವುದರ ಬಗ್ಗೆ ಚಿಂತನೆ ಮಾಡಬೇಕಾದಂಥ ಅವಶ್ಯಕತೆ ಇದೆ. ಇವತ್ತು ಈ ಹಿನ್ನೆಲೆಯಲ್ಲಿ ಐಎಸ್‌ಐ ಇದೆ ಎನ್ನುವುದನ್ನು ಮಾನ್ಯ ಯಡಿಯೂರಪ್ಪನವರು ಮಾತ್ರ ಹೇಳಿದ್ದಾರೆ ಎಂದೇನೂ ಅಲ್ಲ. ಕಾಂಗ್ರೆಸ್ಸಿನ ಮಾಜಿ ರಾಜ್ಯಾಧ್ಯಕ್ಷರು, ರಾಜ್ಯಸಭಾ ಸದಸ್ಯರಾಗಿರತಕ್ಕಂಥ ಸನ್ಮಾನ್ಯ ಜನಾರ್ಧನ ಪೂಜಾರಿಯವರು ಇದನ್ನು ಮಂಗಳೂರಿನ ಪತ್ರಿಕಾಗೋಷ್ಠಿಯಲ್ಲಿ ಹೇಳಿದ್ದಾರೆ. ಕರಾವಳಿ ಭಾಗದಲ್ಲಿ ಐಎಸ್‌ಐ ಶಕ್ತಿಗಳು ಸಕ್ರಿಯವಾಗಿವೆ, ಹೀಗೆ ಸಕ್ರಿಯವಾಗಿರುವ ಕಾರಣದಿಂದಲೇ ಪದೇಪದೇ ಎಲ್ಲಿ ಸೂಕ್ಷ್ಮವಾಗಿ ಕೋಮುಗಲಭೆಗಳು ಆಗಲಿಕ್ಕೆ

ಕಾರಣವಾಗುತ್ತಿದೆ ಎನ್ನತಕ್ಕಂಥಾದ್ದನ್ನು ಲೇಡಿ ಹಿಲ್ಸ್‌ನ ಒಂದು ಸಮಾರಂಭದಲ್ಲಿ ಶ್ರೀ ಜನಾರ್ಧನ ಪೂಜಾರಿಯವರೇ ಹೇಳಿದ್ದಾರೆ ಎಂದು ಇರುವಾಗ, ಅದರ ಬಗ್ಗೆ ನಾವು ಏನಾದರೂ ಹೇಳಿದರೆ, ಕುಂಬಳಕಾಯಿ ಕಳ್ಳ ಎಂದರೆ, ಹೆಗಲು ಮುಟ್ಟಿ ನೋಡಿಕೊಳ್ಳತಕ್ಕಂಥ ಪರಿಸ್ಥಿತಿಗೆ ಉಳಿದವರೆಲ್ಲಾ ಏಕೆ ಹೋಗುತ್ತಾರೆ ಎನ್ನತಕ್ಕಂಥಾದ್ದು ನನಗೆ ಅರ್ಥವಾಗುತ್ತಿಲ್ಲ. ಹಾಗಾಗಿ, ನಮಗೆ ಕೇವಲ ಒಂದು ಜಟಕಾ ದೇವರ ವಿಷಯವಾಗಲೀ ಅಥವಾ ಒಂದು "ಮಾಸ್ತಿಕಲ್ಲಿನ" ವಿಷಯದಿಂದ ಹೀಗಾಗುತ್ತಿದೆ ಎನ್ನುವುದಲ್ಲ. ಇಲ್ಲಿ ಈ ಗಲಭೆಗಳನ್ನು ಸೃಷ್ಟಿ ಮಾಡತಕ್ಕಂಥ ವ್ಯವಸ್ಥಿತವಾದಂಥ ಒಂದು ಶಕ್ತಿ ಜಾಗೃತವಾಗಿದೆ ಎನ್ನುವುದು ಸತ್ಯವಾದ ಸಂಗತಿ. ಆಡಳಿತ ಪಕ್ಷದಲ್ಲಿದ್ದಾಗ, ವಿರೋಧ ಪಕ್ಷದಲ್ಲಿದ್ದಾಗ ಎನ್ನುವ ಇವೆರಡರ ನಡುವೆ ವ್ಯತ್ಯಾಸಗಳನ್ನು ನಾನು ಗುರುತಿಸುತ್ತಿಲ್ಲ. ನಾನು ಏಕೆ ಈ ಮಾತನ್ನು ಹೇಳುತ್ತಿದ್ದೇನೆಂದರೆ, 2000ನೇ ಇಸವಿಯಲ್ಲಿ ಚರ್ಚ್ ಸ್ಫೋಟ ನಡೆಯಿತು. ಆವತ್ತು ಗೃಹಸಚಿವರಾಗಿದ್ದು, ಇವತ್ತು ವಿರೋಧ ಪಕ್ಷದಲ್ಲಿರತಕ್ಕಂಥ ಸನ್ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಒಂದು ಹೇಳಿಕೆ ಕೊಟ್ಟರು. ಚರ್ಚ್ ಸ್ಫೋಟದ ಹಿಂದೆ ಆರ್‌ಎಸ್‌ಎಸ್ ಕೈವಾಡ ಇದೆ ಎಂದು ಹೇಳಿಕೆ ಕೊಟ್ಟರು. ಚರ್ಚ್ ಸ್ಫೋಟದ ರೂವಾರಿಗಳು ಯಾರು, ಯಾರ ಕೈವಾಡವಿತ್ತು ಎನ್ನುವುದು ನಂತರ ಸಾಬೀತಾಯಿತು. ಆಗ ಇವರೇ ಗೃಹ ಇಲಾಖೆಯ ಸಚಿವರಾಗಿದ್ದರು. ಇವರ ಹತ್ತಿರ ಎಲ್ಲಾ ಮೆಷಿನರಿಗಳಿತ್ತು, ಇಂಟೆಲಿಜೆನ್ಸ್ ಇತ್ತು. ಆದರೂ ಇವರಿಗೆ ಸತ್ಯ ತಿಳಿದುಕೊಳ್ಳಲು ಸಾಧ್ಯವಾಗಲೇ ಇಲ್ಲ. ಪೂರ್ವಾಗ್ರಹಪೀಡಿತವಾಗಿ, ಘಟನೆಯ ಹಿಂದೆ ಆರ್‌ಎಸ್‌ಎಸ್ ಕೈವಾಡ ಇದೆ ಎಂದು ಆರೋಪ ಮಾಡಿಬಿಟ್ಟರು. ಆರೋಪಿಗಳು ಪತ್ತೆಯಾದ ನಂತರವೂ ಕೂಡ ಆ ತಪ್ಪಿಗೆ ಕ್ಷಮೆ ಕೇಳತಕ್ಕಂಥ ಉದಾರ ಮನೋಭಾವನೆಯನ್ನು ಅವರು ವ್ಯಕ್ತ ಮಾಡಲೇ ಇಲ್ಲ. ಈ ರೀತಿಯ ಮನಸ್ಥಿತಿಯ ಕಾರಣದಿಂದಾಗಿ ಸತ್ಯವನ್ನು ಮುಚ್ಚಿಟ್ಟು, ಅದನ್ನು ರಾಜಕೀಯವಾಗಿ ಲಾಭಕ್ಕೆ ಬಳಸಿಕೊಳ್ಳತಕ್ಕಂಥ ಶಕ್ತಿಗಳ ಕಾರಣದಿಂದಾಗಿ ನಿಜ ವಿಷಯಗಳು ಹೂತುಹೋಗುತ್ತವೆ. ನಿಜ ವಿಷಯಗಳು ಹೂತು ಹೋಗಬಾರದು ಎಂದರೆ ನಾವು ಈ ಗಲಭೆಗಳನ್ನು ಸೃಷ್ಟಿಸತಕ್ಕಂಥ ಹುನ್ನಾರ ಇರತಕ್ಕಂಥ ವ್ಯಕ್ತಿಗಳ ಮೇಲೆ, ಓಟ್‌ಬ್ಯಾಂಕ್ ರಾಜಕಾರಣವನ್ನು ಬಿಟ್ಟು ಯೋಚನೆ ಮಾಡಿದಾಗ ಮಾತ್ರ ಅವರನ್ನು ನಿಯಂತ್ರಣ ಮಾಡಲು ಸಾಧ್ಯವಾಗುತ್ತದೆಯೇ ಹೊರತು ಬೆಂದ ಮನೆಯಲ್ಲಿ ಗಳಹಿಡಿಯತಕ್ಕಂಥ ಕೆಲಸವನ್ನು ಮಾಡಬಾರದು. ಇದರಿಂದ ನಾವು ಎಷ್ಟು ಲಾಭ ಮಾಡಿಕೊಳ್ಳಬೇಕು ಎನ್ನುವ ಮನೋಭಾವನೆಯನ್ನೇ ಮುಂದುವರೆಸಿದರೆ ಖಂಡಿತಾ ಗಲಭೆಗಳು ಯಾವುದೇ ನಿಯಂತ್ರಣಕ್ಕೆ ಬರುವುದಿಲ್ಲ. ಆಗ ಸೂಕ್ಷ್ಮ ಪ್ರದೇಶವಾಗಿ ಭಟ್ಕಳ ಮಾತ್ರವಲ್ಲ, ಇಡೀ ರಾಜ್ಯ ಸೂಕ್ಷ್ಮ ಪ್ರದೇಶವಾಗಿ ಪರಿವರ್ತನೆಯಾಗಿ ಬಿಡಬಹುದು. ಹಾಗೆ

ಆಗಬಾರದು. ಇವತ್ತು ಉಗುರಿನಲ್ಲಿ ಹೋಗುವುದಕ್ಕೆ ನಾಳೆ ಕೊಡಲಿ ತೆಗೆದುಕೊಳ್ಳತಕ್ಕಂಥ ಪರಿಸ್ಥಿತಿ ಬರಬಾರದು. ಆದ್ದರಿಂದ, ಈಗ ಮೊಳಕೆಯಲ್ಲಿರುವುದನ್ನು ನಿರ್ದಾಕ್ಷಿಣ್ಯವಾಗಿ ಚಿವುಟತಕ್ಕಂಥ ಕೆಲಸ ಮಾಡಬೇಕು ಎನ್ನುವ ಮಾತನ್ನು ಹೇಳುತ್ತೇನೆ. ಉಡುಪಿ ಬಂದ್‌ಗೆ ಯಾರು ಕರೆ ಕೊಟ್ಟರೋ ಗೊತ್ತಿಲ್ಲ. ಯಾರು ಕರೆ ಕೊಟ್ಟರು, ಯಾರು ಬೆಂಬಲಿಸಿದರು, ಎನ್ನುವುದು ನಮಗೆ ಸಂಬಂಧಿಸಿಲ್ಲ. ಆದರೆ ಇವರು ಸೂಕ್ಷ್ಮವಾಗಿ ಹೇಳುತ್ತಿದ್ದುದು ಹೇಗಿತ್ತು ಎಂದರೆ, ಇವರು ಬಾಯಿ ಬಿಡದೇ ಆರೋಪ ಮಾಡತಕ್ಕಂಥ ಕೆಲಸವನ್ನು ಮಾಡುತ್ತಿದ್ದರು. ಕೊಯಮತ್ತೂರಿನಲ್ಲಿ 18 ಜನರನ್ನು ಬಲಿ ತೆಗೆದುಕೊಂಡ ಬಾಂಬ್ ಸ್ಫೋಟಕ್ಕೆ ಕಾರಣಕರ್ತನಾದ ಅಬ್ದುಲ್ ನಾಸಿರ್ ಮದನಿಯ ಬಗ್ಗೆ ಕೇರಳದಲ್ಲಿ........

ಶ್ರೀ ಬಸವರಾಜ ರಾಯರೆಡ್ಡಿ : ಕೊಯಮತ್ತೂರು ಬಾಂಬ್ ಸ್ಫೋಟಕ್ಕೂ ಇದಕ್ಕೂ ಏನು ಸಂಬಂಧವಿದೆ?

ಶ್ರೀ ಸಿ.ಟಿ. ರವಿ : ಸಂಬಂಧವಿದೆ, ಹೇಳುತ್ತೇನೆ.

(ಗೊಂದಲ)

ಉಪಾಧ್ಯಕ್ಷರು : ಆಯಿತು, ಮುಗಿಸಿ,

ಶ್ರೀ ಸಿ.ಸಿ. ಪಾಟೀಲ್ : ನೀವು ಪದೇಪದೇ ಏಕೆ ಎದ್ದುನಿಂತು ಅವರಿಗೆ ಅಡ್ಡಿ ಮಾಡುತ್ತೀರಿ?

ಶ್ರೀ ಸಿ.ಟಿ. ರವಿ : ಮಾನ್ಯ ರಾಯರೆಡ್ಡಿಯವರೇ, ಎರಡು ನಿಮಿಷ ಸಮಾಧಾನವಾಗಿ ಕೇಳಿ. ನೀವೇಕೆ ಸಂಕಟಪಟ್ಟುಕೊಳ್ಳುತ್ತೀರಿ? ಅಲ್ಲಿ 18 ಜನರನ್ನು ಬಲಿ ತೆಗೆದುಕೊಂಡಂಥ ಸ್ಫೋಟಕ್ಕೆ ಕಾರಣನಾದಂಥ ಅದರ ರೂವಾರಿಯ ಬಗ್ಗೆ ಕೇರಳ ವಿಧಾನಸಭೆಯಲ್ಲಿ ಯಾರ್‍ಯಾರು, ಯಾವಯಾವ ರೀತಿಯಾಗಿ, ಆತ ಮಹಾ ಮಾನವತಾವಾದಿ, ಆತನ್ನು ಬಿಡುಗಡೆಗೊಳಿಸಬೇಕು ಎಂದು ಪೈಪೋಟಿಯಿಂದ ರೆಸಲ್ಯೂಷನ್ ಮಂಡಿಸಿದ್ದಾರೆ. ಏಕೆ ಅದನ್ನು ಮಂಡಿಸಿದ್ದಾರೆ ಎಂದು ನಾನು ಇಲ್ಲಿ ಪ್ರಶ್ನೆ ಮಾಡಲು ಹೋಗುವುದಿಲ್ಲ. ಏಕೆ ಅಲ್ಲಿ ರೆಸಲ್ಯೂಷನ್ ಮಂಡಿಸಿದರು, ಯಾರು ಆತನ ಪರ ಹೇಳಿಕೆ ಕೊಟ್ಟರು, ಅದರ ಹಿಂದುಗಡೆ ಇರತಕ್ಕಂಥ ಓಟ್‌ಬ್ಯಾಂಕ್ ರಾಜಕಾರಣವೇನು ಎನ್ನುವುದೆಲ್ಲದರ ಬಗ್ಗೆ ಅಂಗೈ ಹುಣ್ಣಿಗೆ ನಾನು ಕನ್ನಡಿ ಹಿಡಿಯಲು ಹೋಗುವುದಿಲ್ಲ. ಈ ರೀತಿಯ ಶಕ್ತಿಗಳ ಕಾರಣದಿಂದಾಗಿ ಭಟ್ಕಳ ಸೂಕ್ಷ್ಮ ಪ್ರದೇಶವಾಗಿ ಬಲಿಯಲು ಕಾರಣವಾಗಿರತಕ್ಕಂಥದ್ದು ಮತ್ತು ಇದೇ ಕಾರಣದಿಂದಾಗಿ ರಾಜ್ಯ ಸೂಕ್ಷ್ಮವಾಗಲು ಕಾರಣವಾಗಿರತಕ್ಕಂಥದ್ದು. ತಮ್ಮ ಮೂಲಕ ನಾನು ಸರ್ಕಾರಕ್ಕೆ ವಿನಂತಿ ಮಾಡಿಕೊಳ್ಳುವುದು ಇಷ್ಟೇ, ಇಂಥ ವಿಷಯಗಳಲ್ಲಿ ಓಟ್‌ಬ್ಯಾಂಕ್ ರಾಜಕಾರಣ ಬೇಡ, ನಿಜವಾಗಿಯೂ ಶಿವಪ್ಪ ನಾಯಕನ ಹತ್ಯೆಗೆ ಕಾರಣರಾದವರು ಮತ್ತು ಮುನೀರ್ ಮೇಲೆ ಹಲ್ಲೆ ಮಾಡಿದವರು ಯಾರೇ ಇದ್ದರೂ

ಕೂಡ ಅವರೆಲ್ಲರಿಗೆ ಶಿಕ್ಷೆಯಾಗಬೇಕು, ಮತ್ತೆ ಭಟ್ಕಳದಲ್ಲಿ ಶಾಂತಿ ನೆಲೆಸಬೇಕು, ಅದು ಐಎಸ್ಐ ಇರಬಹುದು ಅಥವಾ ಲೋಕಲ್ ಮುನಿಸಿಪಾಲಿಟಿ ಇರಬಹುದು, ಇವತ್ತು ಐಎಸ್ಐ ಸಂಬಂಧ ಬರೀ ದೆಹಲಿ ವಲಯದಲ್ಲಿ ಮಾತ್ರವಿಲ್ಲ, ಮುನಿಸಿಪಾಲಿಟಿ ಲೆವೆಲ್‌ನಲ್ಲೂ ಇದೆ. ಆ ಐಎಸ್ಐ ಸಂಬಂಧ ಹೇಗಿದೆ ಎಂದರೆ, ಇತ್ತೀಚೆಗೆ ಗುಲ್ಬರ್ಗಾದಲ್ಲಿ ಅರೆಸ್ಟ್ ಮಾಡಿಸಿದಂಥ ಐಎಸ್ಐ ಬೆಂಬಲಿತ ಒಬ್ಬ ಉಗ್ರಗಾಮಿ ನನ್ನ ಜಿಲ್ಲೆಯ ಒಂದು ಸಾಮಾನ್ಯ ಹಳ್ಳಿಯಾದ ಜನ್ನಾಪುರದಲ್ಲಿ ಬಂದು ಮೂರು ತಿಂಗಳು ಇರುತ್ತಾನೆ ಎಂದರೆ, ಆ ಸಂಬಂಧ ಬರೀ ಮುನಿಸಿಪಾಲಿಟಿ ಲೆವೆಲ್‌ನಲ್ಲಿ ಇಲ್ಲ, ಇದನ್ನು ತಮಾಷೆಯಾಗಿ ನೋಡುವ ಸ್ಥಿತಿಯಲ್ಲಿಲ್ಲ; ಇದು ಸಣ್ಣ ಹಳ್ಳಿಯವರೆಗೂ ವ್ಯಾಪಿಸಿದೆ. ಮೊನ್ನೆಮೊನ್ನೆ ಮಾನ್ಯ ಕುಮಾರಸ್ವಾಮಿಯವರು ಮುಖ್ಯಮಂತ್ರಿಗಳಾದಾಗ, ಮಾನ್ಯ ಯಡಿಯೂರಪ್ಪನವರು ಉಪ ಮುಖ್ಯಮಂತ್ರಿಗಳಾದಾಗ ವ್ಯಾಪಿಸಿರುವುದಲ್ಲ ಇದು. ಕಳೆದ ಐದು ದಶಕಗಳ ಹಿಂದಿನಿಂದಲೂ ಕೂಡ ಈ ರೀತಿಯ ಐಎಸ್ಐ ಪ್ರಚೋದಿತ ಚಟುವಟಿಕೆಗಳು ಬಲಿಯಲಿಕ್ಕೆ ಯಾವಯಾವ ಶಕ್ತಿಗಳು ಕಾರಣವಾಗಿವೆ ಎನ್ನತಕ್ಕಂಥಾದ್ದರ ಬಗ್ಗೆಯೂ ಕೂಡ ತನಿಖೆಯಾಗಬೇಕು. ಅವರಿಗೆ ಆಶ್ರಯ ಕೊಡತಕ್ಕಂಥ ಎಲ್ಲಾ ಶಕ್ತಿಗಳನ್ನು ಮಟ್ಟ ಹಾಕತಕ್ಕಂಥ ಕೆಲಸ ಮಾಡಬೇಕು. ರೋಷನ್ ಬೇಗ್‌ರವರು ಎದೆ ತಟ್ಟಿಕೊಂಡು ಹೇಳಿದರು, ಅಂಥವರನ್ನು ಗುಂಡು ಹಾಕಿ ಕೊಲ್ಲಿ ಎಂದು ಹೇಳಿದರು. ಆದರೆ ಏನು ಮಾಡುವುದು ಹೇಳಿ? ಇವತ್ತಿನ ವ್ಯವಸ್ಥೆ ಹೇಗಿದೆ ಎಂದರೆ, ಹಾಗೇನಾದರೂ ಗುಂಡು ಹಾಕಿ ಕೊಂದರೆ, ಅವನ ಶವವನ್ನೂ ಹಿಡಿದುಕೊಂಡು ಮೆರವಣಿಗೆ ಮಾಡಿ ಮತ್ತೆ ಓಟ್‌ಬ್ಯಾಂಕ್ ರಾಜಕಾರಣ ಮಾಡುತ್ತಾರೆ. ಮತ್ತು ಮಹಾ ಮಾನವತಾವಾದಿ ಎಂದು........

ಶ್ರೀ ಎ. ತನ್ವೀರ್‌ಸೇಠ್ : ಅದೆಲ್ಲಾ ನಿಮ್ಮಿಂದಲೇ ಆಗಿರುವುದು. ಇಂಥವುಗಳನ್ನು ಓಟ್‌ಬ್ಯಾಂಕನ್ನಾಗಿ ಮಾಡಿಕೊಂಡವರು ಬಿಜೆಪಿ ಯವರೇ ಹೊರತು ಬೇರೆ ಯಾರೂ ಅಲ್ಲ. ಹಿಂದಿನಿಂದಲೂ ಇದನ್ನು ಓಟ್‌ಬ್ಯಾಂಕ್ ಮಾಡಿಕೊಂಡು ಎಲ್ಲವನ್ನೂ ಮಾಡುತ್ತಿರುವವರು ಅವರೇ ಹೊರತು ಇನ್ನ್ಯಾರೂ ಅಲ್ಲ.

(ಗೊಂದಲ)

ಶ್ರೀ ಸಿ.ಟಿ. ರವಿ : ನಾನು ರೋಷನ್ ಬೇಗ್‌ರವರನ್ನು ಹೊಗಳಿದೆ. ನೀವೇಕೆ ಬೇಜಾರು ಮಾಡಿಕೊಳ್ಳುತ್ತೀರಿ? ತನ್ವೀರ್ ಸೇಠ್‌ರವರೇ, ನಿಮ್ಮನ್ನೂ ಹೊಗಳುತ್ತೇನೆ. ನೀವೂ ಅದೇ ರೀತಿ ಮಾತನಾಡಿ, ನಿಮ್ಮನ್ನೂ ಹೊಗಳುತ್ತೇವೆ ತನ್ವೀರ್ ಸೇಠ್‌ರವರೇ, ನೀವೇಕೆ ಬೇಜಾರು ಮಾಡಿಕೊಳ್ಳುತ್ತೀರಿ? ನಾನು ಏಕೆ ಈ ಮಾತನ್ನು ಹೇಳುತ್ತಿದ್ದೇನೆ ಎಂದರೆ, ಉಗ್ರಗಾಮಿಗಳು ಸತ್ತುಹೋದಾಗಲೂ ಅವರ ಶವದ ಮೆರವಣಿಗೆ ಮಾಡಿ ಅದರ ಲಾಭ ಪಡೆದುಕೊಂಡ ಘಟನೆಗಳು ಕೂಡ ಗೊತ್ತಿವೆ. ಹಾಗೆ,

ಗೊತ್ತಿರುವುದರಿಂದಲೇ ಈ ಮಾತನ್ನು ಹೇಳುತ್ತಿದ್ದೇನೆ, ಹಾಗೆ, ಗುಂಡು ಹಾರಿಸಿಕೊಂದರೆ, ಅದರ ಲಾಭ ಪಡೆದುಕೊಳ್ಳಲು ಯಾವ ಯಾವ ಶಕ್ತಿಗಳು ಪ್ರಯತ್ನ ಮಾಡುತ್ತವೆ. ಈ ರೀತಿಯ ಶಕ್ತಿಗಳ ಕಾರಣದಿಂದಾಗಿ ಬರೀ ಭಟ್ಕಳ ಮಾತ್ರವಲ್ಲ, ಇಡೀ ದೇಶ ಸೂಕ್ಷ್ಮವಾಗುತ್ತಿದೆ. ಹಾಗಾಗಿ, ವಿಷಯವನ್ನು ಗಂಭೀರವಾಗಿ ತೆಗೆದುಕೊಳ್ಳಬೇಕು. ಇದನ್ನು ಗಂಭೀರವಾಗಿ ತೆಗೆದುಕೊಂಡು ಕಠಿಣ ಕ್ರಮ ಕೈಗೊಳ್ಳಬೇಕು ಎನ್ನತಕ್ಕಂಥ ಆಗ್ರಹವನ್ನು ತಮ್ಮ ಮೂಲಕ ಸರ್ಕಾರಕ್ಕೆ ಮಾಡುತ್ತೇನೆ.

ಉಪಾಧ್ಯಕ್ಷರು : ಈಗ ಗೋಪಾಲ್ ಪೂಜಾರಿಯವರು.

ಶ್ರೀ ತನ್ವೀರ್ ಸೇಠ್ (ನರಸಿಂಹರಾಜ) : ಮಾನ್ಯ ಉಪಾಧ್ಯಕ್ಷರೇ, ಮಾನ್ಯ ಸದಸ್ಯರು ಮಾತನಾಡುವಾಗ ಒಂದು ಮಾತನ್ನು ಹೇಳಿದರು. 'ಉಗ್ರಗಾಮಿಗಳಿಗೆ ಯಾವ ಜಾತಿ ಇಲ್ಲ, ಯಾವ ಧರ್ಮ ಇಲ್ಲ,' ಅವರು ಯಾರಾದರೂ ಇರಲಿ, ರೋಷನ್ ಬೇಗ್‌ರವರು ಹೇಳಿರುವಂಥ ಮಾತು ಏನೇ ಆಗಿರಲಿ. ಆದರೆ ಶವವನ್ನಿಟ್ಟುಕೊಂಡು ರಾಜಕಾರಣ ಮಾಡುವಂಥ ಸಂಸ್ಕೃತಿ ನಮಗ್ಯಾರಿಗೂ ಇಲ್ಲ. ಅವರು ಹೇಳಿದ ಆ ಮಾತು ಏನಿದೆ, ಅದನ್ನು ದಯವಿಟ್ಟು ಕಡತದಿಂದ ತೆಗೆದುಹಾಕಬೇಕಾಗುತ್ತದೆ.

ಶ್ರೀ ಹೆಚ್.ಡಿ. ಬಸವರಾಜು : ಅದು ನಿಮಗೆ ಅನ್ವಯವಾಗುತ್ತದೆ ಎಂದು ಏಕೆ ಅಂದುಕೊಳ್ಳಬೇಕು.

ಉಪಾಧ್ಯಕ್ಷರು : ಗೋಪಾಲ್ ಪೂಜಾರ್‌ರವರೇ, ನೀವು ಮಾತನಾಡಿ.

ಶ್ರೀ ಹೆಚ್.ಡಿ. ಬಸವರಾಜು : ಮಾನ್ಯ ಉಪಾಧ್ಯಕ್ಷರೇ, ಇದರಲ್ಲಿ ಒಂದು ಸ್ಪಷ್ಟತೆ ಬರಬೇಕು. ಇದು ನಿಜವಾಗಲೂ ಅವರಿಗೆ ಅನ್ವಯವಾಗುತ್ತದೆಯೇ ಎನ್ನುವುದು ಸ್ಪಷ್ಟವಾಗಬೇಕು. ಅನ್ವಯವಾಗುತ್ತದೆ ಎನ್ನುವುದಾದರೆ ಕಡತದಿಂದ ತೆಗೆಸಿ, ಬೇಡ ಎನ್ನುವುದಿಲ್ಲ. ಈ ಬಗ್ಗೆ ಮಾನ್ಯ ಸದಸ್ಯರು ಈ ಸದನದಲ್ಲಿ ಏನು ಹೇಳಿದ್ದಾರೆ, ಅದು ನಿಜವಾಗಲೂ ಅವರಿಗೆ ಅನ್ವಯವಾದರೆ ಕಡತದಿಂದ ತೆಗೆಸಿ, ಬೇಡ ಎನ್ನುವುದಿಲ್ಲ. ಅನ್ವಯವಾಗುವುದಿಲ್ಲ ಎಂದಾದರೆ ಅದನ್ನು ಕಡತದಿಂದ ತೆಗೆಸುವುದು ಬೇಡ. ನಿಮಗೆ ಅನ್ವಯವಾಗುತ್ತದೆ ಎಂದಾದರೆ ಹೇಳಿ, ದಾಖಲು ಮಾಡಿ, ಎಲ್ಲಿ ಅನ್ವಯವಾಗಿದೆ ಎಂದು ದಾಖಲು ಮಾಡಿ. ಆಗ ನಾವು ಕಡತದಿಂದ ತೆಗೆಸೋಣ.

ಶ್ರೀ ಎ. ತನ್ವೀರ್ ಸೇಠ್ : ಎಲ್ಲೆಲ್ಲಿ ಭಯೋತ್ಪಾದಕರ ವಿಚಾರ ಬರುತ್ತದೆ.........

ಉಪಾಧ್ಯಕ್ಷರು : ತನ್ವೀರ್ ಸೇಠ್‌ರವರೇ ಕುಳಿತುಕೊಳ್ಳಿ.

ಶ್ರೀ ಹೆಚ್.ಡಿ. ಬಸವರಾಜು : ಶವವನ್ನು ಇಟ್ಟುಕೊಂಡು ಈ ದೇಶದಲ್ಲಿ ಎಷ್ಟು ಜನ ರಾಜಕಾರಣ ಮಾಡಿದ್ದಾರೆ ಎನ್ನುವುದು ನಮಗೆ ಗೊತ್ತಿದೆ. ಅದನ್ನು ಈ ಒಂದು ಸದನದಲ್ಲಿ ಬಹಿರಂಗಪಡಿಸುವುದು ಬೇಕಾಗಿಲ್ಲ.

ಉಪಾಧ್ಯಕ್ಷರು : ಆಯಿತು ಕುಳಿತುಕೊಳ್ಳಿ. ಗೋಪಾಲ್ ಪೂಜಾರ್‌ರವರೇ, ನೀವು ಮಾತನಾಡಿ.

ಶ್ರೀ ಎ. ತನ್ವಿರ್ ಸೇಠ್ : ಅಲ್ಪಸಂಖ್ಯಾತರನ್ನು ಗುರಿ ಮಾಡಿಕೊಂಡು ಹೇಳುತ್ತಿದ್ದಾರೆ.

ಉಪಾಧ್ಯಕ್ಷರು : ಆಯಿತು, ಕುಳಿತುಕೊಳ್ಳಿ, ಅವರಿನ್ನೂ ಉತ್ತರ ಕೊಡಬೇಕಾಗಿದೆ. ಗೋಪಾಲ್ ಪೂಜಾರ್‌ರವರೇ, ನೀವು ಮಾತನಾಡಿ.

ಶ್ರೀ ಕೆ. ಗೋಪಾಲ ಪೂಜಾರಿ (ಬೈಂದೂರು) : ಮಾನ್ಯ ಅಧ್ಯಕ್ಷರೆ, ಭಟ್ಕಳ ಕ್ಷೇತ್ರ ಏನಿದೆ ಇದು ನನ್ನ ಪಕ್ಕದ ಕ್ಷೇತ್ರವಾಗಿದೆ. ಅಲ್ಲಿ ಗಲಾಟೆ ಆಗತಕ್ಕಂಥ ವಿಷಯದ ಬಗ್ಗೆ ಮಾತನಾಡಲಿಕ್ಕೆ, ಬೆಳಕು ಚೆಲ್ಲಲಿಕ್ಕೆ ಇಷ್ಟಪಡುತ್ತೇನೆ. 3 ತಿಂಗಳ ಮುಂಚೆ ನನ್ನ ಕ್ಷೇತ್ರ ಶಿರೂರು ಮತ್ತು ಭಟ್ಕಳದಲ್ಲಿ ಒಂದು ವಾತಾವರಣ ಸೃಷ್ಟಿಯಾಯಿತು. ಬಹುಶಃ ಈ ವಾತಾವರಣದಲ್ಲಿ ನಾನು ಬಹಳಷ್ಟು ಸಾರಿ ಸಭೆ ನಡೆಸಿದ್ದೇನೆ. ಏಕೆಂದರೆ ಇಂಥ ಗಲಭೆ ವಾತಾವರಣ ಆಗುವುದಕ್ಕೆ ಮುಂಚೂಣಿಯಾಗಿ ಇದರ ಹಿಂದೆ ತಯಾರಿಯಾದಂಥ ವ್ಯವಸ್ಥೆಯಾಗಿದೆ. ನನ್ನ ಕ್ಷೇತ್ರದ ಪಕ್ಕದಲ್ಲಿ ನಾಲ್ಕು ಬಾರಿ ಇಂಥ ಘಟನೆಗಳು ಆದಾಗ ನಾನು ಬಹಳಷ್ಟು ಸಾರಿ. S.P. ಯವರನ್ನು ಕರೆದು ಸಭೆಯನ್ನು ಮಾಡಿದ್ದೇನೆ. ಆದರೆ ಭಟ್ಕಳದಲ್ಲಿ ಇದೇ ವಾತಾವರಣ ಇತ್ತು. ಇದರ ಹಿನ್ನೆಲೆಗೆ ಪ್ರಚೋದನಕಾರಿ ಶಕ್ತಿ ಇದೆ ಎನ್ನುವುದನ್ನು ನಾನು ಈ ಸದನದಲ್ಲಿ ಹೇಳಬೇಕಾಗುತ್ತದೆ. ಏಕೆಂದರೆ, ನನ್ನ ಕ್ಷೇತ್ರದಲ್ಲಿ ಕಳೆದ ನಾಲ್ಕು ಬಾರಿ ಇದರ ಹಿಂದೆ ಒಂದು ಶಕ್ತಿ ಇದ್ದು ಪ್ರಚೋದನೆ ಕೊಡತಕ್ಕಂಥ ಸಂದರ್ಭದಲ್ಲಿ ಅಲ್ಲಿನ S.P. ಬಂದು ಅದರ ಬಗ್ಗೆ ಬಹಳಷ್ಟು ಮುತುವರ್ಜಿ ವಹಿಸಿದರು. ಅದಾದಮೇಲೆ ನನ್ನ ಕ್ಷೇತ್ರದಲ್ಲಿ ಇಂಥ ಗಲಭೆಗಳು ಸ್ವಲ್ಪ ತಣ್ಣಗೆ ಆದಮೇಲೆ ಮತ್ತೆ ಪುನಃ ಭಟ್ಕಳದಲ್ಲಿ ಇದೇ ವ್ಯವಸ್ಥೆ ಮುಂದುವರಿಯತ್ತಾ ಹೋಗುತ್ತಿರುವ ಸಂದರ್ಭದಲ್ಲಿ ಮೊನ್ನೆ ಆದ ಘಟನೆ ಇದರ ಹಿನ್ನೆಲೆ ಮೂರು ತಿಂಗಳ ಮುಂಚಿತವಾಗಿ ಇದಕ್ಕೆ ಹಿನ್ನೆಲೆ ತಯಾರಿಯಾಗಿದೆ. ಈ ಮಾತನ್ನು ಏಕೆ ಹೇಳುತ್ತೇನೆಂದರೆ, ಶಿರೂರಿನಲ್ಲಿ ಮತ್ತು ಭಟ್ಕಳದಲ್ಲಿ ಅಕ್ಕಪಕ್ಕದಲ್ಲಿ ಇರುವಂಥ ಒಂದು ವ್ಯವಸ್ಥೆ ಭಟ್ಕಳದಲ್ಲಿ ಗಲಾಟೆಯಾಗಿ ಅದರ ಪರಿಣಾಮ ಶಿರೂರು ಮೇಲೆ ಬೀಳುತ್ತದೆ. ಶಿರೂರಿನಲ್ಲಿ ಇಂಥ ಗಲಾಟೆಯಾದರೆ ಅದು ಭಟ್ಕಳದ ಮೇಲೆ ಬೀಳುವಂಥ ವ್ಯವಸ್ಥೆ ಮುಂಚಿನಿಂದಲೂ ಆಗುತ್ತಾ ಬರುತ್ತಿತ್ತು. ಈ ಗಲಭೆ ಆದಮೇಲೆ ಬಹುಶಃ ನನ್ನ ಕ್ಷೇತ್ರದ ಮೀನುಗಾರರು ಏನಿದ್ದಾರೆ, ಅವರು ಮಲ್ಪೆಯಲ್ಲಿ ಮೀನು ಹಿಡಿಯುವುದಕ್ಕೆ ಹೋಗಿದ್ದರು. ಅಲ್ಲಿ ಮುಸುಕು ಹಾಕಿ 6 ಜನರಿಗೆ 'ನೀವು ಶಿರೂರಿನವರಾ' ಎಂದು ಕೇಳಿ ಹೊಡೆದಿದ್ದಾರೆ. ನನ್ನ ಕ್ಷೇತ್ರದ ಮೀನುಗಾರರು ಮಲ್ಪೆ ಬಂದರಿಗೆ ಹೋದರೆ ನೀವು ಶಿರೂರಿನವರಾ ಎಂದು ಕೇಳಿ ಮುಸುಕು ಹಾಕಿ ಬಂದು ಹೊಡೆದಿರುವಂಥ ಪರಿಸ್ಥಿತಿ ಅಲ್ಲಿ

ಉದ್ಭವವಾಗಿದೆಯೆಂದರೆ ಇದು ಯಾವ ಹಂತಕ್ಕೆ ಬಂದು ಮುಟ್ಟಿದೆ ಎನ್ನುವುದನ್ನು ಅರ್ಥಮಾಡಿಕೊಳ್ಳಬೇಕಾಗುತ್ತದೆ. ನಾವು ಬಂದ್ ಕರೆ ಕೊಡಲಿಲ್ಲ ಎನ್ನುವ ಮಾತನ್ನು ಬಹುಶಃ ನನ್ನ ಮಿತ್ರರು ಹೇಳಿದರು. ಈ ಸದನಕ್ಕೆ ತಪ್ಪು ಮಾಹಿತಿ ಹೋಗಬಾರದು. ಏಕೆಂದರೆ, ವಿಶ್ವ ಹಿಂದೂ ಪರಿಷತ್ ಮೊದಲು ಬಂದ್‌ಗೆ ಕರೆ ಕೊಟ್ಟಿತ್ತು. ಅದಾದಮೇಲೆ ಬಂದ್‌ಅನ್ನು ವಾಪಸ್ಸು ತೆಗೆದುಕೊಂಡರು. ಆದರೆ ಅದು ಒಂದು ದ್ವಂದ್ವ ರೀತಿ. ಯಾವ ಸರ್ಕಾರ ಇದೆ, ನಾವು ಬಂದ್ ಕರೆ ಕೊಟ್ಟರೆ ನಮ್ಮ ಸರ್ಕಾರದ ಮೇಲೆ ಪರಿಣಾಮ ಬೀಳುತ್ತದೆ ಎನ್ನುವ ದೃಷ್ಟಿಯಿಂದ ಆ ಬಂದ್ ಕರೆಯನ್ನು ವಾಪಸ್ಸು ತೆಗೆದುಕೊಂಡಿರುವ ಹಿನ್ನೆಲೆ, ಹಿನ್ನೆಲೆಯಾಗಿ ಬಂದ್ ಅನ್ನು ಮಾಡತಕ್ಕಂಥ ವ್ಯವಸ್ಥೆ ಇವರ ಸಂಘಟನೆಯಿಂದ ಆಗಿದೆ. ನಾನು ಅಲ್ಲಿ ಶಾಸಕನಾಗಿದ್ದಾಗ ನನ್ನ ಕ್ಷೇತ್ರದಲ್ಲಿ ಜಬರ್‌ದಸ್ತಾಗಿ ಬಂದು ಮಾಡಲಿಕ್ಕೆ ಹೋದಂಥ ಪರಿಸ್ಥಿತಿಯನ್ನು ಇವರು ಹಿನ್ನೆಲೆಯಾಗಿ ಮಾಡಿದ್ದಾರೆ. ಇವತ್ತು ಬಂದ್‌ಗೆ ಕರೆ ಕೊಡಲಿಲ್ಲ,ಇದು ದ್ವಂದ್ವ ನೀತಿ. ಇದು ಆಗಬಾರದು. ಕಾನೂನನ್ನು ಕೈಗೆತ್ತಿಕೊಂಡು ಅಲ್ಲಿಗೆ ರಕ್ಷಣೆ ಕೊಡತಕ್ಕಂಥ ಕೆಲಸ ಸರ್ಕಾರದ್ದಾಗಿದೆ. ಅದೇ ಸರ್ಕಾರದ ವತಿಯಿಂದ ತನ್ನ ಪರವಾಗಿ ಇರತಕ್ಕಂಥ ಕೆಲವು ಸಂಘಟನೆಗಳು ಇಂಥ ಬಂದ್‌ಗೆ ಕರೆಯನ್ನು ಕೊಟ್ಟರೆ ಕಾನೂನನ್ನು ಕೈಗೆತ್ತಿಕೊಂಡ ಹಾಗೆ ಆಗುತ್ತದೆ. ಇದು ಆಗಬಾರದು. ಯಾವುದೇ ಒಂದು ಕ್ಷೇತ್ರದ ಜನತೆ ಎಲ್ಲಿಯಾದರೂ ಮೀನು ಹಿಡಿಯಬಹುದು. ಆದರೆ ಅವರಿಗೆ ರಕ್ಷಣೆ ಕೊಡತಕ್ಕಂಥ ಕೆಲಸ ಸರ್ಕಾರದಿಂದ ಆಗಬೇಕು. ಇವತ್ತು ಭಟ್ಕಳದಲ್ಲಿ ಗಿದ್ದು ಇದೇ ಕತೆ. ಭಟ್ಕಳದಲ್ಲಿ ಏನಾಗುತ್ತಿದೆ ಇದರ ಹಿಂದೆ ಒಂದು ಶಕ್ತಿ ಇದೆ. ಇವತ್ತು ಪುರಸಭೆಯೆಂದು ಹೇಳುತ್ತಾರೆ, ಬೇರೆ ಬೇರೆ ಸಂಘಟನೆಗಳ ಬಗ್ಗೆ ಹೇಳುತ್ತಾರೆ. ತಿಮ್ಮಪ್ಪನಾಯಕರು ಸತ್ತಾಗ ಡಿ.ಸಿ.ಎಂ. ರವರೇನು ಉತ್ತರ ಕೊಟ್ಟಿದ್ದಾರೆ, ಅದರ ಹಿನ್ನೆಲೆಯನ್ನು ಬೇಕಾದರೆ ತೆಗೆದು ನೋಡಿ. ಬಹುಶಃ ಅಲ್ಲಿಯೂ ಸರಿಯಾದ ಮಾಹಿತಿಯನ್ನು ಅವರಿಗೆ ಕೊಡದೆ ಇರುವುದರಿಂದ ಬಹುಶಃ ಇಂಥ ಘಟನೆಗಳು ಪರಿವರ್ತನೆಯಾಗಿ ಅದು ಬೇರೆ ದಾರಿಯಲ್ಲಿ ಹೋಗುವಂಥ ಪರಿಸ್ಥಿತಿ ಉದ್ಭವವಾಗುತ್ತದೆ. ಇದು ಆಗಬಾರದು. ಅಲ್ಲಿಯ ನಿಜ ಸಂಗತಿಯನ್ನು ಕೂಲಂಕಷವಾಗಿ ತನಿಖೆ ಮಾಡಬೇಕಾಗುತ್ತದೆ. ಇಲ್ಲದಿದ್ದರೆ ಏನು ಪರಸಭೆಯ ಮೇಲೆ ಅಥವಾ ಬೇರೆ ಬೇರೆ ಸಂಘಟನೆಗಳ ಮೇಲೆ ಗೂಬೆ ಕೂರಿಸತಕ್ಕ ಕೆಲಸವಾದರೆ ಇದು ಸದನಕ್ಕೆ ತಪ್ಪು ಮಾಹಿತಿಯನ್ನು ಕೊಟ್ಟು ಕಾನೂನನ್ನು ಜನರ ಭಾವನೆಯನ್ನು ಬೇರೆ ಕಡೆಗೆ ವರ್ಗಾವಣೆ ಮಾಡತಕ್ಕ ಕೆಲಸವಾಗುತ್ತಿದೆ. ಇದು ಆಗಬಾರದು. ನಿರಂತರವಾಗಿ ನನ್ನ ಕ್ಷೇತ್ರದಲ್ಲಿ ಏನಾಗುತ್ತಿದೆ, ಇಂಥ ಶಕ್ತಿಗಳೇನಿವೆ, ಗಲಭೆಯನ್ನು ಮಾಡತಕ್ಕ ವ್ಯವಸ್ಥೆ ನನ್ನ ಕ್ಷೇತ್ರದಲ್ಲಿ ಆಗುತ್ತಿದೆ. ನಾನು ಇದರ ಬಗ್ಗೆ ಬಹಳಷ್ಟು ಸಾರಿ ಸಭೆಯನ್ನು ಕರೆದಿದ್ದೇನೆ. ಅಧಿಕಾರಿಗಳು

ಅದರ ಬಗ್ಗೆ ಕಾನೂನು ರೀತ್ಯ ಕ್ರಮವನ್ನು ಕೈಗೊಳ್ಳಬೇಕೆಂದು ಈವಾಗಲೂ ಹೇಳುತ್ತೇನೆ. ಬಹುಶಃ ಭಟ್ಕಳದ ಗಲಾಟೆಯ ಹಿನ್ನೆಲೆ, ನನ್ನ ಕ್ಷೇತ್ರದಲ್ಲಾಗತಕ್ಕ ಸಮಸ್ಯೆ ಇದರ ಪರದೆಯ ಹಿಂದೆ ಒಂದು ಶಕ್ತಿ ಇದೆ. ಈ ಪರದೆಯ ಹಿಂದೆ ಯಾವ ಶಕ್ತಿ ಇದೆ ಎನ್ನುವುದನ್ನು ತಾವು ನೋಡಬೇಕು. ನಿಮ್ಮ ಕೈಯಲ್ಲಿ ಸರ್ಕಾರವಿದೆ. ಈ ಬಗ್ಗೆ ಇವತ್ತು ನೀವು ಸರಿಯಾದ ತನಿಖೆಮಾಡಿ. ಯಾರು ಈ ಪರದೆಯ ಹಿಂದೆ ಇದ್ದಾರೆ, ಯಾವ ಶಕ್ತಿ ಇದೆಯೋ ಅವರಿಗೆ ಶಿಕ್ಷೆಯಾಗಬೇಕಾಗುತ್ತದೆ. ಅವರನ್ನು ಜೈಲಿಗೆ ಕಳುಹಿಸತಕ್ಕ ಕೆಲಸವನ್ನು ನೀವು ಮಾಡಿದರೆ ಮಾತ್ರ ಈ ಗಲಭೆಗಳು ನಿಲ್ಲುತ್ತವೆ. ಬಹುಶಃ ನಾಲ್ಕು ತಿಂಗಳಿನಿಂದ ನನ್ನ ಕ್ಷೇತ್ರದಲ್ಲಿ ಈ ವ್ಯವಸ್ಥೆಗಳು ಆಗುತ್ತಿವೆ. ಮೀನುಗಾರರಿಗೆ ಮಲ್ಪೆಯಲ್ಲಿ ರಕ್ಷಣೆ ಕೊಡತಕ್ಕ ಕೆಲಸವಾಗಬೇಕು. ಇಂಥ ಬಂದ್ ಕರೆಗಳನ್ನು ಕಡಿಮೆ ಮಾಡಿ, ಜಬರ್ದಸ್ತಾಗಿ ಬಂದ್ ಮಾಡತಕ್ಕದ್ದು ಆಗಬಾರದು. ಶಾಲಾ ಮಕ್ಕಳಿಗೆ ಇದರಿಂದ ಏನು ಅನ್ಯಾಯವಾಗಿದೆ ಅದರ ಬಗ್ಗೆ ಕೂಲಂಕುಷವಾಗಿ ತನಿಖೆಯಾಗಿ ನ್ಯಾಯವನ್ನು ಒದಗಿಸಿಕೊಡಬೇಕು. ಈ ಭಟ್ಕಳದ ಗಲಭೆ ಏನಿದೆ ಇದು ಪುನರಾವರ್ತನೆಯಾಗಬಾರದು. ಜನರ ಆಸೆ ಆಕಾಂಕ್ಷೆಗಳೇನಿವೆ, ಅದಕ್ಕೆ ಈ ಸರ್ಕಾರ ಸ್ಪಂದಿಸಬೇಕು. ಯಾರು ಏನು ತಪ್ಪು ಮಾಡಿದ್ದಾರೆ ಅವರಿಗೆ ಶಿಕ್ಷೆಯಾಗಬೇಕು ಎಂದು ನಾನು ಈ ಸದನದ ಮೂಲಕ ಸರ್ಕಾರವನ್ನು ಒತ್ತಾಯಿಸುತ್ತೇನೆ.

ಉಪಾಧ್ಯಕ್ಷರು : ಈಗ ಮಾನ್ಯ ಉಪಮುಖ್ಯಮಂತ್ರಿಗಳಿಂದ ಉತ್ತರ.

(ಗೊಂದಲ)

ಉಪಾಧ್ಯಕ್ಷರು : ಇನ್ನೇನು? ಭಟ್ಕಳಕ್ಕೆ ಸಂಬಂಧಪಟ್ಟಿರುವವರು ಮಾತನಾಡಿದ್ದಾರೆ. ಇನ್ನೂ ಎಷ್ಟು ಹೊತ್ತು ಮಾತನಾಡಬೇಕು? ಇನ್ನೂ ಪ್ರಶ್ನೋತ್ತರ ಇದೆ, calling attention ಇದೆ.

(ಗೊಂದಲ)

ಶ್ರೀ ಬಿ.ಆರ್. ಪಾಟೀಲ್ : ನನಗೆ ಮಾತನಾಡಲು ಎರಡು ನಿಮಿಷವಾದರೂ ಅವಕಾಶ ಕೊಡಬೇಕು.

(ಗೊಂದಲ)

ಉಪಾಧ್ಯಕ್ಷರು : ಮಾನ್ಯ ಬಸವರಾಜ ರಾಯರೆಡ್ಡಿಯವರು ಎರಡು ನಿಮಿಷ ಮಾತನಾಡಿ ಮುಗಿಸಿಬಿಡಲಿ. ರಾಯರೆಡ್ಡಿಯವರೆ, ತಾವು ಐದು ನಿಮಿಷದಲ್ಲಿ ಮುಗಿಸಿ.

ಶ್ರೀ ಬಸವರಾಜ ರಾಯರೆಡ್ಡಿ : ನಾನು ಎರಡು ನಿಮಿಷದಲ್ಲಿ ಮುಗಿಸುತ್ತೇನೆ.

ಉಪಾಧ್ಯಕ್ಷರು : ನೀವು ಮಧ್ಯದಲ್ಲಿ ಜಗಳದ ಮಾತುಗಳನ್ನು ಉಪಯೋಗಿಸಬೇಡಿ.

ಶ್ರೀ ಬಸವರಾಜ ರಾಯರೆಡ್ಡಿ : ನಾನು facts ಅನ್ನು ಹೇಳುತ್ತಿದ್ದೇನೆ. ನಾನು ಜಗಳದ ಮಾತುಗಳನ್ನು ಮಾತನಾಡುತ್ತಿಲ್ಲ. Facts ಅನ್ನು ಹೇಳಿದರೆ ಜಗಳದ ಮಾತು ಎಂದು ಭಾವಿಸಿಕೊಳ್ಳುವುದಾದರೆ ಹೇಗೆ?

ಉಪಾಧ್ಯಕ್ಷರು : ಆ ಕಡೆಯವರೂ ಕೆಲವರು ಇದ್ದಾರೆ, ಈ ಕಡೆಯವರೂ ಕೆಲವರು ಇದ್ದಾರೆ. ಮಾತಿನಲ್ಲಿ ಯಾವುದೋ ಒಂದನ್ನು ಸೇರಿಸಿಕೊಂಡುಬಿಡುವುದು ಜಗಳಕ್ಕೆ ಅವಕಾಶ ತೆಗೆದುಕೊಳ್ಳುವುದು! ತಾವು ಮಾತನಾಡಿ.

ಶ್ರೀ ಬಸವರಾಜ ರಾಯರೆಡ್ಡಿ (ಯಲಬುರ್ಗಾ) : ಮಾನ್ಯ ಉಪಾಧ್ಯಕ್ಷರೆ, ಈ ನೂತನವಾದಂಥ ಸರ್ಕಾರ ಅಧಿಕಾರಕ್ಕೆ ಬಂದಮೇಲೆ Law and order situation ಗಂಭೀರವಾಗುತ್ತಿದೆ. ಇದು ಕೇವಲ ಭಟ್ಕಳದ ವಿಚಾರವಲ್ಲ. ಭಟ್ಕಳದ ವಿಚಾರವನ್ನು ಮಾತ್ರ ನಾನು ಇಲ್ಲಿ ಪ್ರಸ್ತಾಪ ಮಾಡುತ್ತಿಲ್ಲ. ರಾಜ್ಯದ ಪರಿಸ್ಥಿತಿಯ ಬಗ್ಗೆ ನಾವು ಕೂಲಂಕಷವಾಗಿ ವಿಚಾರ ಮಾಡಬೇಕಾಗುತ್ತದೆ. ಹೊಸ ಸರ್ಕಾರ ಅಧಿಕಾರಕ್ಕೆ ಬಂದಮೇಲೆ ಬೆಂಗಳೂರು ನಗರದಲ್ಲಿ ಕೊಲೆಗಳು, ಆ್ಯಸಿಡ್ ಧಾಳಿ.......

ಉಪಾಧ್ಯಕ್ಷರು : ಬೆಂಗಳೂರಿನದ್ದು ಏಕೆ? ಭಟ್ಕಳಕ್ಕೆ ಹೋಗಿ.

ಶ್ರೀ ಬಸವರಾಜ ರಾಯರೆಡ್ಡಿ : ರಾಜ್ಯಕ್ಕೆ ಸಂಬಂಧಪಟ್ಟ ವಿಚಾರವನ್ನು ನಾನು ಹೇಳುತ್ತಿದ್ದೇನೆ. ಅವರು ಕೊಯಮತ್ತೂರಿನ ವಿಚಾರ ಮಾತನಾಡುತ್ತಿದ್ದಾರೆ.

ಮಾನ್ಯ ಸದಸ್ಯರು : ನಿಮ್ಮ ಸರ್ಕಾರ ಇದ್ದಾಗ ಪಾಪ ಒಂದೇ ಒಂದು ಆ ರೀತಿ ಆಗಿಲ್ಲ ಅಲ್ಲವೆ!

ಶ್ರೀ ಬಸವರಾಜ ರಾಯರೆಡ್ಡಿ : ನಾನು ಆ ವಿಚಾರವನ್ನು ಈಗ ಮಾತನಾಡುತ್ತಿಲ್ಲ. ನೀವು ಅಧಿಕಾರಕ್ಕೆ ಬಂದಮೇಲೆ ಏನು ನಡೆಯುತ್ತಿದೆ ಎಂಬ ವಿಚಾರವನ್ನು ಹೇಳುತ್ತಿದ್ದೇನೆ. ಸತ್ಯವನ್ನು ಹೇಳಿದರೆ ಒಳ್ಳೆ ಕತೆಯಾಯಿತಲ್ಲಾ!

ಶ್ರೀ ಆರಗ ಜ್ಞಾನೇಂದ್ರ : ತಾವು ಮೂರು ತಿಂಗಳ ಹಿಂದಿನದನ್ನೂ ಮಾತನಾಡಿ.

ಶ್ರೀ ಬಸವರಾಜ ರಾಯರೆಡ್ಡಿ : ಅದರ ಬಗ್ಗೆಯೂ ಮಾತನಾಡೋಣ. ಅದರ ಬಗ್ಗೆ ಚರ್ಚೆ ಇಡಿ, ಮಾತನಾಡೋಣ. ಬಹಳ ಗಂಬೀರವಾಗಿ ಈ ಸರ್ಕಾರ ಚಿಂತನೆ ಮಾಡಬೇಕಾಗುತ್ತದೆ. ಕಳೆದ ವಾರ ಭಟ್ಕಳ ನಗರದಲ್ಲಿ ನಡೆದಂಥ ಕೋಮು ಗಲಭೆ ಬಗ್ಗೆ ಮಾತನಾಡುತ್ತಿದ್ದೇನೆ. ಭಟ್ಕಳ ನಗರದಲ್ಲಿ ಹಿಂದೂ ಮತ್ತು ಮುಸಲ್ಮಾನ್ ಹಾಗೂ ಬೇರೆ ಮತೀಯ ಜನಾಂಗದವರು ಸಾಕಷ್ಟು ಪ್ರಮಾಣದಲ್ಲಿದ್ದಾರೆ. ಭಟ್ಕಳದಲ್ಲೇನು ಈ ರೀತಿ ಕೋಮುಗಲಭೆಯಾಗುತ್ತದೆ, ಇದು ಹೊಸದೇನಲ್ಲ. ಹಿಂದೆ 1993ರಲ್ಲಿ ಇಂಥ ಒಂದು ಕೋಮುಗಲಭೆಯಾಗಿ ಸುಮಾರು 18 ಜನ ಸತ್ತಿದ್ದಾರೆ. ಮುಂದೆ ಅಲ್ಲಿಯ ಶಾಸಕರ ಕೊಲೆಯಾಗಿದೆ. ಈ ರೀತಿ ಹಲವಾರು ಪ್ರಕರಣಗಳು ಭಟ್ಕಳದಲ್ಲಿ ಎರಡು ಕೋಮುಗಳ ನಡುವೆ ಆಗುತ್ತಲೇ ಬಂದಿದೆ. ಈ

ವಿಚಾರದಲ್ಲಿ ಏನು ಭಟ್ಕಳದಲ್ಲಿ ಕಳೆದ ವಾರ ಕೋಮುಗಲಭೆ ಸಂಭವಿಸಿತು, ಇದಕ್ಕೆ ಕಾರಣಕರ್ತರು ಅಲ್ಲಿಯ ನಗರಸಭೆಯವರೆಂದು ಆ ಜಿಲ್ಲೆಯ ಬಿ.ಜೆ.ಪಿ. ಶಾಸಕರಾದಂಥ ಮಾನ್ಯ ಕಾಗೇರಿಯವರು ಹೇಳಿದ್ದಾರೆ. ಅವರು ಕಾರಣರೇ ಎಂಬುದು ಗೊತ್ತಾಗಬೇಕಾಗುತ್ತದೆ. ಮಾನ್ಯ ಉಪಮುಖ್ಯಮಂತ್ರಿಗಳಾದ ಶ್ರೀ ಯಡಿಯೂರಪ್ಪನವರು ಎರಡು ದಿವಸಗಳ ಹಿಂದೆ ಉಡುಪಿಯಲ್ಲಿ ಭಟ್ಕಳ ಐ.ಎಸ್.ಐ. ಕೇಂದ್ರ ಸ್ಥಾನ, ಈ ಗಲಭೆಯ ಹಿಂದೆ ಅವರ ಕೈವಾಡವಿರುವ ಗುಮಾನಿ ಇದೆಯೆಂದು ಹೇಳಿದ್ದಾರೆ. ಐ.ಎಸ್.ಐ. ಪಾಕಿಸ್ತಾನದ ಒಂದು ಗೂಢಾಚಾರ ಸಂಸ್ಥೆ. ನಮ್ಮ ದೇಶದಲ್ಲಿ ಹೇಗೆ Research and Analysis Wing, (RAW) ಇದೆ, ಅದೇ ರೀತಿ ಅಲ್ಲಿಯೂ ಕೂಡ ಒಂದು ಸಂಸ್ಥೆ ಇದೆ. ಪಾಕಿಸ್ತಾನಿ ಗೂಡಾಚಾರ ಸಂಸ್ಥೆಗಳ ಕೈವಾಡ ಇದೆಯೋ, ನಗರಸಭೆಯ ಕೈವಾಡವಿದೆಯೋ ಅಥವಾ ಕೋಮುಭಾವನೆಯ ಜನರ ಕೈವಾಡ ಇದೆಯೋ ಇವೆಲ್ಲಾ ವಿಚಾರಗಳು ಸ್ಪಷ್ಟವಾಗಿ ಗೊತ್ತಾಗಬೇಕಾಗಿದ್ದರೆ ಸರ್ಕಾರ ಇದನ್ನು ಸಿ.ಬಿ.ಐ.ಗೆ ವಹಿಸಬೇಕು. ಏಕೆಂದರೆ, ಉಪಮುಖ್ಯಮಂತ್ರಿಗಲು ಹೇಳಿದಂತೆ ಐ.ಎಸ್.ಐ. ಬಗ್ಗೆ ವಿಚಾರಣೆ ಮಾಡಲು ನಿಮ್ಮ ಕಡೆಯಿಂದ ಆಗುವುದಿಲ್ಲ. ರಾಜ್ಯ ಸರ್ಕಾರಕ್ಕೆ ಕೆಲವು limitations ಇವೆ. ಇದಕ್ಕೆ Interpol, International Police ನ ಸಹಾಯ ತೆಗೆದುಕೊಳ್ಳುವ ಅವಶ್ಯಕತೆ ಇದೆ. ಹೀಗಾಗಿ ನೀವು ಕೇಂದ್ರ ಸರ್ಕಾರವನ್ನು approach ಮಾಡಬೇಕಾಗುತ್ತದೆ. ಬೇರೆ ಸರ್ಕಾರಗಳನ್ನು approach ಮಾಡಬೇಕಾಗುತ್ತದೆ.

ಈ ಹಿನ್ನೆಲೆಯಲ್ಲಿ ಸ್ಪಷ್ಟವಾಗಿ ನಾನು ಹೇಳಲಿಕ್ಕೆ ಇಚ್ಛೆಪಡುತ್ತೇನೆ, ತಾವು ದಯವಿಟ್ಟು ಸಿಬಿಐ ಎನ್‌ಕ್ವಯರಿಯನ್ನು ಒಪ್ಪಿಕೊಳ್ಳಿರಿ ಎನ್ನುವಂಥ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ. ಮತ್ತು ಇದಾದಮೇಲೆ, ಈ ಸರ್ಕಾರದಲ್ಲಿ, ಕ್ಯಾಬಿನೆಟ್‌ನಲ್ಲಿ ಸಾಮರಸ್ಯತೆ ಇರಬೇಕಾಗುತ್ತದೆ. ನನಗೆ ಗೊತ್ತಾದ ಮಟ್ಟಿಗೆ, ಈಗಾಗಲೇ ಈ ಸರ್ಕಾರದಲ್ಲಿ ಸಾಮರಸ್ಯವಿಲ್ಲ. ಮುಖ್ಯಮಂತ್ರಿಗಳು ಒಂದು ತರಹ ಹೇಳಿಕೆ ಕೊಡುತ್ತಾರೆ, ಉಪ ಮುಖ್ಯಮಂತ್ರಿಗಳು ಒಂದು ತರಹ ಹೇಳಿಕೆ ಕೊಡುತ್ತಾರೆ. ಮಾನ್ಯ ಮುಖ್ಯಮಂತ್ರಿಗಳು ಈ ಸಂಜೆ ಪತ್ರಿಕೆಯಲ್ಲಿ ಸ್ಪಷ್ಟವಾಗಿ ಹೇಳಿದ್ದಾರೆ. 'ಭಟ್ಕಳದಲ್ಲಿ ನಡೆದ ಕೋಮು ಗಲಭೆ ಪ್ರಕರಣಕ್ಕೂ ಐಎಸ್‌ಐಗೂ ಯಾವುದೇ ಸಂಬಂಧವಿಲ್ಲ, ಇದು ರಾಜಕೀಯ ಕಿಡಿಗೇಡಿಗಳ ಕೃತ್ಯ' ಎಂದು ಹೇಳಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳು ಗೃಹ ಇಲಾಖೆಯನ್ನು ಹೊಂದಿದ್ದಾರೆ. ನಿನ್ನೆಯ ಪತ್ರಿಕೆಯಲ್ಲಿ ಸ್ಪಷ್ಟವಾಗಿ ಹೇಳಿದ್ದಾರೆ. ಗೃಹ ಇಲಾಖೆ ಅವರ ವಶದಲ್ಲಿದೆ. ಬಹುತೇಕ ಅವರು ಈ ಚರ್ಚೆಯಲ್ಲಿ ಭಾಗವಹಿಸಿದ್ದರೆ, ಸದನದಲ್ಲಿದ್ದಿದ್ದರೆ ಬಹಳ ಚೆನ್ನಾಗಿರುತ್ತಿತ್ತು. ನನಗನ್ನಿಸುವ ಮಟ್ಟಿಗೆ, ಇಲ್ಲಿ ಏನು ಅವರ ದ್ವಂದ್ವ ಹೇಳಿಕೆಗಳಿವೆ, ಇದಕ್ಕೆ ಮತ್ತೆ ಚರ್ಚೆಯಾಗುತ್ತದೆನ್ನುವುದು ಗೊತ್ತಾಗಿಯೇ ಬಹುತೇಕ ಇಬ್ಬರೂ ಬೇರೆ ಕಡೆ

ಹೋಗಿದ್ದಾರೆ. ಅವರು ಇರಬೇಕಾಗಿತ್ತು. ಮಾನ್ಯ ಉಪ ಮುಖ್ಯಮಂತ್ರಿಗಳು ಐಎಸ್‌ಐ ಕೈವಾಡ ಎನ್ನುವಂಥ ಮಾತನ್ನು ಹೇಳಿದ್ದಾರೆ. ನಿಮಗೆ ಯಾರು ಹೇಳಿದರು? ಮಾನ್ಯ ಮುಖ್ಯಮಂತ್ರಿಗಳು ಹೇಳಿಲ್ಲವೆಂದು ಹೇಳಿದ ಮೇಲೆ ನಿಮಗೆ ಯಾರು ಹೇಳಿದರು? ಮಾನ್ಯ ಡಿ.ಆರ್. ಪಾಟೀಲರು ಹೇಳಿದ ಹಾಗೆ, ಇವರ ಕಾರ್ಯಕರ್ತರೇ ಹೇಳಿರಬೇಕು, ಹೇಳಿರಲೇಬೇಕು. ಅದಕ್ಕೆ ಇದರ ಬಗ್ಗೆ ಸ್ಪಷ್ಟವಾಗಿ ವಿಚಾರಣೆಯಾಗಬೇಕಾದರೆ ಸಿಬಿಐ ಒಂದೇ ಇದರಿಂದ ಮಾತ್ರ ಸಾಧ್ಯ. ಈ ಹಿನ್ನೆಲೆಯಲ್ಲಿ ಏನು ಇವತ್ತು ಈ ದ್ವಂದ್ವ ಹೇಳಿಕೆಗಳು ಮತ್ತು ಅಲ್ಲಿ ನಡೆಯುತ್ತಿರುವಂಥ ಗಲಭೆಗಳ ಬಗ್ಗೆ ಒಂದು ಸ್ಪಷ್ಟವಾದ ಚಿತ್ರಣ ಹೊರಗೆ ಬರಬೇಕು. ಏಕೆಂದರೆ, ಈ ಗಲಭೆಗಳೇನೂ ಹೊಸದಲ್ಲ. ನಾನು ಹೇಳಿದೆ, ಈಗಾಗಲೇ 1990ರ ದಶಕದಿಂದ ಅಲ್ಲಿ ಕೋಮು ಗಲಭೆಗಳು, ಇರಿತಗಳು ನಡೆಯುತ್ತಲೇ ಬಂದಿವೆ. ಹೀಗಾಗಿ, ಇದರ ವಿಚಾರಣೆಯನ್ನು ಸಿಬಿಐಗೆ ವಹಿಸಿಕೊಟ್ಟರೆ, ಅನುಕೂಲವಾಗುತ್ತದೆ ಮತ್ತು ಅದರ ಜೊತೆಗೆ ಈ ಸರ್ಕಾರ ಸ್ಪಷ್ಟವಾಗಿ ಇದರ ಹಿಂದೆ ಯಾರ್ಯಾರ ಕೈವಾಡ ಇದೆ, ಅವರನ್ನು ಅರೆಸ್ಟ್ ಮಾಡಿಸಬೇಕು. ಇವತ್ತಿನವರೆಗೂ ಕೂಡ ನೀವು ಒಬ್ಬರನ್ನೂ ಅರೆಸ್ಟ್ ಮಾಡಲಿಲ್ಲ. ಏಕೆ ಮಾಡಲಿಲ್ಲ? ಏಕೆ ಮಾಡಲಿಲ್ಲ ಎನ್ನುವುದನ್ನು ಹೇಳಬೇಕಾಗುತ್ತದೆ. ಅಲ್ಲಿ ಒಬ್ಬರ ಹತ್ಯೆಯಾಗಿದೆ. ಮತ್ತೆ ನಿನ್ನೆ ಒಬ್ಬ ಮುಸ್ಲಿಂ ಜನಾಂಗದ ಮೇಲೆ ಹಲ್ಲೆಯಾಗಿದೆ. ಸ್ಟಾಬಿಂಗ್ ಆಗಿದೆ. ನೋಡಿ, ಸತ್ತವರ ಬಗ್ಗೆ ನಾವೇನೂ ಮಾಡುತ್ತಿಲ್ಲವಲ್ಲಾ. ಅದರ ಬಗ್ಗೆ ಎನ್‌ಕ್ವಯರಿಯಾಗಬೇಕೆಂದು ಹೇಳುತ್ತಿದ್ದೇವಲ್ಲಾ. ಎನ್‌ಕ್ವಯರಿಯಾಗಬೇಕು ಮತ್ತು ಅರೆಸ್ಟ್ ಮಾಡಬೇಕು.

ಶ್ರೀ ಆರಗ ಜ್ಞಾನೇಂದ್ರ : ಜಾತಿ ಹೇಳಲಿಲ್ಲವಲ್ಲಾ.

ಶ್ರೀ ಬಸವರಾಜ ರಾಯರೆಡ್ಡಿ : ಯಾರು ಅವರನ್ನು ಕೊಲೆಗೈದಿದ್ದಾರೆ, ಅವರನ್ನೇಕೆ ಅರೆಸ್ಟ್ ಮಾಡಲಿಲ್ಲ?

ಶ್ರೀ ಆರಗ ಜ್ಞಾನೇಂದ್ರ : ಹಲ್ಲೆಯಾದ ಬಗ್ಗೆ ಜಾತಿ ಹೇಳಿದಿರಲ್ಲಾ. ಸತ್ತವರ ಬಗ್ಗೆ ಹೇಳಿಬಿಡಿ ಹೋಗಲಿ.

(ಗೊಂದಲ)

ಶ್ರೀ ಬಸವರಾಜ ರಾಯರೆಡ್ಡಿ : ನಾನು ಹಾಗೇನೂ ಹೇಳಲಿಲ್ಲ.

ಶ್ರೀ ಆರಗ ಜ್ಞಾನೇಂದ್ರ : .... ಈ ರೀತಿಯೆಲ್ಲಾ ಗಲಭೆ ನಡೆಯಿತೆ?

ಶ್ರೀ ಬಸವರಾಜ ರಾಯರೆಡ್ಡಿ : ನಾನು ಹಾಗೇನೂ ಹೇಳಲಿಲ್ಲ. ನಾನೇನು ಹೇಳಿದೆ, ಅಲ್ಲಿ ಒಬ್ಬರು ನಾಯಕ್ ಎನ್ನುವವರ ಹತ್ಯೆಯಾಗಿದೆ. ಅವರನ್ನು ಇನ್ನೂವರೆಗೆ ಅರೆಸ್ಟ್ ಮಾಡಲಿಲ್ಲ. ಅರೆಸ್ಟ್ ಮಾಡಿ. ಮತ್ತೆ ನಿನ್ನೆ ಒಬ್ಬರು ಮುಸ್ಲಿಂ ಜನಾಂಗದ ಮೇಲೆ ಕೂಡ ಹಲ್ಲೆಯಾಗಿದೆ. ಅದರ ಬಗ್ಗೆಯೂ ಕೂಡ ನೀವು ಅರೆಸ್ಟ್ ಮಾಡಲಿಲ್ಲವೆಂದು ಎರಡು ವಿಚಾರಗಳನ್ನು ಹೇಳಿದೆ. ನಿಮಗೇನಾಗಿದೆ ಬಿಜೆಪಿಯವರಿಗೆ ಅಂದರೆ.........

(ಗೊಂದಲ)

ಶ್ರೀ ಹೆಚ್.ಡಿ. ಬಸವರಾಜು : ಆ ರೋಗ ಯಾರಿಗಿದೆ ಎನ್ನುವುದು ಸ್ಪಷ್ಟವಾಗಬೇಕು.

(ಗೊಂದಲ)

ಶ್ರೀ ಬಸವರಾಜ ರಾಯರೆಡ್ಡಿ : ಯಾರು ಇನ್‌ವಾಲ್ವ್ ಆದಂಥ ಅಧಿಕಾರಿಗಳಿದ್ದಾರೆ, ಆ ಅಧಿಕಾರಿಗಳ ಮೇಲೆ ಕ್ರಮ ತೆಗೆದುಕೊಳ್ಳಬೇಕು. ಇದು ಒಂದನೆಯದು.

ಶ್ರೀ ಹೆಚ್.ಡಿ. ಬಸವರಾಜು : ಅಲ್ಲ ಅಲ್ಲ, ಆ ರೋಗ ಯಾರಿಗಿದೆ ಎನ್ನುವುದು ಸ್ಪಷ್ಟವಾಗಬೇಕು.

(ಗೊಂದಲ)

ಶ್ರೀ ಬಸವರಾಜ ರಾಯರೆಡ್ಡಿ : ಅಪರಾಧಿಗಳು ಯಾವುದೇ ಪಕ್ಷಕ್ಕೆ ಸೇರಿರಲಿ, ಯಾವುದೇ ಜನಾಂಗಕ್ಕೆ ಸೇರಿರಲಿ, ಅವರನ್ನು ಅರೆಸ್ಟ್ ಮಾಡಬೇಕು. ಕಾನೂನು ಕಾನೂನೇ. ಇನ್ನು, ಮೂರನೆಯ ವಿಚಾರ, ಈಗ ಐಎಸ್ಐ, ಬಗ್ಗೆ ಮಾನ್ಯ ಉಪ ಮುಖ್ಯಮಂತ್ರಿಗಳೇ ಹೇಳಿದ್ದರಿಂದ, ಇದು ಈಗಾಗಲೇ ನಾನು ಹೇಳಿದಂತೆ, ಇದು ನಾಳೆ ಇಂಟರ್‌ಪೋಲ್‌ಗೆ ಸಂಬಂಧಪಟ್ಟ ವಿಚಾರವಾಗುತ್ತದೆ. ಹೀಗಾಗಿ, ಇದನ್ನು ಸಿಬಿಐಗೆ ವಹಿಸಿಕೊಡಬೇಕೆಂದು ನಾನು ಈ ಸಂದರ್ಭದಲ್ಲಿ ಒತ್ತಾಯವನ್ನು ಮಾಡುತ್ತೇನೆ.

ಉಪಾಧ್ಯಕ್ಷರು : ಮಾನ್ಯ ಪಾಟೀಲರೆ, ಈಗ ಇನ್ನೂ ಕ್ವೆಶ್ಚನ್ ಹವರ್ ಇದೆ. ಇದಾದನಂತರ, ಮತ್ತೆ ಕಾಲಿಂಗ್–ಅಟೆನ್‌ಷನ್ ಇದೆ. ಈಗ ಒಂದೈದು ನಿಮಿಷದಲ್ಲೇ ಮುಗಿಸಿಬಿಡಿ. ನೀವು ಟೈಂ ಇಟ್ಟುಕೊಳ್ಳಿ. ಇದಕ್ಕೆ ಸಂಬಂಧಪಟ್ಟ ಬೇರೆ ಯಾವುದಾದರೂ ವಿಷಯ ಇದ್ದರೆ ಹೇಳಿ.

ಶ್ರೀ ಬಿ.ಆರ್. ಪಾಟೀಲ್ (ಆಳಂದ್) : ಈಗ ಹೊಸ ಸರ್ಕಾರ ಬಂದ ಮೇಲೆ ಅವರು ಮಾತು ಕೊಟ್ಟಂತೆ ನಾವೆಲ್ಲಾ ನಿರೀಕ್ಷೆ ಮಾಡುತ್ತಿದ್ದೇವೆ, ಸರ್ಕಾರ ಕಾನೂನು ವ್ಯವಸ್ಥೆಯನ್ನು ಸರಿಯಾಗಿ ಪರಿ ಪಾಲನೆ ಮಾಡಿಕೊಂಡು, ಎಲ್ಲರನ್ನೂ ವಿಶ್ವಾಸದಲ್ಲಿ ತೆಗೆದುಕೊಂಡು ಹೋಗುತ್ತಾರೆಂದು ಸಂಪೂರ್ಣವಾಗಿ ವಿಶ್ವಾಸವಿಟ್ಟುಕೊಂಡಿದ್ದೇವೆ. ಮುಂದೆ ಕೂಡ ನಂಬಿಕೆ ಇಡುತ್ತೇವೆ. ಈ ಭಟ್ಕಳ ವಿಷಯದಲ್ಲಿ ಮಾನ್ಯ ದೇಶಪಾಂಡೆಯವರು, ಬಹಳ ನಿಷ್ಪಕ್ಷಪಾತವಾಗಿ ಒಂದು ರಾಜ್ಯದ ಕಾನೂನು ಮತ್ತು ಶಾಂತಿ ವ್ಯವಸ್ಥೆಯ ದೃಷ್ಟಿಯಿಂದ ಮತ್ತು ಅಲ್ಲಿಯ ಜನಜೀವನದ ದೃಷ್ಟಿಯಿಂದ ಬಹಳ ನಿಷ್ಪಕ್ಷಪಾತವಾಗಿ ಸದನದ ಹೊರಗಡೆ ಸರ್ಕಾರ ಇದರ ಬಗ್ಗೆ ಕಾಳಜಿ ವಹಿಸಿ ನಿಯಂತ್ರಣವನ್ನು ಮಾಡಬೇಕು. ಅಲ್ಲಿ ಜನರು ಸುಖದಿಂದ ಇರಬೇಕೆನ್ನುವ ಮಾತನ್ನು ಪ್ರಸ್ತಾಪ ಮಾಡಿದ ಮೇಲೆ ಅನೇಕ ಜನ

ವಿರೋಧ ಪಕ್ಷದಲ್ಲಿ ಮತ್ತು ಈ ಕಡೆ ಕುಳಿತಂತಹವರೆಲ್ಲಾ ಮಾತನಾಡಿ, ಧನಿಗೂಡಿಸಿದ್ದಾರೆ. ಆದರೆ, ನಮ್ಮ ಸ್ನೇಹಿತರಾದಂಥ ಕಾಗೇರಿಯವರು ಈ ಇಡೀ ಚರ್ಚೆಗೇ ಒಂದು ಹೊಸ ತಿರುವನ್ನು ಕೊಟ್ಟು, ಇದಕ್ಕೊಂದು ರಾಜಕೀಯ ಬಣ್ಣವನ್ನು ಬಳಿಯುವುದಕ್ಕೆ ಪ್ರಯತ್ನ ಮಾಡುವುದನ್ನು ನೋಡಿದರೆ ಇದೇನು ಗೊತ್ತಾಗುತ್ತದೆಂದರೆ, ಭಟ್ಕಳದಲ್ಲಿ ಆದಂಥ ಹತ್ಯೆ ಬಗ್ಗೆ, ಅಲ್ಲಿ ನಡೆಯತಕ್ಕಂಥ ಗಲಭೆಯ ಬಗ್ಗೆ ಇವರಿಗೇ ಕಾಳಜಿ ಅನ್ನಿಸುತ್ತಿಲ್ಲ. ಇದಕ್ಕೆ ರಾಜಕೀಯ ಬಣ್ಣ ಕೊಟ್ಟು ಈ ಇಡೀ ಚರ್ಚೆಯನ್ನು ಬೇರೆ ದಿಕ್ಕಿಗೆ ತೆಗೆದುಕೊಂಡು ಹೋಗುವಂಥ ಪ್ರಯತ್ನವನ್ನು ಇಲ್ಲಿ ನಮ್ಮ ಸ್ನೇಹಿತರು ಮಾಡಲಿಕ್ಕೆ ಪ್ರಯತ್ನ ಮಾಡುತ್ತಿದ್ದಾರೆ. ಮಾನ್ಯ ರಾಯರೆಡ್ಡಿಯವರು ಹೇಳಿದ ಹಾಗೆಯೇ, ಸರ್ಕಾರದಲ್ಲಿ ಗೊಂದಲವಿದೆ. ಸರ್ಕಾರದಲ್ಲಿ ಬಹಳ ಸ್ಪಷ್ಟವಾಗಿ ಗೊಂದಲವಿದೆ. ಮಾನ್ಯ ಮುಖ್ಯಮಂತ್ರಿಗಳು ಇದಕ್ಕೆ ರಾಜಕೀಯ ಪ್ರೇರಿತವೆಂದು ಹೇಳುತ್ತಾರೆ. ನಮಗೆ ಗೊತ್ತಾಗಬೇಕಾಗಿದೆ. ಯಾವ ರಾಜಕೀಯದಿಂದ ಇದಕ್ಕೆ ಪ್ರೇರಣೆ ಸಿಕ್ಕಿತು? ಯಾರ ಬೆಂಬಲ ಸಿಕ್ಕಿತು? ಯಾವ ರಾಜಕೀಯ ಪಕ್ಷದವರು ಇದಕ್ಕೆ ಪ್ರಚೋದನೆ ಮಾಡಿದರು ಎಂಬುದು ರಾಜ್ಯದ ಜನತೆಗೆ ಗೊತ್ತಾಗಲಿ. ಈ ತರಹ ಮುಗುಮ್ಮಾಗಿ ಹೇಳಿ. ಈ ರಾಜಕೀಯ ಪ್ರೇರಿತವೆಂದು ಹೇಳಿದ ಮೇಲೆ ಯಾವ ರಾಜಕೀಯ ಪಕ್ಷದ ಕೈವಾಡವಿದೆ? ಮಾನ್ಯ ಉಪ ಮುಖ್ಯಮಂತ್ರಿಗಳು ನೇರವಾಗಿ, ಬಹಳ ಸ್ಪಷ್ಟವಾಗಿ ಇದರಲ್ಲಿ ಐಎಸ್‌ಐ ಕೈವಾಡವಿದೆ ಎಂದು ಹೇಳಿದ್ದಾರೆ. ಏಕೆಂದರೆ, ಜಾಯಿಂಟ್ ರೆಸ್ಪಾನ್ಸಿಬಿಲಿಟಿ ಇರುವುದರಿಂದ ಅವರ ಮಾತನ್ನು ನಾನು ಅಲ್ಲಗಳೆಯುವುದಿಲ್ಲ. ಗೆಳೆಯ ರೋಷನ್‌ಬೇಗ್‌ರವರು ಹೇಳಿದ ಹಾಗೆ ಯಾರೇ ಇರಲಿ, ಅವರು ಯಾವುದೇ ಏಜೆನ್ಸಿಗೆ ಸಂಬಂಧಪಟ್ಟವರಾಗಿರಲಿ ಅವರ ಮೇಲೆ ಕ್ರಮ ಕೈಗೊಳ್ಳಬೇಕು. ಇಲ್ಲದಿದ್ದರೆ, ನಮ್ಮ ದೇಶ ಉಳಿಯುವುದಿಲ್ಲ. ಈ ದೇಶದ ಅಖಂಡತ್ವ ಉಳಿಯುವುದಿಲ್ಲ. ಐಕ್ಯತೆ ಉಳಿಯುವುದಿಲ್ಲ. ಇದರ ಬಗ್ಗೆ ನಾವೂ ಯಾರೂ ಬೇರೆ ಧ್ವನಿ ಎತ್ತಲಿಕ್ಕೆ ತಯಾರಿಲ್ಲ. ಆದರೆ, ಇವತ್ತು ಈ ಸರ್ಕಾರ ಬಂದ ಮೇಲೆ ಈ ಒಂದು ಭಟ್ಕಳ ಘಟನೆ ಒಂದು ವಿಚಿತ್ರವಾದ ವಾತಾವರಣ ನಿರ್ಮಾಣ ಮಾಡಲಿಕ್ಕೆ ಒಂದು ಕೆಟ್ಟ ಅವಕಾಶ ಮಾಡಿಕೊಟ್ಟಿರಿ. ಕೆಟ್ಟ ಅವಕಾಶವೆಂದು ಬಹಳ ವ್ಯಸನದಿಂದ ಎನ್ನುವ ಭಾಷೆಯನ್ನು ನಾನು ಬಳಸುತ್ತಿದ್ದೇನೆ. ಇವತ್ತು ಭಟ್ಕಳದಲ್ಲಿ ಇಂಥ ಒಂದು ಘಟನೆ, ಗಲಭೆ ನಡೆಯುತ್ತಿಲ್ಲ. ನಿರಂತರವಾಗಿ ಆ ಒಂದು ಕಡಲ ತೀರದಲ್ಲಿ ಇಂಥ ಘಟನೆಗಳು ನಡೆದುಕೊಂಡು ಬರುತ್ತಿವೆ. ಈಗ ಸುದೈವದಿಂದ ನೀವು ಅಧಿಕಾರಕ್ಕೆ ಬಂದಿದ್ದೀರಿ. ಅಧಿಕಾರ ನಿಮ್ಮ ಕೈಯಲ್ಲಿ ಇದೆ. ಯಾವ ಪಾಕಿಸ್ತಾನದ ಕೈವಾಡವಿದೆಯೋ ಅಥವಾ ಅಮೇರಿಕಾದ ಕೈವಾಡವಿದೆಯೋ? ಯಾವ್ಯಾವ ದೇಶದ ಕೈವಾಡವಿದೆ? ಯಾವ್ಯಾವ ರಾಜಕೀಯ ಪಕ್ಷಗಳ ಕೈವಾಡವಿದೆ, ಅದನ್ನೆಲ್ಲಾ

ದಯಮಾಡಿ ಸ್ಪಷ್ಟವಾಗಿ ಬಹಿರಂಗಪಡಿಸಿ ನಿಮ್ಮೆಲ್ಲರ ಜೊತೆಗೆ ನಾವು ಸಹಕಾರ ಮಾಡಲಿಕ್ಕೆ ತಯಾರಿದ್ದೇವೆ. ಇವತ್ತು ಗುಲಬರ್ಗದಲ್ಲಿ ಕೂಡ ಮೊನ್ನೆ ಒಬ್ಬ ಉಗ್ರವಾದಿ ಸೆರೆಯಾದರು. ನಾನು ಪೊಲೀಸರಿಗೆ ಅಭಿನಂದನೆ ಸಲ್ಲಿಸುತ್ತೇನೆ. ಬಹಳ ಒಳ್ಳೆಯ ಕೆಲಸ ಮಾಡಿದರು. ಏಕೆಂದರೆ, ನಮಗೂ ಕೂಡ ಆಶ್ಚರ್ಯವಾಯಿತು. ಗುಲಬರ್ಗಾದಲ್ಲಿ ಕೂಡ ಲಷ್ಕರ್-ಇ-ತೊಯ್ಬದವರ ಏಜೆಂಟ್ ಸಿಕ್ಕಿಕೊಂಡಿದ್ದು ನೋಡಿದರೆ ನಿಜವಾಗಿ ಕೂಡ ಪರಿಸ್ಥಿತಿ ಬಹಳ ಗಂಭೀರವಾಗಿದೆ. ಆದರೆ, ನಾನೊಂದು ಮಾತನ್ನು ಇಲ್ಲಿ ಹೇಳಲಿಕ್ಕೆ ಇಚ್ಛೆಪಡುತ್ತೇನೆ, ಇವತ್ತು ಬಿಜೆಪಿ ಮತ್ತು ಸೋ-ಕಾಲ್ಡ್ ಸೆಕ್ಯುಲರ್ ಜನತಾದಳ ಇವರಿಬ್ಬರೂ ಸೇರಿ ಅಧಿಕಾರಕ್ಕೆ ಬಂದಿದ್ದಾರೆ. ಒಂದೇನೋ ಜನರಲ್ಲಿ ಅನುಮಾನವಿದೆ. ನನಗೆ ಖಂಡಿತವಾಗಿ ಅನುಮಾನವಿದೆ. ಜನತೆಗೂ ಕೂಡ ಅನುಮಾನವಿದೆ. ಅದರಲ್ಲೇನೂ ವಾದವಿಲ್ಲ. ನಾನು ಅದಕ್ಕೇನೇ ಸೋ-ಕಾಲ್ಡ್ ಸೆಕ್ಯುಲರ್ ಜನತಾದಳ ಎಂದೆ ಹೇಳುತ್ತಿದ್ದೇನೆ. ಸೋ-ಕಾಲ್ಡ್ ಸೆಕ್ಯುಲರ್ ಜನತಾದಳ. ರಾಜ್ಯದಲ್ಲಿ ನಾಳೆ 12ನೇ ತಾರೀಖಿನ ದಿವಸ ಶ್ರೀಮಾನ್ ಅದ್ವಾನಿ ಸಾಹೇಬರು ತಮ್ಮ ಯಾತ್ರೆಯನ್ನು ಕರ್ನಾಟಕದಲ್ಲಿ ಪ್ರಾರಂಭ ಮಾಡಲಿಕ್ಕೆ ಹೊರಟಿದ್ದಾರೆ. ಹೊರಟಿಲ್ಲವೇ? ನಾನು ಸುಳ್ಳು ಹೇಳುತ್ತಿದ್ದೇನೆಯೇ?

ಶ್ರೀ ಹೆಚ್.ಡಿ. ಬಸವರಾಜು : ಎಲ್ಲಿಂದೆಲ್ಲಿಗೋ ಹೋಗುತ್ತಿದ್ದಾರೆ......

(ಗೊಂದಲ).......

ಇವತ್ತಾದಂಥ ಘಟನೆಗೆ ಸರಿಯಾದಂಥ ರೀತಿಯಲ್ಲಿ ತನಿಖೆಯಾಗಿ ತಪ್ಪಿತಸ್ಥರಿಗೆ ಶಿಕ್ಷೆಯಾಗಬೇಕಾಗಿದೆ. ಆದರೆ, ಅಡ್ವಾಣಿ ಮತ್ತು ಬೇರೆ ವಿಚಾರಕ್ಕೆ ಹೋದರೆ, ಈ ಸದನದಲ್ಲಿ ನಮಗೂ ಮಾತನಾಡಲು ಅವಕಾಶ ಕೊಡಿ. ಚರ್ಚೆ ಬೇರೆ ಕಡೆಗೆ ಹೋಗುತ್ತಿದೆ.

(ಗೊಂದಲ)

ಉಪಾಧ್ಯಕ್ಷರು : ಮಾನ್ಯ ಜಗದೀಶ್‌ಶೆಟ್ಟರ್‌ರವರೇ, ತಾವು ಕುಳಿತುಕೊಳ್ಳಿ, ಅವರು ಇನ್ನೂ ಎರಡು ನಿಮಿಷದಲ್ಲಿ ಮುಗಿಸುತ್ತಾರೆ.

(ಗೊಂದಲ)

ಉಪಾಧ್ಯಕ್ಷರು : ಮಾನ್ಯ ಬಸವರಾಜ್‌ರವರೆ, ತಾವು ಕುಳಿತುಕೊಂಡರೆ ಅವರು ಒಂದು ನಿಮಿಷದಲ್ಲಿ ಮುಗಿಸುತ್ತಾರೆ.

(ಗೊಂದಲ)

ಶ್ರೀ ಬಿ.ಆರ್. ಪಾಟೀಲ್ : ಈ ರಾಜ್ಯದಲ್ಲಿ ಶಾಂತಿ, ಸುವ್ಯವಸ್ಥೆ ಕಾನೂನನ್ನು ಕಾಪಾಡಿಕೊಂಡು ಹೋಗುವುದಕ್ಕೆ ಸೋ-ಕಾಲ್ಡ್ ಜಾತ್ಯಾತೀತ ಜನತಾದಳ ಮತ್ತು ಬಿ.ಜೆ.ಪಿ. ಯವರು ಒಂದು ಹೆಜ್ಜೆ ಮುಂದಾಗಬೇಕೆಂದು ನಾನು ಈ ಸಂದರ್ಭದಲ್ಲಿ ಆಗ್ರಹಿಸುತ್ತಿದ್ದೇನೆ.

ಉಪಾಧ್ಯಕ್ಷರು : ಮಾನ್ಯ ವಿರೋಧ ಪಕ್ಷದ ನಾಯಕರು ಏನಾದರೂ ಮಾತನಾಡುತ್ತೀರಾ?

ಶ್ರೀ ಎನ್. ಧರ್ಮಸಿಂಗ್ (ವಿರೋಧ ಪಕ್ಷದ ನಾಯಕರು) : ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಉಪಮುಖ್ಯಮಂತ್ರಿಯವರು ಇದಕ್ಕೆ ಉತ್ತರ ಕೊಡುವುದಕ್ಕೆ ರೆಡಿಯಾಗಿದ್ದಾರೆ. ಇದರಿಂದ ನಮಗೇನೂ ತೊಂದರೆ ಇಲ್ಲ. ಆದರೆ, ಇದು ಗೃಹ ಇಲಾಖೆಗೆ ಸಂಬಂಧಪಟ್ಟಂಥ ವಿಷಯವಾಗಿದೆ. ಈ ವಿಷಯಕ್ಕೆ ಸಂಬಂಧಪಟ್ಟಂತೆ ಮಾನ್ಯ ಮುಖ್ಯಮಂತ್ರಿಗಳು ಒಂದು ಹೇಳಿಕೆ ಕೊಟ್ಟಿದ್ದಾರೆ. ಮತ್ತೆ ಮಾನ್ಯ ಉಪ ಮುಖ್ಯಮಂತ್ರಿಗಳು ಒಂದು ರೀತಿಯ ಹೇಳಿಕೆ ಕೊಟ್ಟಿದ್ದಾರೆ. ಆದ್ದರಿಂದ, ಇದಕ್ಕೆ ಸಂಬಂಧಪಟ್ಟಂತೆ ಈ ರಾಜ್ಯದ ಮುಖ್ಯಮಂತ್ರಿಗಳು ನೇರವಾಗಿ ಉತ್ತರ ಕೊಡಬೇಕಾಗುತ್ತದೆ. ಅವರು ಇಲ್ಲಿಗೆ ಬಂದು ಉತ್ತರ ಕೊಟ್ಟರೆ ನಾವು ಕೇಳುತ್ತೇವೆ. ಮಾನ್ಯ ಉಪ ಮುಖ್ಯಮಂತ್ರಿಯವರಿಂದ ಉತ್ತರ ಕೇಳುವುದಕ್ಕೆ ಇವತ್ತು ನಾವು ತಯಾರಿಲ್ಲ. ಆದ್ದರಿಂದ ನಾವು ಪ್ರತಿಭಟನೆ ಮಾಡುವುದಲ್ಲದೆ ಇವತ್ತು ಸದನ ನಡೆಯುವಕ್ಕೆ ಬಿಡುವುದಿಲ್ಲ. ನಾವೆಲ್ಲರೂ ಸದನದ ಬಾವಿಯೊಳಗೆ ಹೋಗುತ್ತೇವೆ.

(ಈ ಹಂತದಲ್ಲಿ ಕಾಂಗ್ರೆಸ್ ಪಕ್ಷದ ಸದಸ್ಯರೆಲ್ಲರೂ ಸದನದ ಬಾವಿಯೊಳಗೆ ಬಂದರು)

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್ : ಸನ್ಮಾನ್ಯ ಉಪಾಧ್ಯಕ್ಷರೆ, ಸರ್ಕಾರ ಕೊಡತಕ್ಕಂಥ ಉತ್ತರವನ್ನು ಕೇಳುವಂಥ ಸಹನೆ ಕೂಡ ಇವರಲ್ಲಿ ಇಲ್ಲ........ಉತ್ತರ ಕೊಡುತ್ತೇವೆಂದರೂ ಕೂಡ ಇವರಿಗೆ ಸಹಿಸಿಕೊಳ್ಳುವುದಕ್ಕೆ ಆಗುತ್ತಿಲ್ಲ.

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ (ಉಪ ಮುಖ್ಯಮಂತ್ರಿಗಳು) : ಮಾನ್ಯ ಉಪಾಧ್ಯಕ್ಷರೆ, ಇಷ್ಟು ವರ್ಷಗಳ ಕಾಲ ಆಡಳಿತ ನಡೆಸಿದಂಥ ನಮ್ಮ ಸ್ನೇಹಿತರು, ಮುಖ್ಯಮಂತ್ರಿಗಳು ಇಲ್ಲದೆ ಇದ್ದಂಥ ಸಂದರ್ಭದಲ್ಲಿ ಇದೇ ಮನೆಯಲ್ಲಿ ಬೇರೆಯವರು ಅವರ ಪರವಾಗಿ ಉತ್ತರ ಕೊಟ್ಟಿಲ್ಲವೆ?

(ಗೊಂದಲ)

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ : ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಗಳು ನಾಳೆ ಬಂದು ಇದರ ಬಗ್ಗೆ ಉತ್ತರ ಕೊಡಲಿ.

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ : ಇದೇನೂ ಹೊಸದಾಗಿ ನಾವು ಮಾಡುತ್ತಿಲ್ಲ. ಇಲ್ಲಸಲ್ಲದ ಕುಂಟು ನೆಪವೊಡ್ಡಿಕೊಂಡು ಈ ಸದನದ ಕಾರ್ಯಕಲಾಪಗಳನ್ನು ತಡೆಯುವುದರ ಬಗ್ಗೆ ಇವರಿಗೆ ಆಸಕ್ತಿ ಇದೆಯೇ ಹೊರತು, ಉತ್ತರ ಪಡೆದು ಆ

ಸಮಸ್ಯೆಯನ್ನು ಬಗೆಹರಿಸಬೇಕೆಂಬ ಕಳಕಳಿ ಇವರಲ್ಲಿ ಇಲ್ಲ. ಇದೇ ಸದನದಲ್ಲಿ ಮಾನ್ಯ ಧರ್ಮಸಿಂಗ್‌ರವರು ಗೃಹಮಂತ್ರಿಯಾಗಿದ್ದಂಥ ಸಂದರ್ಭದಲ್ಲಿ ಅವರು ಇಲ್ಲದೇ ಇರುವಾಗ ಬೇರೆಯವರು ಉತ್ತರ ಕೊಟ್ಟಿಲ್ಲವೆ? ಸಂಬಂಧಪಟ್ಟಂಥ ಮಂತ್ರಿಗಳು ಅಥವಾ ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಡಬೇಕೆಂದು ಎಲ್ಲಿದೆ?

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಉಪ ಮುಖ್ಯಮಂತ್ರಿಗಳು ಇದರ ಬಗ್ಗೆ ಒಂದು ಹೇಳಿಕೆ ಕೊಟ್ಟಿದ್ದಾರೆ. ಮತ್ತೆ ಇದೇ ವಿಷಯಕ್ಕೆ ಸಂಬಂಧಪಟ್ಟಂತೆ ಮಾನ್ಯ ಮುಖ್ಯಮಂತ್ರಿಗಳು ಒಂದು ರೀತಿಯ ಹೇಳಿಕೆ ಕೊಟ್ಟಿದ್ದಾರೆ.

(ಗೊಂದಲ)

ಶ್ರೀ ಆರಗ ಜ್ಞಾನೇಂದ್ರ : ಇವರಿಗೆ ಕೇವಲ ಲಾಭ ಮಾತ್ರ ಬೇಕಾಗಿದೆಯೇ ಹೊರತು ಸರ್ಕಾರ ನೀಡತಕ್ಕಂಥ ಉತ್ತರ ಇವರಿಗೆ ಬೇಕಾಗಿಲ್ಲ.

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ : ಇಷ್ಟು ವರ್ಷ ಆಡಳಿತ ನಡೆಸಿದಂಥ ಕಾಂಗ್ರೆಸ್ ಪಕ್ಷಕ್ಕೆ ಶೋಭೆ ತರತಕ್ಕಂಥದ್ದು ಇದೇನು? ಮಾನ್ಯ ಮುಖ್ಯಮಂತ್ರಿಗಳು ಅನಿವಾರ್ಯ ಕಾರಣಗಳಿಂದ ದೆಹಲಿಗೆ ಹೋಗಿದ್ದಾರೆಂದು ಇವರಿಗೆ ಗೊತ್ತಿದೆ. ಅಂದರೆ ಬೆಳಿಗ್ಗೆ ನಡೆದಂಥ ಕಾರ್ಯಕಲಾಪಗಳ ಸಲಹಾ ಸಮಿತಿಯಲ್ಲಿ ಮಾನ್ಯ ಮುಖ್ಯಮಂತ್ರಿಗಳು ದೆಹಲಿಗೆ ಹೋಗುತ್ತಾರೆಂದು ತಿಳಿಸಿದ್ದಾರೆ. ಅನಿವಾರ್ಯ ಕಾರಣದಿಂದ ಮಾನ್ಯ ಮುಖ್ಯಮಂತ್ರಿಗಳು ದೆಹಲಿಗೆ ಹೋಗಿದ್ದಾರೆಂದು ಗೊತ್ತಿದ್ದರೂ ಸಹ ಈ ರೀತಿಯಾಗಿ ಕುಂಟು ನೆಪ ಮಾಡತಕ್ಕಂಥದ್ದು ನಿಮಗೆ ಶೋಭೆ ತರತಕ್ಕಂಥದ್ದಲ್ಲ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಕ್ಕೆ ಸಂಬಂಧಪಟ್ಟಂತೆ ಉತ್ತರ ಕೊಡಬೇಕೆಂದು ಒತ್ತಾಯ ಮಾಡುತ್ತಾ ನಾನು ಸಭಾತ್ಯಾಗ ಮಾಡುತ್ತೇನೆ.

(ಮಾನ್ಯ ವಾಟಾಳ್ ನಾಗರಾಜ್‌ರವರು ಸಭಾತ್ಯಾಗ ಮಾಡಿದರು)

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಮುಖ್ಯಮಂತ್ರಿಗಳು ಬೆಂಗಳೂರಿನಲ್ಲಿಲ್ಲ. ಅನಿವಾರ್ಯ ಕಾರಣಗಳ ನಿಮಿತ್ತ ಅವರು ದೆಹಲಿಗೆ ಹೋಗಿದ್ದಾರೆ.

(ಗೊಂದಲ)

ಉಪಾಧ್ಯಕ್ಷರು : ಒಂದು ನಿಮಿಷ ಇರಿ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್ : ಪ್ರತಿಪಕ್ಷದವರಿಗೆ ಉತ್ತರ ಕೇಳುವುದಕ್ಕೂ ಸಹ ಆಗುತ್ತಿಲ್ಲ. ಅಂದರೆ ಸರ್ಕಾರ ಉತ್ತರ ಕೊಡುವುದಕ್ಕೆ ತಯಾರಿದ್ದರೂ ಅವರು ಕೇಳುವುದಕ್ಕೆ ತಯಾರಿಲ್ಲ. ಮತ್ತೆ ಉತ್ತರ ಕೇಳುವುದಕ್ಕೂ ಸಹನೆ ಇಲ್ಲ. ವಿರೋಧ ಪಕ್ಷದವರು ಈ ಸದನಕ್ಕೆ ಅಗೌರವ ತೋರುತ್ತಿದ್ದಾರೆ. ಸರ್ಕಾರ ಉತ್ತರ ಕೊಡುವುದಕ್ಕೆ ತಯಾರಿದ್ದರೂ ಅವರು ಕೇಳುವುದಕ್ಕೆ ತಯಾರಿಲ್ಲ. ಆದ್ದರಿಂದ, ಅವರಿಗೆ ನಾಚಿಕೆ ಬರಬೇಕು.

(ಗೊಂದಲ)

ಶ್ರೀ ಹೆಚ್.ಡಿ. ಬಸವರಾಜ್ : ಕಾಂಗ್ರೆಸ್‌ನವರು ಅಧಿಕಾರ ಬಿಟ್ಟಿದ್ದರಿಂದ ಈ ರೀತಿಯಾಗಿ ಮಾಡುತ್ತಿದ್ದಾರೆ.

(ಗೊಂದಲ)

ಉಪಾಧ್ಯಕ್ಷರು : ಸರ್ಕಾರದಿಂದ ಉತ್ತರ ತಾನೇ ಬೇಕಾಗಿರತಕ್ಕಂಥದ್ದು? ಉತ್ತರವನ್ನು ಮುಖ್ಯಮಂತ್ರಿ ಅಥವಾ ಉಪ ಮುಖ್ಯಮಂತ್ರಿ ಕೊಟ್ಟರೇನು? ಒಟ್ಟಿನಲ್ಲಿ ಸರ್ಕಾರದ ಕಡೆಯಿಂದ ಉತ್ತರ ಬೇಕಷ್ಟೆ.

(ಗೊಂದಲ)

ಶ್ರೀ ಮಲ್ಲಿಕಾರ್ಜುನ ಖರ್ಗೆ : ಮಾನ್ಯ ವಿಶ್ವೇಶ್ವರ ಹೆಗಡೆಯವರು ಮಾತನಾಡುವಾಗ ಕಾಂಗ್ರೆಸ್ ಪಕ್ಷದವರ ಕಡೆ ಬೆಟ್ಟು ಮಾಡಿ ತೋರಿಸಿದ್ದಾರೆ. ಅವರು ಹೇಳತಕ್ಕಂಥ ಧಾಟಿ ನೋಡಿದರೆ ಅವರೇ ಪ್ರಚೋದನೆ ಮಾಡಿದ್ದಾರೆಂದು ಕಾಣುತ್ತದೆ. ಆದ್ದರಿಂದ, ನಿರ್ದಾಕ್ಷಿಣ್ಯವಾಗಿ ಮಾನ್ಯ ಮುಖ್ಯಮಂತ್ರಿಗಳೇ ಇದಕ್ಕೆ ಉತ್ತರ ಕೊಡಲಿ.

(ಗೊಂದಲ)

ಉಪಾಧ್ಯಕ್ಷರು : ಈಗ ಸದನವನ್ನು ನಾಳೆ ಬೆಳಿಗ್ಗೆ 10.00 ಗಂಟೆಯವರೆಗೆ ಮುಂದೂಡಲಾಗಿದೆ.

(ಸದನವು ಸಂಜೆ 6.37 ಗಂಟೆಗೆ ಮುಂದೂಡಲ್ಪಟ್ಟು ಪುನಃ ದಿನಾಂಕ 4ನೇ ಏಪ್ರಿಲ್ 2006 ರಂದು ಬೆಳಿಗ್ಗೆ 10.00 ಗಂಟೆಗೆ ಸೇರಲು ನಿಶ್ಚಯಿಸಿತು.)